ಡಿ. ವಿ. ಗುಂಡಪ್ಪ

4



ಬಾಳಿಗೊಂದು ನಂಬಿಕೆ

ಮುಖಪುಟ

ಬಾಳಿಗೊಂದು ನಂಬಿಕೆ

ಡಾ. ಡಿ.ವಿ. ಗುಂಡಪ್ಪ

Published by the **Gokhale Institute of Public Affairs** on the occasion of its Platinum Jubilee with the financial assistance from **The Director, Kannada and Culture Department, Government of Karnataka** and **The Mythic Society, Bengaluru.**

e-Book
004v1.0.0
Date: October 10, 2018
ISBN: 9788193781807
Created by: Sriranga Digital Software Technologies Private Limited
srirangadigital.com

ಜೀವನ್ ಭದ್ರಾಣಿ ಪಶ್ಯತಿ ಏತಿ ಜೀವಂತಮಾನಂದೋ
ನರಂ ವರ್ಷಶತಾದಪಿ ॥

–ಆಂಜನೇಯ ವಾಕ್ಯ
ಶ್ರೀಮದ್ರಾಮಾಯಣ,
ಸುಂದರಕಾಂಡ ೧೩–೪೭, ೩೪–೬

ದೈವವೆಂದದಿರದಿರು; ನಿನಗದೇಂ ಪಗೆಯಲ್ಲ;
ಸಾವಿಂದ ಹೊಸ ತೊಡಿಗೆ; ಬಾಳ ಮುಗಿವಲ್ಲ;
ಪೌರುಷದ ಯತ್ನದಿಂದೊಳಿತ ಸಾಧಿಸಲಹುದು;
ಮೀರಿ ಬಹ ಕೇಡ ಧೈರ್ಯದೆ ಸಹಿಸಲಹುದು.

–ಡಯೋಜೆನೀಸ್

ತಿರುಳ್ನುಡಿ

ಕೇದಾರಗೌಳ ರಾಗ—ಅಟತಾಳ

ತನು ನಿನ್ನದು ಜೀವನ ನಿನ್ನದು—ರಂಗ
ಅನುದಿನದಲಿ ಬಹ ಸುಖದುಃಖ ನಿನ್ನದಯ್ಯ ॥

ಸವಿನುಡಿ ವೇದ—ಪುರಾಣ ಶಾಸ್ತ್ರಂಗಳ ।
ಕಿವಿಯಿಂದ ಕೇಳುವ ಕಥೆ ನಿನ್ನದು ॥
ನವಮೋಹನಾಂಗೇರ ರೂಪವ ಕಣ್ಣಿಂದ ।
ಎವೆಯಿಕ್ಕದೆ ನೋಡುವ ನೋಟ ನಿನ್ನದಯ್ಯ ॥ ೧ ॥

ಒಡಗೂಡಿ ಗಂಧ ಕಸ್ತುರಿ ಪರಿಮಳಂಗಳ ।
ಬಿಡದೆ ಲೇಪಿಸಿಕೊಂಬೊಡಲು ನಿನ್ನದು ॥
ಷಡುರಸದನ್ನಕೆ ನಲಿದಾಡುವ ಜಿಹ್ವೆ ॥
ಕಡುರುಚಿಗೊಂಬ ಆ ರುಚಿ ನಿನ್ನದಯ್ಯ ॥ ೨ ॥

ಮಾಯಾಪಾಶದ ಬಲೆಯೊಳು ಸಿಲುಕಿರುವಂಥ ।
ಕಾಯಪಂಚೇಂದ್ರಿಯಂಗಳು ನಿನ್ನವು ॥
ಮಾಯಾರಹಿತ ಕಾಗಿನೆಲೆಯಾದಿಕೇಶವ ।
ರಾಯ ನೀನಲ್ಲದೆ ನರನು ಸ್ವತಂತ್ರನೆ ॥ ೩ ॥

–ಕನಕದಾಸರು

ಮುನ್ನುಡಿ

ಎರಡನೆಯ ಆವೃತ್ತಿ

ನನ್ನ ಸ್ವಂತ ನಂಬಿಕೆಯನ್ನು ಒಂದು ಪ್ರಬಂಧದಲ್ಲಿ ಸಮಗ್ರವಾಗಿಯೂ ಕಾರಣ ವಿವರಣೆಯೊಡನೆಯೂ ರೂಪಗೊಳಿಸಬೇಕೆಂಬ ಆಲೋಚನೆ ಬಹುದಿನಗಳಿಂದ ನನ್ನ ಮನಸ್ಸಿನಲ್ಲಿ ಇತ್ತು. ಈ ಕೆಲಸವನ್ನು ಈ ಸಣ್ಣ ಪುಸ್ತಕದಲ್ಲಿ ತಕ್ಕಮಟ್ಟಿಗೆ ಪ್ರಯತ್ನಿಸಿದೆ.

ಇದರಲ್ಲಿಯ ಅಂಶಗಳನ್ನು ಹಿಂದೆ ಆಗಾಗ ನಾಲ್ಕಾರು ಊರುಗಳಲ್ಲಿ ಕೊಟ್ಟ ಉಪನ್ಯಾಸಗಳಲ್ಲಿ ನಿರೂಪಿಸಿದ್ದಾಗಿದೆ. ಕೇಳಿದವರು ವಿಷಯದಲ್ಲಿ ಕುತೂಹಲವನ್ನು ತೋರಿಸಿ ಪ್ರೋತ್ಸಾಹಿಸಿದ್ದಾರೆ.

ಶ್ರೀಮಾನ್ ಎಸ್. ವಿ. ಶ್ರೀನಿವಾಸರಾಯರವರು ಈ ಲೇಖನವನ್ನು ಪರಿಷ್ಕಾರಗೊಳಿಸುವುದರಲ್ಲಿಯೂ ಪ್ರಕಟಪಡಿಸುವುದರಲ್ಲಿಯೂ ಬಹುವಾಗಿ ಸಹಾಯ ಮಾಡಿದ್ದಾರೆ.

ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಈ ಪುಸ್ತಕವನ್ನು ಮೊದಲನೆಯ ಸಲ ಪ್ರಕಟಮಾಡಿ ನನಗೆ ಮನ್ನಣೆ ತೋರಿರುವುದಲ್ಲದೆ, ನನ್ನ ಮೂಲೋದ್ದೇಶಕ್ಕೆ ಸಾಧನ ಸಹಾಯವನ್ನು ಒದಗಿಸಿದೆ. ಆ ಸಮಿತಿಯ ಅಧಿಕಾರಿಗಳ ಉಪಕಾರಕ್ಕಾಗಿ ಅವರನ್ನು ಮನಃಪೂರ್ವಕವಾಗಿ ವಂದಿಸುತ್ತೇನೆ.

ಇದನ್ನು ಸಹಾನುಭೂತಿಯಿಂದ ಓದಿನೋಡಿ, ತಮಗೆ ಇದರಲ್ಲಿ ಕಂಡುಬಂದ ಲೋಪಗಳನ್ನು ನನಗೆ ತಿಳಿಯಪಡಿಸಿ, ಇದರ ತಿದ್ದುಪಾಟಿಗೆ ನೆರವಾಗುವ ವಾಚಕರ ವಿಷಯದಲ್ಲಿ ನಾನು ಕೃತಜ್ಞತೆಯಿಂದಿರಲುಳ್ಳವನು.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಬಸವನಗುಡಿ, ಬೆಂಗಳೂರು–೪

–ಡಿ.ವಿ.ಜಿ.

ಮೂರನೆಯ ಆವೃತ್ತಿ

ಈ ಪುಸ್ತಕದ ಎರಡನೆಯ ಮುದ್ರಣದ ಪ್ರತಿಗಳು ಮುಗಿದುಹೋಗಿ ೭–೮ ವರ್ಷವಾಗಿದೆ. ಇಷ್ಟು ದಿವಸವೂ ಪುಸ್ತಕಕ್ಕಾಗಿ ಹತ್ತಾರು ಕೋರಿಕೆಗಳು ಬಂದಿವೆ. ಅಂಥಾ ಹಿತಕರ್ತರಿಗೆ ಈವರೆಗೂ ಪುಸ್ತಕ ದೊರಕಿಸಲು ಆಗದೆ ಹೋದದ್ದಕ್ಕಾಗಿ ಅವರ ಕ್ಷಮೆ ಬೇಡುತ್ತೇನೆ.

ಮೈಸೂರು ಸರಕಾರದ ವಿದ್ಯಾ ಇಲಾಖೆ ಈ ಪುಸ್ತಕದ ಕೆಲವು ಭಾಗಗಳನ್ನು ತನ್ನ ಪಠ್ಯಪುಸ್ತಕಗಳಿಗಾಗಿ ಆರಿಸಿಕೊಂಡು ಮನ್ನಣೆ ತೋರಿದೆ. ತುಂಬಾ ವಂದನೆ.

ಕನ್ನಡ ಸಾಹಿತ್ಯ ಪರಿಷತ್ತು ಇದನ್ನು ತನ್ನ ೧೯೬೦–೬೧ರ ಸಾಹಿತ್ಯ ಪರೀಕ್ಷೆಗಾಗಿ ಪಠ್ಯಪುಸ್ತಕವೆಂದು ಗೊತ್ತುಮಾಡಿ ಪ್ರೋತ್ಸಾಹ ಕೊಟ್ಟಿದೆ. ಬಹಳವಾಗಿ ವಂದನೆ.

ಮೊದಲ ಮುದ್ರಣವನ್ನು ನೋಡಿದ ಹಿತಚಿಂತಕರು ಕೆಲವರು ಮೆಚ್ಚಿಕೆ ತೋರಿ ಸಲಹೆಕೊಟ್ಟರು. ಅವರಲ್ಲಿ ಬೆಂಗಳೂರು ನ್ಯಾಷನಲ್ ಕಾಲೇಜಿನ ಅಧ್ಯಕ್ಷರಾಗಿದ್ದ ನನ್ನ ಮಾನ್ಯಮಿತ್ರರು ಶ್ರೀಮಾನ್ ಕೆ. ಸಂಪದ್ಗಿರಿರಾಯರು ಒಬ್ಬರು. ಈ ಸಾರಿ ಇಲ್ಲಿ ಪುರುಷಾರ್ಥ ವಿವರಣೆಯನ್ನು ಸೇರಿಸಿರುವುದು ಆ ವಿದ್ವನ್ಮಿತ್ರರ ಸೂಚನೆಯಂತೆ.

ಈ ನೂತನ ಮುದ್ರಣಾವಕಾಶದಲ್ಲಿ ಇನ್ನು ಕೆಲವು ಹೊಸ ವಿಷಯಗಳನ್ನು ಸೇರಿಸುವುದೂ ವಾಕ್ಯರಚನೆಯನ್ನು ಪರಿಷ್ಕಾರಗೊಳಿಸುವುದೂ ಸಾಧ್ಯವಾಯಿತು.

ಈ ಗ್ರಂಥ ಪ್ರಾರಂಭವಾದದ್ದು ಬಾಯಿಂದ ಹೇಳಿದ ಉಪನ್ಯಾಸವಾಗಿ. ಆದದ್ದರಿಂದ ಒಂದೆರಡಂಶಗಳು ಪುನರುಕ್ತವಾಗಿ ಬಂದಿವೆ. ಉದ್ದೇಶದಲ್ಲಿರುವ ವಾಚಕವೃಂದವು ಪಂಡಿತೇತರವಾದ ಸರ್ವಸಾಮಾನ್ಯ ಜನವಾದದ್ದರಿಂದ, ವಿಷಯದ ಮುಖ್ಯತೆಯನ್ನು ಜ್ಞಾಪಕಕ್ಕೆ ತರುವುದಕ್ಕಾಗಿಯೂ ಒತ್ತಿ ತಿಳಿಸುವುದಕ್ಕಾಗಿಯೂ ಪುನರುಕ್ತಿ ಕೊಂಚಮಟ್ಟಿಗೆ ಅವಶ್ಯವೇ ಆಗಿದೆ.

ಈ ಲೇಖನದಲ್ಲಿ ಪ್ರಗತಿ, ಸಂಸ್ಕೃತಿ ಮೊದಲಾದ ದೊಡ್ಡ ವಿಚಾರಗಳನ್ನು ಕುರಿತು ಮಾತು ಬಂದಿದೆ. ಆ ಬಗ್ಗೆ ಹೆಚ್ಚು ವಿವರಣೆ ಬಯಸುವವರು ಈ ಲೇಖಕನ "ಸಂಸ್ಕೃತಿ", "ರಾಜ್ಯಶಾಸ್ತ್ರ", "ಸಾಹಿತ್ಯಶಕ್ತಿ" ಮೊದಲಾದ ಗ್ರಂಥಗಳನ್ನು ನೋಡಬಹುದೆಂದು ಬಿನ್ನಯಿಸುತ್ತೇನೆ. ಅವು ಮೈಸೂರಿನ ಕಾವ್ಯಾಲಯದ ಪ್ರಕಟನೆಗಳು.

ಈ ಲೇಖನವು ಯಾವ ಅಂಶದಲ್ಲಾದರೂ ತಕ್ಕಷ್ಟು ವಿಶದವಾಗಿಲ್ಲವೆಂದಾಗಲಿ, ಕೊರತೆಬಿದ್ದಿದೆಯೆಂದಾಗಲಿ, ಇದರಲ್ಲಿ ಬೇರೆ ಯಾವುದಾದರೂ ತಿದ್ದುಪಾಟು ಬೇಕಾಗಿದೆಯೆಂದಾಗಲಿ ವಾಚಕ ಮಹನೀಯರು ತಿಳಿಯಪಡಿಸಿದಲ್ಲಿ ಅಂಥಾ ಉತ್ತಮಕಾರಕ ಸೂಚನೆಗಳನ್ನು ಕೃತಜ್ಞತೆಯಿಂದ ಅಂಗೀಕರಿಸುತ್ತೇನೆ.

ಶಾರ್ವರಿ ಸಂ ॥ ದೀಪಾವಳಿ
೨೦–೧೦–೧೯೬೦

–ಡಿ.ವಿ.ಜಿ.

ನಾಲ್ಕನೆಯ ಆವೃತ್ತಿ

ಈ ನಾಲ್ಕನೆಯ ಮುದ್ರಣದಲ್ಲಿ ಗ್ರಂಥ ಎಲ್ಲೂ ಬದಲಾವಣೆಯಾಗಿಲ್ಲ. ಕಂಡು ಬಂದ ಅಕ್ಷರದೋಷಗಳನ್ನು ಈಗ ತಿದ್ದಿದೆ.

ಕನ್ನಡ ಮಹಾಜನರು ಈ ಸಣ್ಣ ಗ್ರಂಥದ ವಿಷಯದಲ್ಲಿ ತುಂಬಾ ಆದರಣೆ ತೋರಿದ್ದಾರೆ. ಹಳ್ಳಿಯ ಪ್ರಾಂತಗಳ ಜನರು ಅನೇಕರು ಬಂದು ತಮ್ಮ ಒಪ್ಪಿತವನ್ನು ನನಗೆ ತಿಳಿಯಪಡಿಸಿದ್ದಾರೆ. ಅಂಥವರಿಗೆಲ್ಲ ನನ್ನ ವಂದನೆ.

ಒಬ್ಬ ಲೇಖಕನ ಅಭಿಪ್ರಾಯ ಉದ್ದೇಶಗಳೇ ಅವನ ಜೀವನದ ಉಸಿರು. ಅವನ ಪುಸ್ತಕದ ಪ್ರಚಾರ ಹೆಚ್ಚಿದಷ್ಟು ಅವನಿಗೆ ಆಯುರ್ವೃದ್ಧಿ. ನನ್ನ ಅಂತರಂಗದ ತತ್ತ್ವಗಳನ್ನೂ ಆಶೆಗಳನ್ನೂ ಈ ಗ್ರಂಥದಲ್ಲಿ ಸಂಗ್ರಹವಾಗಿ ಹೇಳಲು ಪ್ರಯತ್ನಿಸಿದ್ದೇನೆ. ಆದದ್ದರಿಂದ ಈ ಪುಸ್ತಕದ ಪ್ರಚಾರದಲ್ಲಿ ಸಹಾಯ ಮಾಡುವವರಿಗೆಲ್ಲ ನಾನು ಅತ್ಯಂತ ಋಣಿಯಾಗಿರುತ್ತೇನೆ.

ಈ ಸಾರಿಯ ಪ್ರಕಟನೆಯ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಮಿತ್ರ ಚಿದಂಬರಂ ಅವರಿಗೆ ನನ್ನ ಧನ್ಯವಾದಗಳು.

ಇಂತು ಸರ್ವಂ ಶಿವಂ

ಫೆಬ್ರುವರಿ ೧೯೬೭

–ಡಿ.ವಿ.ಜಿ.

ಬದುಕು ಏಕೆ?

ನಾವು ಬದುಕುವುದು ಏತಕ್ಕೋಸ್ಕರ? ಸಾಯಲಾರದಕ್ಕೋಸ್ಕರವೆ? ಅಥವಾ ಬೇರೆ ಯಾವುದಾದರೂ ಉದ್ದೇಶವುಂಟೋ? ಕನಕದಾಸರು ಹೀಗೆ ಹೇಳಿದ್ದಾರೆ:

> ಎಲ್ಲಾರ್ ಮಾಡುವ ಕೆಲಸ–ಹೊಟ್ಟೆಗಾಗಿ ।
> ಗೇಣು ಬಟ್ಟೆಗಾಗಿ–ಮುದ್ದೆ ಹಿಟ್ಟಿಗಾಗಿ ॥ ಪಲ್ಲವಿ ॥
> ಕೊಟ್ಟಣವ ಕುಟ್ಟಿಕೊಂಡು–ಕಟ್ಟಿಗೆಯ ಹೊತ್ತುಕೊಂಡು ।
> ಕಷ್ಟಪಾಡು ಪಡುವುದು–ಏತಕಾಗಿ? ।
> ಹೊಟ್ಟೆಗಾಗಿ–ಗೇಣು ಬಟ್ಟೆಗಾಗಿ ॥
> ಬೆಲ್ಲದಂತೆ ಮಾತನಾಡಿ–ಎಲ್ಲರನ್ನು ಮರುಳು ಮಾಡಿ ।
> ಸುಳ್ಳು ಬೊಗಳಿ ಬಾಳುವುದು–ಏತಕಾಗಿ? ।
> ಹೊಟ್ಟೆಗಾಗಿ–ಗೇಣು ಬಟ್ಟೆಗಾಗಿ ॥
> ಸಂನ್ಯಾಸಿ ಜಂಗಮ ಜೋಗಿ–ಜಟ್ಟಿ ಮೊಂಡ ಬೈರಾಗಿ ।
> ನಾನಾ ವೇಷಗಳೆಲ್ಲ–ಏತಕಾಗಿ? ।
> ಹೊಟ್ಟೆಗಾಗಿ–ಗೇಣು ಬಟ್ಟೆಗಾಗಿ ॥

ಇಷ್ಟೇನೆ ಜೀವನದ ಮರ್ಮ?

ನಮ್ಮ ಮನೆಯಲ್ಲಿರುವ ದನ, ಕಾವಲುನಾಯಿ, ಬಿಲದ ಇಲಿ, ಉಗ್ರಾಣದ ಬೆಕ್ಕು, ಮುದ್ದಿನ ಗಿಣಿ–ಇವೆಲ್ಲ ಪಡುವ ಪಾಡೂ ಅಷ್ಟೇ ಅಲ್ಲವೆ?

> ಹೊಟ್ಟೆಗಾಗಿ–ಇಷ್ಟು ರೊಟ್ಟಿಗಾಗಿ ॥

ಕಾಡಿನ ಹುಲಿ ಸಿಂಹಗಳೂ, ಹುತ್ತದಲ್ಲಿಯ ಹಾವು ಚೇಳುಗಳೂ, ಆಕಾಶದ ಹಕ್ಕಿ ಹದ್ದುಗಳೂ, ಕೊಳಕಿನ ನೊಣ ಸೊಳ್ಳೆಗಳೂ–ಎಲ್ಲ ಜಂತುಗಳು ಬದುಕು ಮಾಡುವುದು–

> ಹೊಟ್ಟೆಗಾಗಿ–ಗೂಡುಗಟ್ಟಿಗಾಗಿ ।
> ಸವಿ ತುತ್ತಿಗಾಗಿ–ಹಾಸು ಮೆತ್ತೆಗಾಗಿ

ಊಟನಿದ್ದೆಗಳ ಚಿಂತೆ, ಸಂಗಾತಿಗಾಗಿ ಚಿಂತೆ, ಪ್ರಾಣಭಯವನ್ನು ತಪ್ಪಿಸಿಕೊಳ್ಳುವ ಚಿಂತೆ–ಇವು ಎಲ್ಲ ಪ್ರಾಣಿಗಳಿಗೂ ಉಂಟಾದುವೇ. ಅಂಥ ಚಿಂತೆಗಳು ಸ್ವಭಾವದಿಂದಲೇ ಉಂಟಾಗತಕ್ಕವು. ಮನುಷ್ಯನ ಪಾಡು ಅಷ್ಟು ಮಾತ್ರವೇಯೋ, ಅಥವಾ ಅವನು ಪಶುಪಕ್ಷಿ ಕ್ರಿಮಿಕೀಟಗಳಿಗಿಂತ ಯಾವ ವಿಷಯದಲ್ಲಾದರೂ ಹೆಚ್ಚಾದವನೋ? ಅವನ ಪಾಲಿಗೆ ಅನ್ನ ವಸತಿಗಳಿಗಿಂತ ಮೇಲಾದ ಗುರಿಯೇನಾದರೂ ಉಂಟೋ?

ನಮ್ಮ ಸುತ್ತಮುತ್ತಲಿರುವ ಜನವನ್ನು ನೋಡಿದರೆ ಅವರಲ್ಲಿ ನೂರರ ಪೈಕಿ ಐವತ್ತು ಮಂದಿಗೆ ಇಂಥ ಪ್ರಶ್ನೆ ಮನಸ್ಸಿಗೆ ಬಂದಿರುವ ಹಾಗೆಯೇ ತೋರುವುದಿಲ್ಲ. ಅವರು ಇರುವೆಯಂತೆಯೋ ಕತ್ತೆಯಂತೆಯೋ ತಿಗಣೆಯಂತೆಯೋ ಆನೆಯಂತೆಯೋ ಅನುಗಾಲವೂ ದುಡಿದು, ತಮ್ಮ ತಮ್ಮ ಬಾಳುವೆ ನಡಸಿಕೊಂಡು, ಸದ್ದಿಲ್ಲದೆ ಸಾಗಿ, ಕಡೆಗೆ ಮಣ್ಣು ಸೇರುತ್ತಾರೆ. ಅದೇ ಸರಿಯೆ? ಆ ಹೊತ್ತಿನ ಊಟ, ಆ ರಾತ್ರಿಯ ನಿದ್ದೆ, ಅಂದಂದಿನ ಚಾಕರಿ, ಅಂದಂದಿನ ಪೇಚಾಟ, ಮಾರನೆಯ ದಿನ ಬಂದಾಗ ಅದರ ಯೋಚನೆ– ಹೀಗಿರುವುದೇ ಸರಿಯೆ? ಅದೇ ಸರಿಯೆ? ಅಥವಾ ಹೊಟ್ಟೆಯ ಪಾಡಿನ ಯೋಚನೆಗಿಂತ ಮೇಲ್ಪಟ್ಟ ವಿಚಾರವೇನಾದರೂ ಮನುಷ್ಯನ ಪಾಲಿಗೆ ಉಂಟೋ?

ದೊಡ್ಡ ಗುರಿ :

ಉಂಟೆನ್ನುತ್ತಾರೆ ದಾಸರು:

> ಉನ್ನತದ ನೆಲೆಯಾದಿ–ಕೇಶವನ ಧ್ಯಾನವನ್ನು ।
> ಮನಮುಟ್ಟಿ ಮಾಡುವುದು–ಮುಕ್ತಿಗಾಗಿ ॥
>
> ಭಕ್ತಿಗಾಗಿ–ಜೀವತೃಪ್ತಿಗಾಗಿ ।
> ಆತ್ಮಶಕ್ತಿಗಾಗಿ–ಆನಂದಕಾಗಿ ॥

ಈ ಉದ್ದೇಶಗಳು ಹೊಟ್ಟೆಬಟ್ಟೆಗಳ ಚಿಂತೆಗಿಂತ ಬೇರೆಯಾದವು; ಆದರೂ ಆ ಚಿಂತೆಗೆ ಜೊತೆಗೂಡಿ ಇರಬೇಕಾದವು. ದೈವ, ಆತ್ಮ, ಭಕ್ತಿ, ಆನಂದ–ಇವು ಮನುಷ್ಯನಿಗೆ ಮಾತ್ರ ಸೇರಿರುವ ವಿಚಾರಗಳು; ಇತರ ಪ್ರಾಣಿಗಳಿಗೆ ಅವು ಇಲ್ಲ. ಮನುಷ್ಯನ ಮನುಷ್ಯತ್ವ ಆ ಉನ್ನತವಾದ ಉದ್ದೇಶಗಳಿಂದ.

ಕನಕದಾಸರು ಅದೃಷ್ಟವಂತರು. ಅವರ ಹೊಟ್ಟೆ ಚಿಕ್ಕದಾಗಿತ್ತು. ಬೇಸಾಯವೋ ಬೇಟೆಯೋ ಆ ಸಣ್ಣ ಹೊಟ್ಟೆಯನ್ನು ಸುಲಭವಾಗಿ ತುಂಬುತ್ತಿತ್ತು. ಅವರು ಸಂಗೀತ ಸಾಹಿತ್ಯಗಳನ್ನು ಕಲಿತಿದ್ದವರು; ಕೇಶವನನ್ನು ಕಂಡುಕೊಂಡಿದ್ದವರು. ಆದದ್ದರಿಂದ ಅವರು ಹಾಡಿಕೊಂಡು ದೈವಭಜನೆಯಿಂದ ಆನಂದಪಡಬಹುದಾಗಿತ್ತು. ನಮ್ಮ ಪಾಡು ಹಾಗಾದೀತೋ? ಅವರಿಗೆ ಕೇಶವನಲ್ಲಿ ನಂಬಿಕೆ ಇದ್ದಂತೆ ನಮಗೆ ಯಾವುದರಲ್ಲಾದರೂ ನಂಬಿಕೆ ಉಂಟೋ? ಅವರಿಗೆ ಧ್ಯಾನಾನಂದ ಗುರಿಯಾಗಿದ್ದಂತೆ ನಮಗೆ ಗುರಿಯೇನಾದರೂ ಉಂಟೋ? ಗುರಿ ಎಂದರೆ ಒಳ್ಳೆಯದರ ಒಂದು ರೂಪ.

ಅವನವನ ಗುರಿ ಅವನವನಿಗೆ :

ಪ್ರಪಂಚದಲ್ಲಿ ಲಕ್ಷ ಕೋಟಿಗಟ್ಟಲೆ ಮನುಷ್ಯರಿದ್ದಾರಲ್ಲವೆ? ಅವರಲ್ಲಿ ಒಬ್ಬನಂತೆ ಇನ್ನೊಬ್ಬನಿಲ್ಲ. ಇದು ಹೊರನೋಟಕ್ಕೆ ಮಾತ್ರವೇ ಅಲ್ಲ, ಒಳಗುಣದಲ್ಲಿಯೂ ಹಾಗೆಯೇ. ದೇಹದ ಅಂಗಾಂಗಗಳ ಹಂಚಿಕೆ ಎಲ್ಲರಿಗೂ ಒಂದೇ ಸಮವೆಂದು ತೋರಿದರೂ, ಅಂಗದ ಆಕಾರ ರೇಖೆಯಲ್ಲಿ ಒಬ್ಬನಿಗೂ ಇನ್ನೊಬ್ಬನಿಗೂ ಭೇದವಿರುತ್ತದೆ. ಆದದ್ದರಿಂದಲೇ ನಾವು ಒಬ್ಬ ವ್ಯಕ್ತಿಯನ್ನು ಕಂಡೊಡನೆಯೆ ಅವನು ಇಂಥವನೆಂದು

ಗುರುತು ಕಾಣಲು ಆಗುತ್ತದೆ. ಮನುಷ್ಯ ಕಣ್ಣೆದುರಿಗಿಲ್ಲದಿದ್ದರೂ ಅವನ ಧ್ವನಿಯಿಂದಲೇ ಗುರುತು ಹಿಡಿಯುತ್ತೇವೆ. ದೂರದಿಂದ ಕಾಣಿಸಿದ ನಡಿಗೆಯಿಂದಲೇ ಇಂಥವನೆಂದು ಊಹಿಸುತ್ತೇವೆ. ಇಂಥಾ ತಿಳಿವಳಿಕೆಗೆ ಸಹಾಯವಾದದ್ದೂ ಜನರ ಲಕ್ಷಣ ವ್ಯತ್ಯಾಸ. ಇಂಥ ವ್ಯಕ್ತಿಭೇದಗಳು ಆಕಾರದಲ್ಲಿ ಮಾತ್ರವೇ ಅಲ್ಲ, ಶಕ್ತಿಸಾಮರ್ಥ್ಯಗಳಲ್ಲೂ ಇರುತ್ತವೆ. ಒಬ್ಬನ ಕಣ್ಣು ಚುರುಕು; ಇನ್ನೊಬ್ಬನದು ಮಂದ. ಒಬ್ಬನ ಕಿವಿ ನವಿರು; ಮತ್ತೊಬ್ಬನ ನಾಲಗೆ ವೇಗ. ಈ ಶಕ್ತಿಭೇದಗಳ ಜೊತೆಗೆ ಗುಣಭೇದಗಳು ಇರುತ್ತವೆ. ಒಬ್ಬನು ಕೋಪಿಷ್ಟ; ಇನ್ನೊಬ್ಬನು ತಾಳ್ಮೆವಂತ; ಒಬ್ಬನದು ಕಟ್ಟುನಿಟ್ಟು; ಇನ್ನೊಬ್ಬನದು ಸ್ನೇಹ ಸಲುಗೆ. ಒಬ್ಬನಿಗೆ ಖಾರ ಇಷ್ಟ; ಇನ್ನೊಬ್ಬನಿಗೆ ಸಿಹಿ ಇಷ್ಟ. ಇವೆಲ್ಲ ದೇಹದೊಳಗಣ ಮತ್ತು ಮನಸ್ಸಿನೊಳಗಣ ಗುಣಭೇದಗಳು. ಹಾಗೆಯೇ ಸಂದರ್ಭಗಳೂ ಒಬ್ಬೊಬ್ಬ ಮನುಷ್ಯನದು ಒಂದೊಂದು ರೀತಿಯಿರುತ್ತವೆ. ಒಬ್ಬನದು ದೊಡ್ಡ ಕುಟುಂಬ; ಒಬ್ಬನದು ಸಣ್ಣದು. ಒಬ್ಬನಿಗೆ ಪಿತ್ರಾರ್ಜಿತ ಚೆನ್ನಾಗಿರುತ್ತದೆ; ಇನ್ನೊಬ್ಬನು ಕಡುಬಡವ. ಒಬ್ಬನ ಮನೆಯ ಜನರು ದೃಢಕಾಯರು, ಇನ್ನೊಬ್ಬನವರು ರೋಗಿಷ್ಟರು.

ಹೀಗೆ ರೂಪರೇಖೆಗಳಲ್ಲೂ ಗುಣಶಕ್ತಿಗಳಲ್ಲೂ ಸಂದರ್ಭಸಮಾಚಾರಗಳಲ್ಲೂ ಮನುಷ್ಯ ಮನುಷ್ಯರಿಗೆ ಕೊಂಚಮಟ್ಟಿಗೆ ಹೋಲಿಕೆಯಿರುವುದರ ಜೊತೆಗೆ ಅಷ್ಟಿಷ್ಟು ವ್ಯತ್ಯಾಸವೂ ಇರುತ್ತದೆ. ಆದದ್ದರಿಂದ ಪ್ರತಿಯೊಬ್ಬನೂ ತನ್ನ ಬಾಳು ಹೇಗೆ ನಡೆಯಬೇಕೆಂಬುದನ್ನು ಬಹುಮಟ್ಟಿಗೆ ತಾನೇ ಗೊತ್ತುಮಾಡಿಕೊಳ್ಳಬೇಕಾಗಿದೆ. ಒಂದೇ ಗುರಿ, ಒಂದೇ ದಾರಿ, ಎಲ್ಲರಿಗೂ ಆಗಲಾರದು. ಕನಕದಾಸನಿಗೆ ಬಂದಿದ್ದ ನಂಬಿಕೆ ಕಬ್ಬಿಣದ ದಾಸನಿಗೆ ಬಾರದೆ ಹೋಗಬಹುದು. ಕನಕನಾಯಕನು ಕಂಡ ಗುರಿ ಕಲ್ಲುನಾಯಕನ ಕಣ್ಣಿಗೆ ಕಾಣಬಾರದೆ ಇರಬಹುದು. ತನ್ನ ಕಣ್ಣಿನಂತೆ ತನ್ನ ಗುರಿ; ತನ್ನ ಕಾಲಿನಂತೆ ತನ್ನ ದಾರಿ.

ತನಗೆ ತಕ್ಕದ್ದೇನೆಂಬುದನ್ನು ಪ್ರತಿಯೊಬ್ಬನೂ ತನ್ನಷ್ಟಕ್ಕೆ ತಾನು ತಿಳಿದುಕೊಳ್ಳಬೇಕೆಂದರೆ, ಅವನಿಗೆ ಲೋಕರೂಢಿಯಿಂದಲೂ ಗುರುವಿನಿಂದಲೂ ಗ್ರಂಥದಿಂದಲೂ ಆ ತಿಳಿವಳಿಕೆ ಬರಲಾರದೆ? –ಎಂದು ಕೇಳಬಹುದು. ಅದಕ್ಕೆ ಉತ್ತರ ಹೀಗೆ: ಲೋಕದ ರೂಢಿಯೂ ಗುರುವೂ ಗ್ರಂಥವೂ ಅಂಗಡಿಯ ಹಾಗೆ. ಜವಳಿ ಅಂಗಡಿಯಲ್ಲಿ ನೂರು ತರದ ಬಟ್ಟೆಯಿರುತ್ತದೆ: ಹತ್ತಿಯದು, ರೇಷ್ಮೆಯದು, ತುಪ್ಪಟದ್ದು, ಬಿಳಿಯದು, ಬಣ್ಣದ್ದು ಮೊದಲಾಗಿ. ನಾವು ನಮ್ಮ ಜೇಬನ್ನೂ ಹವಾಮಾನವನ್ನೂ ಕಣ್ಣಿನ ಇಂಪನ್ನೂ ನೋಡಿಕೊಂಡು, ಆ ಬಟ್ಟೆಗಳ ರಾಶಿಯಿಂದ ಒಂದೆರಡು ತುಂಡನ್ನು ಆರಿಸಿಕೊಳ್ಳುತ್ತೇವೆ. ಪಲಸರಕು ಮಳಿಗೆಯಲ್ಲಿ ಅಕ್ಕಿ, ರವೆ, ಬೆಲ್ಲ, ಸಕ್ಕರೆ, ತೊಗರಿ, ಅವರೆ–ಹೀಗೆ ನೂರು ಸಾಮಾನಿರುತ್ತದೆ. ನಾವು ಮನೆಯ ಜನಸಂಖ್ಯೆ, ನಮ್ಮ ಥೈಲಿಯ ಭಾರ, ನಮ್ಮ ನಾಲಗೆಯೊಪ್ಪಿತ–ಇದನ್ನೆಲ್ಲ ಆಲೋಚಿಸಿಕೊಂಡು ವ್ಯಾಪಾರ ಮಾಡುತ್ತೇವೆ. ಹಾಗೆಯೇ ನಮ್ಮ ಸ್ವಭಾವ, ನಮ್ಮ ಸಂದರ್ಭ–ಇವೆರಡನ್ನೂ ನಾವು ಕಂಡುಕೊಂಡು ನಮಗೆ ತಕ್ಕ ಗುರಿ ಯಾವುದು, ತಕ್ಕ ದಾರಿ ಯಾವುದು ಎಂಬುದನ್ನು ನಾವೇ ಗೊತ್ತುಮಾಡಿಕೊಳ್ಳಬೇಕು. ಲೋಕರೂಢಿಯೂ ಗ್ರಂಥವೂ ಗುರೂಪದೇಶವೂ ಕಚ್ಚಾಸಾಮಾಗ್ರಿ, ಅಷ್ಟೇ! ದಾರಿ ನಡೆಯುವವನಿಗೆ ಕೈಮರ ಹೇಗೋ ಹಾಗೆ ಅವು ನಮಗೆ ಸಹಾಯ ಮಾಡುತ್ತವೆ. ಆದರೆ ನೋಡುವ ಕಣ್ಣು ನಡೆಯುವ ಕಾಲೂ ನಮ್ಮವು ತಾನೇ?

ಗುರಿ ಎಂಬುದು ಕ್ರಮಕ್ರಮವಾಗಿ ಬೆಳೆಯುತ್ತದೆ. ನಾವು ಮನೆಯಲ್ಲಿರುವಾಗ ಬೆಟ್ಟದ ಪಾದ ಗುರಿ; ಆ ಪಾದವನ್ನು ಮುಟ್ಟಿದ ಮೇಲೆ ಶಿಖರ ಗುರಿ; ಶಿಖರಕ್ಕೇರಿದ ಮೇಲೆ, ಅಲ್ಲಿ ಕಾಣುವ ಗುಡಿಯ ಗೋಪುರ ಗುರಿ; ಗೋಪುರದ್ವಾರ ಸೇರಿದಮೇಲೆ, ಗರ್ಭಗೃಹ ಗುರಿ; ಅಲ್ಲಿಗೆ ಹೋದ ಮೇಲೆ, ದೇವರ ದರ್ಶನ ಗುರಿ.

ಹೀಗೆ ಗುರಿಯೆಂಬುದು ಒಂದು ಗುರಿಗಳ ಸಾಲು, –ಗುರಿಗಳ ಸೋಪಾನ. ಒಂದು ಮೆಟ್ಟಲನ್ನೇರಿದ ಮೇಲೆ ಅದಕ್ಕಿಂತ ಮೇಲಿನದು ನಮ್ಮನ್ನು ಕರೆಯುತ್ತದೆ. ಅದೇ ಪ್ರಗತಿ. ಇದರಲ್ಲೆಲ್ಲ ಮೊದಲ ಮೆಟ್ಟಲನ್ನು ಕಂಡುಕೊಳ್ಳುವುದು ದೊಡ್ಡದು. ಯಾವ ದಿಕ್ಕಿಗೆ ನಾವು ಮುಖ ತಿರುಗಿಸಬೇಕು? ಯಾವ ಕಡೆಗೆ ಹೆಜ್ಜೆಯಿಡಬೇಕು? ಇದೇ ಮುಖ್ಯವಾದ ಪ್ರಶ್ನೆ.

ಒಳ್ಳೆಯದು ಎಂದರೆ ಏನು? :

ಲೋಕದಲ್ಲಿ ಎಲ್ಲರೂ ಬಯಸುವುದು ಒಳ್ಳೆಯದನ್ನು. ಎಲ್ಲರಿಗೂ ಬೇಕಾದದ್ದು ಒಳ್ಳೆಯ ನಡವಳಿಕೆ– ಅಲ್ಲವೆ? ಒಳ್ಳೆಯದು ಅಂದರೆ ಏನು? ಯಾವುದು ಒಳ್ಳೆಯದು? ನಮಗೆ ಯಾವ ಯಾವುದು ಸವಿಯೆಂದೂ ಸೊಗಸೆಂದೂ ತೋರುತ್ತದೆಯೋ ಅದೆಲ್ಲ ಒಳ್ಳೆಯದೆ? ಕೆಲವರ ಬಾಯಿಗೆ ಹೆಂಡ ಸಾರಾಯಿ ಸವಿ. ಕೆಲವರ ಕಣ್ಣಿಗೆ ಪೌಡರ್ (ಹಿಟ್ಟು) ಲೇಪಿಸಿ, ಕನ್ನಡಕ ತೊಟ್ಟ ಮುಖ ಸೊಗಸು. ಅದೇ ಒಳ್ಳೆಯದೆಂದು ನಿಷ್ಕರ್ಷೆಯೆ? ನಮಗೆ ಒಂದು ಕ್ಷಣ ಇಷ್ಟವಾದದ್ದು ಕೊಂಚ ಹೊತ್ತಾದಮೇಲೆ ಅನಿಷ್ಟವೆಂದೆನಿಸುತ್ತದೆ. ಬಯಸಿ ಬಯಸಿ ತಂದ ತಿಂಡಿ ನಮಗೆ ತೇಗು ಬಂದಮೇಲೆ ವೆಗಟಾಗುತ್ತದೆ. ನಮ್ಮ ಇಷ್ಟಾನಿಷ್ಟಗಳಿಗೂ ಒಳ್ಳೆಯದು ಎಂಬುದಕ್ಕೂ ಅವಶ್ಯ ಸಂಬಂಧವೇನೂ ಇಲ್ಲ. ಹಾಗಾದರೆ ಒಳ್ಳೆಯದು ಎಂಬುದರ ಸ್ವರೂಪವೆಂಥಾದ್ದು?

"ಒಳ್ಳೆಯದು" ಎಂಬುದು ಕನ್ನಡ ಮಾತು. ಅದರ ಬೇರು "ಒಳ್". "ಒಳ್" ಎಂದರೆ "ಇರುವುದು".

ಉದಾಹರಣೆ: "(ಲಕ್ಷ್ಮಿಯೆ) ನಿನ್ನಿಂ ನಿಕೃಷ್ಟರಾದರುಮ್ ಒಳರೇ?" (ರನ್ನ ಕವಿ)

ಈ ಮಾತಿಗೆ ಒಡಹುಟ್ಟಿನಂತೆ ಇರುವ ಕನ್ನಡ ಮಾತು 'ಉಳ್' ಎಂಬುದು. ಉಳ್ ಎಂದರೂ "ಇರುವುದು" ಎಂದರ್ಥ. 'ಉಳ್ಳ' 'ಉಂಟು' ಈ ಮಾತುಗಳಲ್ಲಿ 'ಉಳ್' ಎಂಬುದು ಕಾಣಬರುತ್ತದೆ. ಹೀಗೆ ಒಳ್ಳೆಯದು ಎಂದರೆ ಬಹುಕಾಲ ಇರುವುದು, ಕುಂದದೆ ಇರುವುದು ಎಂದರ್ಥ. ಯಾವುದು ಅಳಿಯದೆ ಉಳಿದುಕೊಂಡಿರುತ್ತದೆಯೋ ಅದೇ 'ಉಳ್' ; ಅದೇ 'ಒಳ್ಳೆಯದು'.

ಸಂಸ್ಕೃತದಲ್ಲಿಯೂ ಹಾಗೆಯೇ– 'ಸತ್' ಎಂಬ ಪದ. 'ಸತ್' ಎಂದರೆ ಒಳ್ಳೆಯದು ಎಂದೂ ಶಾಶ್ವತವಾದದ್ದು ಎಂದೂ ಎರಡರ್ಥ:

> ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ಪ್ರಯುಜ್ಯತೇ ॥
>
> –ಗೀತಾ, ೧೭, ೨೬

'ಸಜ್ಜನ', 'ಸನ್ಮಾರ್ಗ', 'ಸತ್ಕಾರ್ಯ' –ಈ ಮಾತುಗಳಲ್ಲಿ 'ಸತ್' ಎಂದರೆ 'ಒಳ್ಳೆಯದು' ಎಂಬರ್ಥ ಕಾಣಬರುತ್ತದೆ. 'ಸತ್ಯ', 'ಸಚ್ಚಿದಾನಂದ', 'ಏಕಂ ಸತ್' –ಇಂಥ ಮಾತುಗಳಲ್ಲಿ 'ಸತ್' ಎಂದರೆ "ಶಾಶ್ವತ" ಎಂಬರ್ಥ ಕಾಣಬರುತ್ತದೆ.

ಈ ಅರ್ಥವಿವರಣೆಯಿಂದ ಹೊರಪಡುವುದೇನೆಂದರೆ–ಯಾವುದಕ್ಕೆ ಕಾಲ ದೇಶ ಸಂದರ್ಭಗಳಿಂದ ವಿಕಾರವೂ ಹಾನಿಯೂ ಇಲ್ಲವೋ ಅದೇ ಒಳ್ಳೆಯದು. ಒಳ್ಳೆಯದೆನಿಸಿದ್ದರಲ್ಲಿ ಕೊಂಚಕಾಲದ್ದಕ್ಕಿಂತ ಬಹುಕಾಲದ್ದು ಹೆಚ್ಚು ಒಳ್ಳೆಯದು. ಎಂದರೆ ಏನಾಯಿತು? ಒಳ್ಳೆಯದರ ಮುಖ್ಯ ಲಕ್ಷಣ ಬಾಳಿಕೆ. ಅದು ನಾಶವಿಲ್ಲದೆ ಏಕರೂಪದಲ್ಲಿ ನಿಂತಿರಬಲ್ಲುದು.

ಹಾಗಾದರೆ ನಮ್ಮ ಪ್ರಪಂಚದಲ್ಲಿ ಚಿರಕಾಲ ಬಾಳತಕ್ಕದ್ದು ಯಾವುದು? ನಮ್ಮ ಕಣ್ಣಿಗೂ ನಾಲಗೆಗೂ ಇತರ ಇಂದ್ರಿಯಗಳಿಗೂ ಗೊತ್ತಾಗಿರುವ ಪ್ರಪಂಚವು ಪ್ರತಿಕ್ಷಣದಲ್ಲಿಯೂ ಬದಲಾಯಿಸುತ್ತಿದೆ. ಈಗ ಇರುವುದು ಇನ್ನೊಂದು ಘಳಿಗೆಗೆ ಇಲ್ಲ. ಪ್ರಾಣಿಗಳೂ ವಸ್ತುಗಳೂ ಕ್ಷಣೇ, ಕ್ಷಣೇ ನಾಶಹೊಂದುತ್ತಿರುವುದನ್ನು ನಾವು ಕಣ್ಣಾರ ಕಾಣುತ್ತಿದ್ದೇವೆ. ಈ ಅಶಾಶ್ವತವಾದ ಜಗತ್ತಿನಲ್ಲಿ ಯಾವುದನ್ನು ಶಾಶ್ವತವೆಂದು ಭಾವಿಸೋಣ?

ದೇವನೊಬ್ಬನೇ ಸತ್ಯ, ಅದೇ ಶಾಶ್ವತ ವಸ್ತು–ಎಂದು ನಮ್ಮ ಮಹರ್ಷಿಗಳು ಹೇಳಿದ್ದಾರೆ. ಇತರ ಎಲ್ಲ ದೇಶಗಳಲ್ಲಿಯೂ ಎಲ್ಲ ಮತಬೋಧಕರೂ ದೇವರು ಶಾಶ್ವತನೆಂದೂ ವಿಕಾರರಹಿತನೆಂದೂ ಸತ್ಯಜ್ಞಾನಸ್ವರೂಪನೆಂದೂ ಸಾರಿದ್ದಾರೆ. ಕ್ಷಣೇ ಕ್ಷಣೇ ರೂಪವಿಕಾರಹೊಂದುತ್ತಿರುವ ಜಗತ್ತಿನ ಹಿಂದುಗಡೆ– ಜಗತ್ತಿನ ಒಳಗಡೆ, – ಜಗತ್ತಿನ ಎಲ್ಲ ಕಡೆಗಳಲ್ಲಿಯೂ, ಒಂದು ನಿತ್ಯಚೈತನ್ಯ ವ್ಯಾಪಿಸಿಕೊಂಡಿದೆ. ಅದು ಭೂಮಿಯಲ್ಲಿಯೂ ಆಕಾಶದಲ್ಲಿಯೂ ಮಿಕ್ಕ ಎಲ್ಲೆಡೆಯೂ ವಸ್ತುವಸ್ತುವಿನಲ್ಲಿಯೂ ಜೀವಜೀವನದಲ್ಲಿಯೂ ಅಂತರ್ಯಾಮಿಯಾಗಿ, ಎಲ್ಲಕ್ಕೂ ವಿಧಾಯಕವಾಗಿ, ಏಕೈಕ ಪ್ರಭುವಾಗಿದೆ. ಆ ಮಹಾ ಚೈತನ್ಯಶಕ್ತಿಯೇ ದೇವರು. ಅದೇ ಪರಮಾತ್ಮ; ಅದೇ ಪರಬ್ರಹ್ಮ; ಅದೇ ಭಗವಂತ; ಅದೇ ಒಳ್ಳೆಯದು; ಅದೇ 'ಸತ್' ; ಅದೇ ಸತ್ಯದ ಸತ್ಯ; ಅದೇ ಸತ್ತ್ವದ ಸತ್ತ್ವ. ಅದನ್ನು ಬಿಟ್ಟು ಬೇರೆ ಬೇರೆ ಒಳ್ಳೆಯದಿಲ್ಲ.

ನಮ್ಮ ಯಾವ ನಡವಳಿಕೆ, ಯಾವ ತಿಳಿವಳಿಕೆ, ಯಾವ ಅಭ್ಯಾಸ, ಯಾವ ಅನುಭವ ಆ ಸದ್ವಸ್ತುವಿನ ಕಡೆಗೆ ನಮ್ಮನ್ನು ಕರೆದುಕೊಂಡು ಹೋಗಬಲ್ಲುದೋ ಅದು ಒಳ್ಳೆಯದು. ಯಾವುದು ಆ ಸದ್ವಸ್ತುದರ್ಶನಕ್ಕೆ ಅನುಕೂಲವಲ್ಲದೆ ಪ್ರತಿಕೂಲವೋ ಅದು ಕೆಟ್ಟದ್ದು. ದೇವರು ಒಬ್ಬನು; ಆತನ ಹೆಸರುಗಳೂ ಆಕಾರಗಳೂ ಸಾವಿರ. ಹಾಗೆಯೇ ಒಳ್ಳೆಯದು ಎಂಬ ಗುಣ ಒಂದು. ಆ ತತ್ತ್ವ ಒಂದು. ಒಳ್ಳೆಯದೆಂಬುದರ ರೂಪಗಳೂ ಕಾರ್ಯಗಳೂ ಸಾವಿರ ಬಗೆ.

ಹೀಗೆ ಮಹರ್ಷಿಗಳು ಒಳ್ಳೆಯದು–ಕೆಟ್ಟದುಗಳನ್ನು ನಿಶ್ಚಯಿಸಿ, ಒಳ್ಳೆಯದಾದದ್ದನ್ನು ಪುರುಷಾರ್ಥವೆಂದು ಕರೆದಿದ್ದಾರೆ.

ಚತುರ್ವಿಧ ಪುರುಷಾರ್ಥ :

ಮನುಷ್ಯನಿಗೆ ಇರಬಹುದಾದ ಒಳ್ಳೆಯ ಉದ್ದೇಶಗಳು, ಅಥವಾ ಗುರಿಗಳು, ನಾಲ್ಕು ಬಗೆಯೆಂದು ಆರ್ಯಮಹರ್ಷಿಗಳ ಎಣಿಕೆ: (೧) ಧರ್ಮ, (೨) ಅರ್ಥ, (೩) ಕಾಮ, (೪) ಮೋಕ್ಷ. ಮನುಷ್ಯನ ಆಶೆಗಳೂ ಯೋಚನೆಗಳೂ ಪ್ರಯತ್ನಗಳೂ ನೂರಾರು ತೆರದವಾಗಿರುತ್ತವೆ. ಅವು ಎಂಥವೇ ಆಗಿರಲಿ,

ಅವುಗಳಲ್ಲಿ ಪ್ರತಿಯೊಂದನ್ನೂ ಈಗ ಹೇಳಿದ ನಾಲ್ಕು ಜಾತಿಗಳ ಪೈಕಿ ಯಾವುದಾದರೊಂದರಲ್ಲಿ ಸೇರಿಸುವುದಕ್ಕಾಗುತ್ತದೆ. ಅವುಗಳ ಪೈಕಿ ಮೊದಲ ಮೂರು ಎಲ್ಲ ಗೃಹಸ್ಥರಿಗೂ ಸಂಬಂಧಪಟ್ಟವು.

- **ಧರ್ಮ:** ಧರ್ಮ ಎಂದರೆ ಒಳ್ಳೆಯ ನಡವಳಿಕೆ–ಆತ್ಮದ ಮೊಗ್ಗಿನ ಅರಳಿಕೆ. ಒಳ್ಳೆಯದು ಏನೆಂಬುದನ್ನು ಈಗ ತಾನೆ ಸಂಗ್ರಹವಾಗಿ ಹೇಳಿದೆ. ನಾವು ಹೇಗೆ ನಡೆದುಕೊಂಡರೆ ನಮ್ಮ ಸುತ್ತಮುತ್ತಣ ಯಾರ ಬಾಳಿಗೂ ಕೇಡಾಗದೆ, ಎಲ್ಲರ ಬಾಳೂ ಸೊಗಸುಗೊಂಡು, ನಮ್ಮ ಬಾಳೂ ಸೊಗಸಾಗುತ್ತದೆಯೋ ಅಂಥ ನಡವಳಿಕೆ ಧರ್ಮ. ಧರ್ಮವು ಜೀವನವನ್ನು ಧರಿಸಬೇಕು. ಒಬ್ಬನ ಜೀವನವನ್ನು ಮಾತ್ರವಲ್ಲ, ಅದು ಎಲ್ಲರ ಜೀವನವನ್ನೂ ಧರಿಸಿ ಪೋಷಿಸುವಂಥಾದ್ದಾಗಬೇಕು. ಅದು ಮನುಷ್ಯನ ಪಾಲಿಗೆ ಆತ್ಮವಿಕಾಸವೂ ಅವನ ಲೋಕಬಾಂಧವ್ಯದಲ್ಲಿ ಆತ್ಮಸಂಯಮವೂ ಆಗಿರುತ್ತದೆ. ಧರ್ಮವೆಂಬುದರಲ್ಲಿ ಸತ್ಯ, ಶುಚಿ, ಗುಣ–ಶಕ್ತಿಗಳ ಪ್ರಕಾಶ, ಜನದಲ್ಲಿ ಪರಸ್ಪರ ನ್ಯಾಯ, ಸಹಾನುಭೂತಿ, ಭೂತದಯೆ, ವಿಶ್ವಜೀವ ಗೌರವ–ಇವೆಲ್ಲ ಸೇರಿರುತ್ತವೆ. ಹಾಗೆಯೇ ದೇವರ ಧ್ಯಾನ, ಪೂಜೆ, ವ್ರತ, ಯಜ್ಞ, ದೀಕ್ಷೆ, ದಾನ, ಪರೋಪಕಾರ, ತಪಸ್ಸು–ಇಂಥ ಪುಣ್ಯಕಾರ್ಯಗಳು ಸೇರಿರುತ್ತವೆ. ಧರ್ಮ ಎಂಬ ಶಬ್ದವನ್ನು ಶಾಸ್ತ್ರರೀತಿಯಿಂದ ವಿವರಿಸಿ ಹೇಳುವುದು ಸಾಮಾನ್ಯ ಜನರಿಗೆ ಸಾಧ್ಯವಿಲ್ಲದಿದ್ದರೂ ಅದರ ಸ್ವರೂಪವನ್ನು ಸಾಮಾನ್ಯ ಜನರೂ ಸಹ ತಮ್ಮ ತಮ್ಮ ಮನಸ್ಸುಗಳಲ್ಲಿ ಕಂಡುಕೊಳ್ಳಲು ಸಮರ್ಥರಾಗಿರುತ್ತಾರೆ. ಲೋಕರೂಢಿಯಲ್ಲಿ ಅದು ಅಷ್ಟು ಸ್ಥಿರವಾಗಿ, ಅಷ್ಟು ವಿಸ್ತಾರವಾಗಿ, ಬಹುಕಾಲದಿಂದ ಪ್ರಸಿದ್ಧವಾಗಿ ನಿಂತಿದೆ. ಮನು ಧರ್ಮಶಾಸ್ತ್ರದ ಈ ಶ್ಲೋಕವು ಧರ್ಮದ ಹೆಗ್ಗುರುತುಗಳನ್ನು ತಿಳಿಸುತ್ತದೆ:

  > ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
  > ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥

  “ಕರ್ತವ್ಯದಲ್ಲಿ ದಾರ್ಢ್ಯ, ಕ್ಷಮೆ, ತನ್ನ ಮೈಯ ಮೇಲೆ ಹತೋಟಿ, ಪರರೊಡವೆಯನ್ನು ಮುಟ್ಟದಿರುವುದು, ಪರಿಶುದ್ಧಿ, ಇಂದ್ರಿಯಗಳನ್ನು ಹದ್ದಿನಲ್ಲಿರಿಸುವುದು, ಬುದ್ಧಿ ವ್ಯವಸಾಯ, ವಿದ್ಯಾರ್ಜನೆ, ಸತ್ಯನಿಷ್ಠೆ, ದ್ವೇಷವಿಲ್ಲದಿರುವುದು–ಈ ಹತ್ತು ಗುಣಗಳು ಸಾಮಾನ್ಯ ಧರ್ಮದ ಲಕ್ಷಣಗಳು.”
- **ಅರ್ಥ:** ಅರ್ಥವೆಂದರೆ ಹಣ, ಭೂಮಿ, ಚಿನ್ನ, ರತ್ನ ಮೊದಲಾದ ಸಂಪತ್ತು. ಜೀವನಕ್ಕೆ ಸರಿಯಾದ ಕ್ರಮವು ಧರ್ಮವಾದರೆ, ಜೀವನಕ್ಕೆ ಆಧಾರವು ಅನ್ನವಸ್ತ್ರ ಸಾಮಗ್ರಿ. ಇದನ್ನು ಸಂಪಾದಿಸಿಕೊಳ್ಳಬೇಕಾದದ್ದು ಧರ್ಮದಲ್ಲಿ ಸೇರಿದ್ದೇ. ಆದರೆ ಸಂಪತ್ತಿನಲ್ಲಿ ಆವೇಶವನ್ನುಂಟುಮಾಡುವ ಗುಣ ಅಡಗಿಕೊಂಡಿರುತ್ತದೆ. ಕೆಲವು ಬಗೆಯ ಆಹಾರ ಪಾನಕಗಳಲ್ಲಿ ಬಲಕೊಡುವ ಶಕ್ತಿಯುಂಟು. ಆದರೆ ಅದನ್ನು ಮಿತಿಯರಿತು ಸೇವಿಸಬೇಕು. ಮಿತಿಮೀರಿದರೆ ತಲೆಗೆ ಮತ್ತೇರುತ್ತದೆ. ಹಣದಿಂದಲೂ ಹಾಗಾಗುತ್ತದೆ. ಧನಪಿಶಾಚಿ ನಮ್ಮನ್ನು ಹಿಡಿದಾಗ ಧರ್ಮ ಮರೆತುಹೋಗುತ್ತದೆ. ಅಂಥಾ ಧರ್ಮಭಂಗಕ್ಕೆ ಅವಕಾಶ ಕೊಡದಂತೆ ಧನಸಂಪಾದನೆ ಮಾಡುವುದು ಧರ್ಮದ ಒಂದು ಅವಶ್ಯ ಕರ್ತವ್ಯವೇ ಸರಿ. ಆದದ್ದರಿಂದಲೇ ಅರ್ಥಸಂಪಾದನೆಯಲ್ಲಿ ಉದಾಸೀನನಾಗಬಾರದೆಂದು ವೇದವು ವಿಧಿಸಿದೆ: “ಭೂತ್ಯೈನ ಪ್ರಮದಿತವ್ಯಮ್ ॥” “ತತೋ ಮೇ ಶ್ರಿಯಮಾವಹ ॥”
- **ಕಾಮ:** ಕಾಮವೆಂದರೆ ಆಶೆ. ಇದು ಪ್ರಾಣಧಾರಣೆಗಿಂತ ಹೆಚ್ಚಾಗಿಬೇಕೆನ್ನಿಸುವ ಸೌಖ್ಯಸಂತೋಷಗಳ ಕಾಮನೆ. ಪ್ರೇಮ, ಸ್ನೇಹ, ಮೃಷ್ಟಾನ್ನ ಭೋಜನ, ಸೌಂದರ್ಯ, ಸಂಗೀತ, ನರ್ತನ, ಚಿತ್ರಪಟ–

ಇಂಥವೆಲ್ಲ ಕಾಮದ ನಾನಾ ರೂಪಗಳು. ಅರ್ಥದಲ್ಲಿ ಹೇಗೆಯೋ ಕಾಮದಲ್ಲಿಯೂ ಹಾಗೆಯೇ ಮನುಷ್ಯ ತನ್ನನ್ನು ತಾನು ಮರೆತುಕೊಂಡು ಧರ್ಮದ ಎಲ್ಲೆಯನ್ನು ಮೀರುವುದುಂಟು. ಹಾಗೆ ಅತಿಕ್ರಮ ಮಾಡದೆ ಇರುವ ಕಾಮಕ್ಕೆ ಧರ್ಮವ್ಯವಸ್ಥೆಯಲ್ಲಿ ಒಂದು ಮುಖ್ಯ ಸ್ಥಳವುಂಟು. ಭಗವದ್ಗೀತೆಯಲ್ಲಿ ಭಗವಂತನು "ಧರ್ಮಾವಿರುದ್ಧೋ ಭೂತೇಷು ಕಾಮೋऽಸ್ಮಿ" ಎಂದು ಉಪದೇಶ ಮಾಡಿದ್ದಾನೆ. ಸುಖ ಪಡುವುದು ಪಾಪವಲ್ಲ. ಸಂತೋಷದಲ್ಲಿ ದೋಷವಿಲ್ಲ. ಆದರೆ ಧರ್ಮವನ್ನು ಮಾತ್ರ ಮರೆಯತಕ್ಕದ್ದಲ್ಲ.
ಅರ್ಥ ಕಾಮಗಳೆರಡೂ ವಿಹಿತ ಪರಿಮಿತಿಯಲ್ಲಿದ್ದಾಗ ಒಳ್ಳೆಯದು ಎಂದು ಹೇಳಿದಮೇಲೆ, ಮನುಷ್ಯನ ಸ್ವತಂತ್ರ ವ್ಯಾಪಾರಕ್ಕೆ ಅಲ್ಲಿ ಅವಕಾಶವುಂಟು ಎಂದ ಹಾಗಾಯಿತು. ಈ ಎರಡೂ ಕ್ಷೇತ್ರಗಳೂ ಪುರುಷೇಚ್ಛೆಗೂ ಪುರುಷಬುದ್ಧಿಗೂ ವಿಕಾಸಸ್ಥಾನಗಳು. ಆ ಪೌರುಷ ಪ್ರಭಾವದಿಂದ ಹುಟ್ಟಿ ಬೆಳೆದಿರುವುದೇ ನಾಗರಿಕತೆ–ವಿಜ್ಞಾನ, ವಾಣಿಜ್ಯ, ಕಸುಬು, ಕೈಗಾರಿಕೆಗಳು, ಯಂತ್ರಚಾತುರ್ಯಗಳು, ಸಾಮಾಜಿಕ ಮರ್ಯಾದೆಗಳು, ಜನಜನಾಂಗ ಸಂಬಂಧಗಳು. ಅರ್ಥಕಾಮಗಳಿಂದ ಜೀವಕ್ಕೆ ವಿಕಾಸ; ಧರ್ಮದಿಂದ ಜೀವಕ್ಕೆ ಹಿತಚಿಕಿತ್ಸೆ.

- **ಮೋಕ್ಷ:** ಮೋಕ್ಷವೆಂಬುದು ಸಾಮಾನ್ಯ ಮನುಷ್ಯರ ಅನುಭವಕ್ಕೆ ದೂರವಾದ ವಿಷಯ. ಧರ್ಮ– ಅರ್ಥ– ಕಾಮಗಳು ಮೂರೂ ಸಾಮಾನ್ಯ ಜನಕ್ಕೆ ಚೆನ್ನಾಗಿ ಪರಿಚಯದಲ್ಲಿರತಕ್ಕವು. ಆದದ್ದರಿಂದಲೇ ಈ ಸಾಮಾನ್ಯ ಉದ್ದೇಶಗಳನ್ನು ಧರ್ಮಶಾಸ್ತ್ರಗಳಲ್ಲಿ ತ್ರಿವರ್ಗವೆಂದು ಪ್ರಶಂಸೆ ಮಾಡಿದ್ದಾರೆ. ಮೋಕ್ಷವೆಂಬುದಾದರೋ, ಅಪವರ್ಗ, ಅದು ಅಸಾಧಾರಣವಾದ ಬೇರೊಂದು ವಿಷಯ. ಅದು ವಿಶೇಷವಾಗಿ ವಿರಕ್ತರಿಗೂ, ಯತಿಗಳಿಗೂ, ಯೋಗಿಗಳಿಗೂ ಸಂಬಂಧಪಟ್ಟದ್ದು. ಧರ್ಮ ಅರ್ಥ ಕಾಮಗಳು ಮನುಷ್ಯನಿಗೆ ಲೋಕಸಂಪರ್ಕವನ್ನು ಕಲ್ಪಿಸುತ್ತವಷ್ಟೆ? ಆ ಸಂಪರ್ಕದಿಂದ ಕಷ್ಟಕಾರ್ಪಣ್ಯಗಳು ಪರಂಪರೆಯಾಗಿ ಹೊರಟು, ಜೀವನವನ್ನು ಬಂಧಿಸಿ, ಹಿಗ್ಗಮುಗ್ಗ ಎಳೆದಾಡುತ್ತವೆ. ಇದೇ ಸಂಸಾರದ ತಾಪತ್ರಯ. ಈ ಕೋಟಲೆಯಿಂದ ಜೀವವನ್ನು ಬಿಡಿಸಿಕೊಳ್ಳುವುದೇ ಮೋಕ್ಷ. ಕೆಲವು ಮೂಲಿಕೆಗಳ ರಸವನ್ನು ಮೈಗೆ ಸವರಿಕೊಂಡರೆ ಮನುಷ್ಯನು ಬೆಂಕಿಯುರಿಯೊಳಗೆ ನಿಶ್ಚಿಂತನಾಗಿ ನಡೆಯಬಹುದಂತೆ! ಆ ರಸದ ಮಹಿಮೆಯಿಂದ ಅಗ್ನಿತಾಪ ಅವನ ಮೈಗೆ ಸೋಕದು. ಮನುಷ್ಯನಿಗೆ ಪರಮಾತ್ಮಜ್ಞಾನವೆಂಬುದು ಹಾಗೆ ತಾಪಹಾರಿಯಾದ ಕವಚ. ಯಾವ ಮಹಾಚೈತನ್ಯವು ಜಗತ್ತಿಗೆ ಆಧಾರವಾಗಿ, ಎಲ್ಲ ಪ್ರಾಣಿಗಳಲ್ಲೂ ಎಲ್ಲ ವಸ್ತುಗಳಲ್ಲೂ ವ್ಯಾಪಿಸಿಕೊಂಡು, ಜೀವಲೀಲೆಯನ್ನು ನಡಸುತ್ತಿದೆಯೋ ಆ ಪರವಸ್ತುವನ್ನು ತಿಳಿದುಕೊಂಡವರಿಗೆ– ಎಷ್ಟು ಬೆಲೆ ಜಗತ್ತಿಗೆ ಸಲ್ಲುತ್ತದೆ, ಎಲ್ಲಿ ಅದಕ್ಕೆ ಮಿತಿ, ಎಂಬುದರ ಅರಿವು ಬಂದು, ಎಲ್ಲ ಮೋಹ ಭ್ರಾಂತಿಗಳೂ ಕಳೆದುಹೋಗಿ, ಜೀವನದ ಭಾರ ಹಗುರವಾಗಿ ಶಾಶ್ವತ ಶಾಂತಿ ಲಭ್ಯವಾಗುತ್ತದೆ. ಅದೇ ಮೋಕ್ಷ. ನಮ್ಮ ಪ್ರಸಕ್ತ ವಿಚಾರಕ್ಕೆ ಮೋಕ್ಷ ವಿಷಯವು ಅಷ್ಟು ಮುಖ್ಯವಲ್ಲದಿದ್ದರೂ ಪುರುಷಾರ್ಥ ವಿವರಣೆಯನ್ನು ಕೈಗೆ ತೆಗೆದುಕೊಂಡಮೇಲೆ, ಅದನ್ನು ಪೂರ್ತಿ ಮಾಡುವುದಕ್ಕೋಸ್ಕರ ಇಲ್ಲಿ ಸೂಕ್ಷ್ಮವಾಗಿ ಅದನ್ನು ಪ್ರಸ್ತಾವಿಸಿದೆ.

ಇಲ್ಲಿ ನಮ್ಮ ಉದ್ದೇಶ :

ನಮ್ಮ ಬದುಕು ಚೆನ್ನಾಗಿ ಸಾಗಿ, ಸಾರ್ಥಕವಾಗಬೇಕಾದರೆ ನಮಗೆ ಒಂದು ಒಳ್ಳೆಯ ಗುರಿಯ ತಿಳಿವಳಿಕೆಯೂ, ಆ ಗುರಿಯನ್ನು ಮುಟ್ಟಿಸಬಲ್ಲ ದಾರಿಯ ತಿಳಿವಳಿಕೆಯೂ ಇರಬೇಕು. ಅಂಥ ಜೀವನಯಾತ್ರೆಯ ನಕಾಶೆಯೊಂದನ್ನು ಗುರುತು ಮಾಡಲು ಈ ಲೇಖನದಲ್ಲಿ ಯತ್ನಿಸಿದೆ.

ಅದು ಸುಲಭಸಾಧ್ಯವಾದ ಯೋಚನೆಯಲ್ಲ; ನಮ್ಮ ಪುರಾತನ ಮಹನೀಯರು ನಮಗೆ ತಕ್ಕ ಗುರಿಗೊತ್ತುಗಳನ್ನು ತಿಳಿಸಿಕೊಟ್ಟಿದ್ದಾರೆಂಬುದು ದಿಟ. ಆದರೆ ಈ ಹೊತ್ತು ಲೋಕ ಹೇಗಿದೆ? ಹತ್ತಾರು ಹೊಸ ಹೊಸ ಶಾಸ್ತ್ರಗಳೂ, ಹೊಸ ಹೊಸ ಮತಗಳೂ ತಲೆಯೆತ್ತಿ ಹತ್ತಾರು ದಿಕ್ಕುಗಳಿಗೆ ನಮ್ಮ ಬುದ್ಧಿ ಮನಸ್ಸುಗಳನ್ನು ಸೆಳೆದಾಡಿ, ಹಳೆಯ ನಿಶ್ಚಯವನ್ನು ಹೋಗಲಾಡಿಸಿ, ಹೊಸ ಸಂದೇಹ ಸಂಕ್ಷೋಭೆಗಳನ್ನು ಹರಡಿವೆ. ಈ ಹೊಸ ವಿಜ್ಞಾನವಿಕ್ಷಿಪ್ತವಾದ ವಾತಾವರಣದಲ್ಲಿ ನಾವು ನಮ್ಮ ಜೀವನ ಸಮಸ್ಯೆಗಳನ್ನು ಪುನರ್ವಿಚಾರದಿಂದ ವಿಮರ್ಶೆ ಮಾಡಬೇಕಾಗಿದೆ.

ಇದು ಪಂಡಿತರಿಗಾಗಿ ಬರೆದ ಗ್ರಂಥವಲ್ಲ. ದೇಶದಲ್ಲಿ ಬಹುಮಂದಿಯಾದ ಅತಿಸಾಮಾನ್ಯ ಜನರನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆದ ಬರೆವಣಿಗೆ ಇದು.

ಇದನ್ನೋದುವವರಿಗೆ ಅಲ್ಲಲ್ಲಿ ಪ್ರಶ್ನೆಗಳೂ ಸಂದೇಹಗಳೂ ತೋರಬಹುದು. ಅಂಥವರು ಈ ಪುಸ್ತಕವನ್ನು ಕಡೆಯವರೆಗೂ ಓದಿದ ಬಳಿಕ ವಿಮರ್ಶೆಗೆ ಹೊರಡಬಹುದೆಂದು ಲೇಖಕನ ಮೊದಲನೆಯ ವಿಜ್ಞಾಪನೆ.

ಅವನ ಎರಡನೆಯ ವಿಜ್ಞಾಪನೆ ಏನೆಂದರೆ–ಒಂದೇ ವಾಕ್ಯದಲ್ಲಿ ಉಪದೇಶ ಬೇಕೆನ್ನುವವರಿಗೆ ಈ ಪುಸ್ತಕ ಉಪಯುಕ್ತವಾಗಲಾರದು–ಎಂದು. ಮನುಷ್ಯನ ಜೀವನಕ್ಷೇತ್ರವು ಮನುಷ್ಯನ ಭಾಷೆಗಿಂತ ವಿಸ್ತಾರವಾದದ್ದು; ಮತ್ತು ಮನುಷ್ಯನ ಜೀವನದ ಕಷ್ಟಕಾರಣಗಳ ಬೇರು ಮನುಷ್ಯಬುದ್ಧಿಗಿಂತ ಆಳವಾದದ್ದು. ಆದದ್ದರಿಂದ 'ರಾಮಸ್ಮರಣೆಯೇ ತಾರಕ', 'ವಿಭೂತಿಧಾರಣೆಯೇ ಮೋಚಕ' ಎಂಬಂಥ ಏಕ ಮೂಲಿಕಾ ಪ್ರಯೋಗದ ವಾಕ್ಯದಲ್ಲಿ ಜೀವನವು ಸಾರ್ಥಕವಾಗುವ ದಾರಿಗಳನ್ನೆಲ್ಲವನ್ನೂ ತೋರಿಸಿಕೊಡುವೆನೆಂಬುದು ಅಸಾಧ್ಯ ಸಾಹಸ. ಈ ಪುಸ್ತಕದ ಸಿದ್ಧಾಂತ ಅನೇಕ ಪಕ್ಕಗಳುಳ್ಳದ್ದು. ಅಥವಾ ಅದನ್ನು ಸಿದ್ಧಾಂತವೆನ್ನುವುದಕ್ಕಿಂತ ಮನಸ್ಸಿನ ಒಲವು, –ಮನಸ್ಸಿನ ಮುಖ ಭಾವ, –ಮನೋವೃತ್ತಿ ಎನ್ನುವುದು ಸರಿಯಾದೀತು.

ನದಿ ಅಗಲವಾದಷ್ಟೂ ಅದನ್ನು ದಾಟುವ ಸೇತುವೆಗೆ ಕಮಾನುಗಳು ಹೆಚ್ಚಾಗಿರಬೇಕು. ನಮ್ಮ ಜೀವನ ಒಂದು ಮಹಾಪ್ರಸಂಗವಾದ್ದರಿಂದ ಅದರ ಕಷ್ಟ ಪ್ರಶ್ನೆಗಳನ್ನು ಪೂರೈಸಲು ನಮ್ಮ ಮನಸ್ಸೂ ಬುದ್ಧಿಯೂ ಅನೇಕ ಭಾವ ಭಂಗಿಗಳಲ್ಲಿ ನಿಲ್ಲುವುದನ್ನು ಕಲಿಯಬೇಕು. ನಮ್ಮ ಬಾಳು ನಿತ್ಯದ ಕುಸ್ತಿ. ಅದಕ್ಕೆ ನಾವು ಹತ್ತೆಂಟು ಕೈಪಟ್ಟು ಕಾಲುವರಿಸೆಗಳನ್ನು ಅಭ್ಯಾಸ ಮಾಡಿಕೊಂಡಿರಬೇಕು. ಒಂದು ಕಾಲು ನಮ್ಮ ನಡಿಗೆಗೆ ಸಾಲದು; ಒಂದು ಕೈ ನಮ್ಮ ಕೆಲಸಕ್ಕೆ ಸಾಲದು. ಹಾಗೆಯೇ ಏಕವಾಕ್ಯ ಸಿದ್ಧಾಂತ ನಮ್ಮ ಬಾಳಿಗೆ ಸಾಲಲಾರದು.

ಹಾಗಾದರೆ ಇಲ್ಲಿ ಏನೋ ಒಂದು ಮಹೋಪನ್ಯಾಸವು ಸಿದ್ಧವಾಗಿದೆಯೆಂದು ಯಾರೂ ತಿಳಿಯಬಾರದು. ಈ ಉಪನ್ಯಾಸದಲ್ಲಿ ಹೇಳಹೊರಟಿರುವ ವಿಷಯ ಅಂಥ ಅಪೂರ್ವವಾದದ್ದೇನೂ ಅಲ್ಲ; ಕಠಿನವಾದದ್ದೂ ಅಲ್ಲ; ತೊಡಕಾದದ್ದೂ ಅಲ್ಲ. ನಮ್ಮ ಜೀವನವು ಒಂದು ಹದದಲ್ಲಿ ಸಾಗಿ ತೃಪ್ತಿಕರವೆನಿಸಲು ಬಹು ವಿಶೇಷವಾದ ಗ್ರಂಥಪಾಂಡಿತ್ಯವೇನೂ ಬೇಕಾಗಿಲ್ಲ. ಒಂದೆರಡು ಸರಳವಾದ ಸೂತ್ರಗಳನ್ನು ಚೆನ್ನಾಗಿ ಮನಸ್ಸಿಗೆ ಅರ್ಥಮಾಡಿಕೊಂಡು ಗಟ್ಟಿಯಾಗಿ ಹಿಡಿದು ಅನುಸರಿಸಿದರೆ ಸಾಕು. ಇದಕ್ಕೆ ಮಹಾತ್ಮ ಗಾಂಧಿಯವರ ಜೀವನವೇ ದೊಡ್ಡ ನಿದರ್ಶನ. ಅವರೇನೂ ಮಹಾಪಂಡಿತರಲ್ಲ; ನೂರಾರು ಗ್ರಂಥಗಳನ್ನು ಶೋಧಿಸಿದ್ದವರಲ್ಲ. ಅವರು ನಾಲ್ಕೈದು ಸಾಮಾನ್ಯ ತತ್ತ್ವಗಳಲ್ಲಿ ನಂಬಿಕೆಯಿಟ್ಟು, ಶ್ರದ್ಧೆಯಿಂದ ಆ ವ್ರತವನ್ನು ನಡೆಸಿ, ಜೀವನವನ್ನು ಸಾರ್ಥಕಮಾಡಿಕೊಂಡರು. ತತ್ತ್ವ ಯಾವುದೇ ಆಗಲಿ, ಅದನ್ನು ನಾವು ವಿಶದವಾಗಿ ಮನದಟ್ಟು ಮಾಡಿಕೊಂಡು, ಸಂತತವಾಗಿ ಅಭ್ಯಾಸ ಮಾಡುವುದು ದೊಡ್ಡದು. ಮಹಾ ಮಹಾ ತತ್ತ್ವಗಳನ್ನೋದಿ, ಅಲ್ಪವಾಗಿ ಅನುಷ್ಠಾನ ಮಾಡುವುದಕ್ಕಿಂತ, ಕೆಲವೇ ಕೆಲವು ಸರಳ ತತ್ವಗಳನ್ನು ಚೆನ್ನಾಗಿ ಮನಸ್ಸಿಗೆ ತಂದುಕೊಂಡು ಸಂತತವಾಗಿ ಆಚರಣೆಯಲ್ಲಿರಿಸಿಕೊಳ್ಳುವುದು ಲೇಸು.

ನಮ್ಮ ಜನರ ಸ್ಥಿತಿ ಉತ್ತಮವಾಗಬೇಕಾದರೆ ಮೊದಲು ಅವರ ಮನಸ್ಸಿನ ಭಾವನೆಗಳಲ್ಲಿ ಕೆಲವು ಬದಲಾವಣೆಗಳಾಗಬೇಕು. ಏಕೆಂದರೆ ಮನಸ್ಸೇ ಎಲ್ಲಕ್ಕೂ ಮೂಲ; ಅದನ್ನು ಸರಿಪಡಿಸಿದ ಹೊರತು ಇನ್ನಾವುದೂ ಸರಿಯಾಗಲಾರದು.

ಮೂರು ಮುಖ್ಯ ಲಕ್ಷಣಗಳು :

ಮೊಟ್ಟಮೊದಲು, ನಮ್ಮ ಜನಕ್ಕೆ ಬದುಕಿನಲ್ಲಿ ಶ್ರದ್ಧೆ ಹೆಚ್ಚಬೇಕು. ಬದುಕು–ಅಥವಾ ಜೀವನ, –ಅಥವಾ ಬಾಳು– ಎಂಬುದು ಒಂದು ದೊಡ್ಡ ವಸ್ತು. ಬದುಕುವುದು ಪಾಪವಲ್ಲ; ಚೆನ್ನಾಗಿ ಬದುಕಲು ಪ್ರಯತ್ನಪಡುವುದು ನಾಚಿಕೆಯ ಕೆಲಸವಲ್ಲ. ಬದುಕನ್ನು ಒಳ್ಳೆಯದನ್ನಾಗಿ ಮಾಡಿಕೊಂಡು ಚೆನ್ನಾಗಿ ಉಪಯೋಗಿಸುವುದೇ ನಮಗಿರುವ ಕರ್ತವ್ಯ– ಎಂಬ ಬುದ್ಧಿ ಜನದಲ್ಲಿ ಬೇರೂರಿ ನಿಲ್ಲಬೇಕು. ಅದೇ ಪ್ರಗತಿ. ಪ್ರಗತಿ ಎಂದರೆ ಮೇಲಾದ ಗತಿ, ಅಥವಾ ಒಳ್ಳೆಯದನ್ನು ಗುರಿಯಲ್ಲಿಟ್ಟುಕೊಂಡು ಮುಂದುಮುಂದಕ್ಕೆ, –ಮೇಲ್ಮೇಲಕ್ಕೆ–ಹೋಗುವ ನಡಿಗೆ.

ಒಳ್ಳೆಯದು ಎಂದರೆ ಏನು? ಇದು ಬಹುಮುಖ್ಯವಾದ ಪ್ರಶ್ನೆ. ಮೇಲೆ ಅದನ್ನು ತಕ್ಕಮಟ್ಟಿಗೆ ವಿಚಾರ ಮಾಡಿದ್ದಾಗಿದೆ. ಬಹುಜನ ಬಹುಕಾಲದಿಂದ ಯಾವುದನ್ನು ಒಳ್ಳೆಯದೆಂದೂ ಸಂಪಾದಿಸಿಕೊಳ್ಳಬೇಕಾದದ್ದೆಂದೂ ಒಪ್ಪಿಕೊಂಡಿದ್ದಾರೆಯೋ ಆ ಸಂಪತ್ತೇ, ಆ ಉತ್ತಮ ಪರಿಸ್ಥಿತಿಯೇ, ನಮಗೂ ಒಳ್ಳೆಯದು ಎಂದಿಟ್ಟುಕೊಳ್ಳೋಣ.

ಎರಡನೆಯದಾಗಿ ನಮ್ಮ ಜನಕ್ಕೆ ಮನುಷ್ಯಪ್ರಯತ್ನದಲ್ಲಿ ನಂಬಿಕೆ ಹೆಚ್ಚಬೇಕು. ಎಂಥ ಕಷ್ಟ ಬಂದರೂ ಅದನ್ನು ಪರಿಹಾರ ಮಾಡಿಕೊಳ್ಳುವುದಕ್ಕೂ, ಒಳ್ಳೆಯದೇನೆಂದು ವಿಚಾರಿಸಿ ಕಂಡುಕೊಂಡು ಸಾಧಿಸಿಕೊಳ್ಳುವುದಕ್ಕೂ ನಮ್ಮ ಶಕ್ತಿಯಿಂದ ಆಗಬಹುದಾದ ಕೆಲಸ ಕೊಂಚವಾದರೂ ಇರುತ್ತದೆ. ಆ ಕೆಲಸವೇನೆಂಬುದನ್ನು ತಿಳಿದುಕೊಂಡು ಧೈರ್ಯದಿಂದಲೂ ವಿವೇಕದಿಂದಲೂ ಯತ್ನ ಮಾಡುವುದು ನಮ್ಮ ಕರ್ತವ್ಯ. ಇಂಥ ಪೌರುಷಪ್ರವೃತ್ತಿ ನಮ್ಮ ಜನದಲ್ಲಿ ದೃಢಪಡಬೇಕು. ಈ ಪ್ರಗತಿ ಪ್ರವೃತ್ತಿಯ

ಫಲಿತಾಂಶವೇ ನಾನಾ ವಿಜ್ಞಾನ ಶಾಸ್ತ್ರವಿದ್ಯೆಗಳು. ಅದೇ ಶಾಸ್ತ್ರವಿದ್ಯೆಗಳೇ ಮತ್ತಷ್ಟು ಪ್ರಗತಿಗೆ ಸಾಧಕವಾಗಬಲ್ಲವು.

ಮೂರನೆಯದಾಗಿ, ಜನದ ದಿನಚರಿಯ ನಡವಳಿಕೆಯಲ್ಲಿ ಒಂದು ಸವಿಯೂ ಬೆಳಕೂ–ಒಂದು ಸ್ನೇಹಭಾವವೂ ಕಾಂತಿಯೂ ತುಂಬಿರಬೇಕು. ಅವರ ಸೌಜನ್ಯ ಸಭ್ಯತೆಗಳು ಸ್ವಾಭಾವಿಕವಾದುದಾಗಿರಬೇಕು. ಎಂದರೆ, ಅವರು ಹೊರಗಿನ–ಎಂದರೆ ಸರಕಾರ, ಅಥವಾ ಮಠ, ಅಥವಾ ಕುಲಸ್ಥರ ಪಂಚಾಯತಿ–ಇಂಥಾದ್ದರ ಭಯದಿಂದ ಹದ್ದಿನಲ್ಲಿರುವುದಕ್ಕೆ ಬದಲಾಗಿ, ತಮ್ಮೊಳಗಿನ ಒಳ್ಳೆಯತನದಿಂದಲೇ ಹದ್ದಿನಲ್ಲಿರುವವರಾಗಬೇಕು. ಅವರ ನೀತಿಯಲ್ಲಿ ಮೂಢಭಕ್ತಿಗಿಂತ ವಿಚಾರಸಿದ್ಧವಾದ ಮಿತ್ರಗುಣ ಹೆಚ್ಚಾಗಿರಬೇಕು.

ಹೀಗೆ (೧) ಜೀವನೋತ್ಸಾಹ, (೨) ಪುರುಷಪ್ರಯತ್ನ, ಮತ್ತು (೩) ಲೋಕಸ್ನೇಹ–ಈ ಮೂರು ಗುಣಗಳು ನಮ್ಮ ಜನದ ಸ್ವಭಾವದಲ್ಲಿ ಪ್ರಬಲವಾಗಿರಬೇಕು. ಆ ಗುಣಗಳ ಕಾರ್ಯರೂಪಗಳೇ (೧) ಪ್ರಗತಿ, (೨) ವಿಜ್ಞಾನ, (೩) ಸೌಜನ್ಯ. ಇವುಗಳಲ್ಲಿ ಮನಃಪೂರ್ವಕವಾದ ನಂಬಿಕೆ ನಮ್ಮ ಜನದ ಉದ್ಧಾರಕ್ಕೆ ಮೊದಲು ಅವಶ್ಯವಾಗಿರುವ ಸಿದ್ಧತೆ.

ಇಂದಿನ ಬದುಕು :

ಆದರೆ ಈಗ ನಮ್ಮ ಜನ ಬದುಕುತ್ತಿಲ್ಲವೆ? ಇದ್ದಾರೆ. ಆದರೂ ಅದೆಂಥ ಬದುಕು? ಬದುಕಲಾರದ ಬದುಕು, ಅರೆಮನಸ್ಸಿನ ಬದುಕು; ಇಹಕ್ಕೆ ಸಾಲದು, ಪರಕ್ಕೆ ಮುಟ್ಟದು.

ಗಾಣದ ಎತ್ತು ಕಣ್ಣು ಮುಚ್ಚಿಕೊಂಡು, ಹೆಜ್ಜೆಯಿಟ್ಟಲ್ಲಿಯೇ ಹೆಜ್ಜೆಯಿಡುತ್ತ, ತುಳಿತುಳಿದ ಸುತ್ತುದಾರಿಯನ್ನೇ ಮರಮರಳಿ ತುಳಿಯುವಂತೆ, ನಮ್ಮಲ್ಲಿ ಬಹು ಮಂದಿ ಯಾವುದೋ ಒಂದು ಕುರುಡು ಮಾಮೂಲನ್ನೇ ಹಿಡಿದು ನಡೆಯುತ್ತಿದ್ದೇವೆ. ಅದರಲ್ಲೊಂದು ವಿಚಾರಜ್ಞಾನವಿಲ್ಲ, ಸಹಜವಾದ ಉಲ್ಲಾಸವಿಲ್ಲ. ಅಥವಾ ಕುರಿಯ ಹಿಂಡಿನಂತೆ ಹಿಂದುಮುಂದು ನೋಡದೆ ಯಾರನ್ನೋ ಅನುಸರಿಸಿ ನುಗ್ಗುತ್ತೇವೆ. ಯಾರು ಹೇಳಿದ ಮಾತನ್ನೋ ಮಂತ್ರವೆಂದು ನಂಬಿ, ಮುಖಂಡರೆಂಬವರನ್ನು ಮನೆ ದೇವರು ಮಾಡಿಕೊಳ್ಳುತ್ತೇವೆ. ಅದರಲ್ಲಿ ಒಂದು ಸ್ವತಂತ್ರ ವಿವೇಕವಿಲ್ಲ; ನೈಜ ಸಾಹಸವಿಲ್ಲ.

ಬದುಕು ನಮ್ಮ ಪಾಲಿಗೆ ಹಳಸಿದೆ. ಅದು ನಿರ್ಜೀವಿಯಾದ ಯಂತ್ರದಂತೆ, ನಮ್ಮ ಸ್ವಂತ ವಿಮರ್ಶೆಯೇನೂ ಇಲ್ಲದೆಯೇ ಮಂಕಾಗಿ ನಡೆಯುತ್ತಿದೆ. ಅದು ನಿಜವಾದ ಬದುಕಲ್ಲ. ನಿಜವಾದ ಬದುಕು ಗಿಡದ್ದು, ಯಂತ್ರದ್ದಲ್ಲ. ಗಿಡದಲ್ಲಿ ದಿನ ದಿನವೂ ಹೊಸ ಚಿಗುರೂ, ಹೊಸ ಮೊಗ್ಗೂ ಕಾಣುತ್ತದೆ. ಅದರಂತೆ ನಮ್ಮ ಜೀವನದಲ್ಲಿಯೂ ಹಳಸಲು ಮಾಸಲುಗಳು ಇಲ್ಲದೆ, ಹೊಸ ಕಾಂತಿ ಹೊಸ ಸಂಭ್ರಮಗಳು ಕಾಣುತ್ತಿರಬೇಕು. ಅದೇ ನವಜೀವನ. ಅದು ನಮ್ಮ ಸ್ವಂತ ಯತ್ನದ ಫಲ. ಸ್ವತಂತ್ರ ಪ್ರಯತ್ನದಿಂದ ಹೊಸದಾಗದೇ ಇರುವ ಬಾಳು ಉಸಿರಾಡುತ್ತಿದ್ದರೂ ಸತ್ತ ಬಾಳೇ ಸರಿ.

ನಮ್ಮ ದೇಶದಲ್ಲಿ ಯಾರನ್ನು ಏನು ಕೇಳಿದರೂ, ಅವರ ಬಾಯಿಂದ "ದೇವರು, ಧರ್ಮ, ಭಕ್ತಿ, ಕರ್ಮ, ಪರಮಾತ್ಮ, ಸತ್ಯ, ಅಹಿಂಸೆ" –ಇಂಥಾ ಮಾತುಗಳು ಘಳಿಗೆಗೆ ಹತ್ತು ಸಲ ನುಗ್ಗಿಬರುತ್ತವೆ. ಎಲ್ಲರೂ ಭಗವದ್ಗೀತೆಯನ್ನು ಹೇಳುವವರೇ. ನಮ್ಮ ಬಾಳನ್ನು ನೋಡಿದರೆ ಮಾತ್ರ ಆ ಭಾರೀ ಮಾತುಗಳ ಅರ್ಥವೇನೂ ರುಜುವಾತಿಗೆ ಬರುತ್ತಿಲ್ಲ.

ಇದೇನು ಅಸಂಬದ್ಧ?

ಭೂಮಂಡಲದ ಇತರ ದೇಶಗಳೊಡನೆ ಹೋಲಿಸಿದರೆ ನಮ್ಮ ಭಾರತ ದೇಶಕ್ಕೆ ದೇವರ ಅನುಗ್ರಹವಾಗಿ ಬಂದಿರುವ ಸಂಪತ್ತೇನೂ ಕಡಮೆಯಾದದ್ದಲ್ಲ. ಯಥೇಷ್ಟವಾಗಿ ಭೂಮಿ, ಅದೂ ಫಲವತ್ತಾದದ್ದು; ಕೋಟಿಗಟ್ಟಲೆ ಜನ, ಅವರೂ ತಕ್ಕ ಮಟ್ಟಿಗೆ ಬುದ್ಧಿಯಿರುವವರು; ದೊಡ್ಡ ದೊಡ್ಡ ಬೆಟ್ಟಗಳು, ಕಾಡುಗಳು, ನದಿಗಳು; ಬಗೆಬಗೆಯ ಸಸ್ಯವೃಕ್ಷಗಳು; ನಾನಾವಿಧದ ಖನಿಜಲೋಹಗಳು; ವಿಸ್ತಾರವಾದ ಸಮುದ್ರತೀರ; ಬಗೆಬಗೆಯ ವ್ಯವಸಾಯಗಳಿಗೆ ಅನುಕೂಲವಾದ ವಾಯುಗುಣ–ಇಷ್ಟೆಲ್ಲ ಸ್ವಾಭಾವಿಕ ಸೌಕರ್ಯಗಳು ನಮ್ಮ ದೇಶಕ್ಕೆ ಇವೆ.

ಆದರೂ ಇಂಥಾ ನಮ್ಮ ದೇಶದಲ್ಲಿರುವ ಬಡತನಕ್ಕಿಂತ ಹೆಚ್ಚಿನ ಕಷ್ಟಜೀವನ ಇನ್ನೆಲ್ಲಿಯೂ ಇರಲಾರದು. ನೂರರಲ್ಲಿ ತೊಂಬತ್ತು ಮಂದಿಗೆ ದಿನಕ್ಕೆ ಒಪ್ಪತ್ತಾದರೂ ಹೊಟ್ಟೆತುಂಬ ಊಟವಿಲ್ಲ. ಮನೆಮನೆಯಲ್ಲೂ ಯಾವಾಗಲೂ ಏನಾದರೊಂದು ರೋಗ. ಎಲ್ಲರಿಗೂ ಯಾವಾಗಲೂ "ನಾಳೆಯ ಗತಿಯೇನು?" ಎಂಬ ಚಿಂತೆ. ಯಾರಿಗೂ ಧೈರ್ಯವಿಲ್ಲ. ಯಾರಲ್ಲೂ ಸಾಹಸವಿಲ್ಲ. ಯಾವ ದೊಡ್ಡ ಪ್ರಯತ್ನಕ್ಕೂ ಏಳಿಗೆಯಿಲ್ಲ. ಎಲ್ಲರದೂ ಕುಗ್ಗಿದ ಬಾಳು. ನಮ್ಮ ಬದುಕಿನಲ್ಲಿ ಜೀವಕಳೆಯಿಲ್ಲ; ನಮ್ಮ ಬಾಳಿಗೆ ಬೆಲೆಯಿಲ್ಲ. ನಮ್ಮ ದೇಶಕ್ಕೆ ಮನ್ನಣೆಯಿಲ್ಲ.

ಏಕೆ ಹೀಗೆ? ಪ್ರಕೃತಿ ಕೊಟ್ಟ ಐಶ್ವರ್ಯ ಅಷ್ಟಿದ್ದರೂ ನಮ್ಮ ದಾರಿದ್ರ್ಯ ಇಷ್ಟೇಕೆ?

ಕ್ಷೀಣದಶೆಗೆ ಕಾರಣ? :

ಇದಕ್ಕೆ ಒಬ್ಬೊಬ್ಬರು ಒಂದೊಂದು ಕಾರಣವನ್ನು ಹೇಳುತ್ತಾರೆ. ಕೆಲವರು ಎನ್ನುತ್ತಾರೆ: "ಈ ದೇಶ ಪರದೇಶದವರ ಪಾಲಾಯಿತು. ಅವರು ನಮ್ಮನ್ನು ಎಂದೆಂದಿಗೂ ತಮ್ಮ ಸ್ವಾಧೀನದಲ್ಲಿ ಉಳಿಸಿಕೊಂಡಿರುವುದಕ್ಕೋಸ್ಕರ ನಮ್ಮನ್ನು ಹೀಗೆ ಅರೆಹೊಟ್ಟೆ ಅರೆಬಟ್ಟೆಗಳಲ್ಲಿರಿಸಿದರು" –ಎಂದು. ಇದು ಕೊಂಚಮಟ್ಟಿಗೆ ಹಾಗೆ ಇರಬಹುದು. ಆದರೆ ಈ ದೇಶ ಮೊದಲು ಪರಾಧೀನವಾದದ್ದು ಯಾರ ಅಶಕ್ತಿಯಿಂದ? ನಾವು ಆಗ ಸೋತದ್ದು ಏಕೆ?

ಇನ್ನು ಕೆಲವರೆನ್ನುತ್ತಾರೆ: "ಈ ದೇಶದ ಜನ ಒಗ್ಗಟ್ಟಿಲ್ಲದವರು. ಒಬ್ಬರಲ್ಲೊಬ್ಬರಿಗೆ ಅಪನಂಬಿಕೆ, ಅಸಹನೆ. ಹೀಗೆ ಅವರ ಬಲ ತಗ್ಗಿದೆ" –ಎಂದು. ಇದು ನಿಜವಿರಬಹುದು. ಇದಕ್ಕಾದರೂ ಏನು ಕಾರಣ?

ಇನ್ನು ಕೆಲವರ ಅಭಿಪ್ರಾಯ: "ನಮ್ಮಲ್ಲಿ ಮತ ಜಾತಿಗಳ ಅವಾಂತರ ಅತಿ. ಅದರಿಂದ ಜನಕ್ಕೆ ಬುದ್ಧಿ ಕೆಟ್ಟಿದೆ" – ಎಂದು. ಹೀಗೂ ಇದ್ದೀತು. ಆದರೆ ನಮ್ಮ ಮತ ಜಾತಿ ಪದ್ಧತಿಗಳಲ್ಲಿರುವ ದೋಷಾಂಶ ಯಾವುದು? ಹಿಂದೆ ವರ್ಣಾಶ್ರಮ ವ್ಯವಸ್ಥೆಯಿದ್ದಾಗ ದೊಡ್ಡ ದೊಡ್ಡ ಚಕ್ರಾಧಿಪತ್ಯಗಳೂ ಶೌರ್ಯ ಸಾಹಸಗಳೂ ಸೌಖ್ಯ ವೈಭವಗಳೂ ಇರಲಿಲ್ಲವೆ?

ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ: "ಈ ದೇಶದಲ್ಲಿ 'ಸಯೆನ್ಸ್' (Science) ಎಂಬ ಪ್ರಕೃತಿವಿಜ್ಞಾನ ಶಾಸ್ತ್ರದ ಪ್ರಯೋಗವೂ ಯಂತ್ರೋಪಕರಣಗಳ ಬಳಕೆಯೂ ಸಾಲದು. ಆದದ್ದರಿಂದ ನಾಗರಿಕತೆಯ ಮಟ್ಟ ಏರಿಲ್ಲ" –ಎಂದು. ಇದನ್ನೂ ಒಪ್ಪಿಕೊಳ್ಳಬಹುದು. ಆದರೆ ನಮ್ಮ ದುಃಖಸ್ಥಿತಿಯ ಮೂಲಕಾರಣಗಳಲ್ಲಿ ಮೊಟ್ಟಮೊದಲನೆಯದು ಅದೇನೆ?

ಹೀಗೆ ಇನ್ನೂ ಎಷ್ಟೋ ದುರದೃಷ್ಟ ಕಾರಣಗಳನ್ನು ಹೇಳಬಹುದು. ಈ ನಾನಾ ಕಾರಣಗಳನ್ನು ಕೇಳಿ ಸ್ತಬ್ದರಾದ ಜನರು– "ಇದೆಲ್ಲಾ ದೈವೇಚ್ಛೆ", "ವಿಧಿಲೀಲೆ", "ಹಣೆಯಬರಹ" ಎಂದು ಹೇಳಿ ಚರ್ಚೆ ಮುಗಿಸುತ್ತಾರೆ.

ಜೀವನೋತ್ಸಾಹ :

ನಮ್ಮಲ್ಲಿರುವ ಯಾವ ಒಂದು ಲೋಪವನ್ನು ಮೊದಲು ಸರಿಪಡಿಸಿದರೆ ಉಳಿದೆಲ್ಲ ಕಷ್ಟದ ನಿವಾರಣೆಯೂ ಸ್ವತಏವ ಆದೀತೋ ಆ ಆದಿ ಕಾರಣವನ್ನು ನಾವೀಗ ಹುಡುಕಬೇಕು. ಅದನ್ನು ನಿರ್ದಾಕ್ಷಿಣ್ಯವಾಗಿ ಹುಡುಕುತ್ತ ಹೋದರೆ ನಮ್ಮ ದುರವಸ್ಥೆಯ ಮೂಲಕಾರಣ ನಿಜವಾಗಿ ನಮ್ಮಲ್ಲಿ ಸಾಮಾನ್ಯವಾಗಿ ಬಂದಿರುವ ಸೋಲುಮನಸ್ಸೆಂದೇ, –ನಮ್ಮ ವಿವೇಕಶೂನ್ಯವಾದ ವಿರಕ್ತಿಯೆಂದೇ–ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಾವು ಉತ್ಸಾಹವಿಲ್ಲದ, ವೀರ್ಯವಿಲ್ಲದ, ತಮ್ಮಲ್ಲಿ ತಮಗೇ ನಂಬಿಕೆಯಿಲ್ಲದ ಜನವಾಗಿದ್ದೇವೆ. ಈ ಸೋಲುಮನಸ್ಸು ಹೋಗಿ ನಮಗೆ ಗೆಲುವುಮನಸ್ಸು ಬರಬೇಕು.

ನಮ್ಮ ಊರು ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಪ್ರಯತ್ನ ನಡೆಯದೆ ಇಲ್ಲ. ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರಂಥವರು ಸರಕಾರದ ಸಹಾಯ ಪಡೆದ ಸಂಸ್ಥೆಗಳ ಮೂಲಕವೂ, ಮಹಾತ್ಮ ಗಾಂಧಿಯವರಂಥವರು ಸ್ವತಂತ್ರವಾದ ಪ್ರಜಾಸಂಸ್ಥೆಗಳ ಮೂಲಕವೂ ಗ್ರಾಮಪುನರುಜ್ಜೀವನಕ್ಕಾಗಿ ಎಷ್ಟೋ ಕಾರ್ಯಯೋಜನೆಗಳನ್ನು ನಡಸಿದ್ದಾರೆ. ಆ ಮಹಾಪ್ರಯತ್ನಗಳು ಎಷ್ಟು ದೂರ ಫಲಕಾರಿಯಾಗಬಹುದೆಂದು ನಿರೀಕ್ಷಣೆಯಿತ್ತೋ ಅದರಲ್ಲಿ ನೂರರಲ್ಲೊಂದರಷ್ಟೂ ಆಗಿಲ್ಲ. ಇದಕ್ಕೆ ಕಾರಣವೇನು? ಆ ಪ್ರಯತ್ನಗಳಿಗೆ ಸಾಮಾನ್ಯ ಜನದ ಅಂತರಂಗದಿಂದ ಪುಷ್ಟಿ ದೊರೆಯದೆ ಹೋದದ್ದು. ನೂರು ಮಂದಿಯ ಪೈಕಿ ಯಾರೋ ನಾಲ್ಕು ಮಂದಿ ಅಧಿಕಾರಪೀಠಸ್ಥರೋ ಸಮಾಜಪ್ರಮುಖರೋ ವಿದ್ವನ್ಮಣಿಗಳೋ ಮಾಡಿದ ಯತ್ನವು ಬಹುದೂರ ಸಾಗಲಾರದು. ಅಂಥ ಪ್ರಯತ್ನವು ಜನಸಾಮಾನ್ಯಕ್ಕೆ ಎಲ್ಲಿಂದಲೋ ಹೊರಗಣಿಂದ ಬಂದು, ಅವರ ಮೇಲುತೊಗಲಿಗೆ ತಗಲುಹಾಕಿದ ಒಂದು ಹೊದಿಕೆಯಾದೀತೇ ಹೊರತು, ಅದು ಜನತೆಯ ಒಳಗಿನಿಂದ ತಾನಾಗಿ ಬೆಳೆದುಬಂದ ಆರೋಗ್ಯದ ಹೊಸ ಚರ್ಮಕಾಂತಿಯಾಗಲಾರದು. ಯಾವ ದೇಶದಲ್ಲೇ ಆಗಲಿ, ಜನಜೀವನ ಮೇಲ್ಮಟ್ಟಕ್ಕೆ ಹತ್ತಬೇಕಾದರೆ ಅದಕ್ಕೆ ತಕ್ಕ ಪ್ರಯತ್ನ ಸಾಮಾನ್ಯ ಜನದ ಹೃದಯದೊಳಗಿನಿಂದ ಸ್ವಾಭಾವಿಕವಾಗಿ ಹೊರಕ್ಕೆ ಹರಿದುಬಂದ

ಚೈತನ್ಯ ಪ್ರವಾಹವಾಗಬೇಕು. ಅದು ಯಾರೋ ಹೊರಗಿನಿಂದ ಅವರ ಮೇಲೆ ಹೊರಿಸಿಟ್ಟ ಹೊರೆಯಾಗಬಾರದು.

ಒಂದು ದಿಟವಾದ ಕಥೆ :

ಕಲ್ಯಾಣಪಟ್ಟಣದಲ್ಲಿ ಒಬ್ಬ ದೊಡ್ಡ ಮನುಷ್ಯರು ಒಂದು ಭಾರೀ ಬಂಗಲೆಯನ್ನು ಕಟ್ಟಿಸಿ, ಅದರ ಆವರಣದಲ್ಲಿ ಒಂದು ಬಾವಿಯನ್ನು ತೋಡಿಸಿದರು. ಅದು ೭೦–೮೦ ಅಡಿ ಕೆಳಕ್ಕೆ ಇಳಿದಿದ್ದರೂ ಧ್ರುವಜಲ ಕಾಣಲಿಲ್ಲ. ಮುಂದೆ ಏನು ಮಾಡುವುದೆಂದು ತೋರದೆ ಅವರು ಚಿಂತಿಸುತ್ತಾ ಇದ್ದಾಗ, ಅವರು ಮದ್ರಾಸಿಗೆ ಒಬ್ಬ ವಕೀಲಿಸ್ನೇಹಿತರನ್ನು ನೋಡಲು ಹೋಗಬೇಕಾದ ಸಂದರ್ಭವೊಂದು ಬಂತು. ಅದೇ ಸಮಯದಲ್ಲಿ ಆ ಮದ್ರಾಸು ವಕೀಲರು ತಮ್ಮ ಆರೋಗ್ಯಕ್ಕಾಗಿ ಕಲ್ಯಾಣಪಟ್ಟಣದಲ್ಲಿ ವಾಸಮಾಡಲು ಮನೆ ಕೊಂಡುಕೊಳ್ಳಬೇಕೆಂದು ಯೋಚಿಸುತ್ತಿದ್ದರು. ಅವರು ತಮ್ಮ ಯೋಚನೆಯನ್ನು ನಮ್ಮ ಕಲ್ಯಾಣಪಟ್ಟಣದ ದೊಡ್ಡ ಮನುಷ್ಯರಿಗೆ ಹೇಳಿ– "ನಿಮ್ಮ ದೃಷ್ಟಿಯಲ್ಲಿ ಯಾವುದಾದರೂ ಒಳ್ಳೆಯ ಮನೆ ಕ್ರಯಕ್ಕಿದೆಯೆ?" ಎಂದು ಕೇಳಿದರು. ಈ ದೊಡ್ಡಮನುಷ್ಯರು– "ಆಹಾ, ನನ್ನ ಸ್ನೇಹಿತರದೊಂದು ಮನೆ ಇದೆ, ಹೊಸದು" ಎಂದರು. "ಬಾವಿ ಇದೆಯೆ? ಬಾವಿಯಿಲ್ಲದಿದ್ದರೆ ನಮಗೆ ಬೇಕಿಲ್ಲ. ನಲ್ಲಿಯ ನೀರು ಮಡಿಗೆ ಆಗುವುದಿಲ್ಲವಲ್ಲ?" ಎಂದು ಕೇಳಿದರು ಮದ್ರಾಸಿನವರು. ಕಲ್ಯಾಣಪಟ್ಟಣದವರು– "ಬಾವಿಯಿಲ್ಲದೆ ಅದೆಂಥ ಮನೆ? ಸೊಗಸಾದ ಬಾವಿಯಿದೆ; ಕ್ಷೀರಸಮುದ್ರದ ಹಾಗೆ ನೀರು" ಎಂದರು. ಸರಿ. ಅದೇ ಮುಂದಿನ ಶನಿವಾರ, ಅವರಿಬ್ಬರೂ ಕಲ್ಯಾಣಪಟ್ಟಣಕ್ಕೆ ಬಂದು ಬಂಗಲೆ ಬಾವಿಗಳನ್ನು ನೋಡತಕ್ಕದ್ದೆಂದು ತೀರ್ಮಾನವಾಯಿತು. ಅದರಂತೆ ಬಂದು ನೋಡುವ ವೇಳೆಗೆ ಆ ಬಾವಿಯಲ್ಲಿ ಮೇಲಿನಿಂದ ೨–೩ ಮಾರುಗಳಷ್ಟು ಕೆಳಗಿನವರೆಗೆ ತಿಳಿನೀರು ತುಂಬಿತ್ತು. ಮೂವತ್ತು ಸಾವಿರ ರೂಪಾಯಿಗೆ ಆ ಬಂಗಲೆಯ ಮಾರಾಟವೂ ಆಯಿತು. ಆಮೇಲೆ ಎರಡು ವಾರ ಕಳೆದು ಮದರಾಸಿನವರು ಆ ಬಂಗಲೆಯಲ್ಲಿ ವಾಸಮಾಡಲು ಬಂದರು. ಆಗ್ಗೆ ಬಾವಿಯಲ್ಲಿ ನೀರು ಕೊಂಚ ಮಾತ್ರ ಇಳಿದುಹೋಗಿತ್ತು. ಆದರೂ ಇನ್ನೂ ಬೇಕಾದಷ್ಟಿತ್ತು. ಇನ್ನೊಂದೆರಡು ವಾರವಾದಮೇಲೆ ಆ ಬಾವಿ ಒಣ ಹಳ್ಳವಾಯಿತು. ನಲ್ಲಿ ತಿರುಗಿಸಿ ತುಂಬಿಸಿದ್ದ ನೀರು ಎಷ್ಟು ದಿವಸ ಇದ್ದೀತು? ಒಳಗೆ ಊಟೆ ಉಕ್ಕುತ್ತಿದ್ದರಲ್ಲವೆ ಬಾವಿಯಲ್ಲಿ ನೀರಿನ ಸಮೃದ್ಧಿ?

ಮನುಷ್ಯನ ಬಾಳೂ ಹಾಗೆಯೇ; ದೇಶದ ಬಾಳೂ ಹಾಗೆಯೇ ಸರಿ. ಹೊರಗಣ ಸ್ನೇಹಿತರು ಎಷ್ಟು ಸಹಾಯ ನೀಡಿದರೆ ಏನು? ಹೊರಗಿನಿಂದ ಸರಕಾರ ಎಷ್ಟು ಒತ್ತಾಸೆ ಕೊಟ್ಟರೆ ಏನು? ಜನದ ಒಳಗಡೆ ಸತ್ತ್ವದ ಊಟೆ ಉಕ್ಕದಿದ್ದರೆ ಹೊರಗಿನಿಂದ ಯಾರು ಮಾಡುವ ಉಪಕಾರವೂ, ಎಂಥ ದೊಡ್ಡ ಸಹಾಯವೂ ಏನೇನೂ ಫಲಿಸಲಾರವು. ಚಿಲುಮೆಯಲ್ಲಿ ತಿಳಿನೀರು ಹೊಮ್ಮುವಂತೆ ಜನರ ಮನಸ್ಸಿನಲ್ಲಿ ಜೀವನೋತ್ಸಾಹವೂ ಅಂತಸ್ಸತ್ತ್ವವೂ ತಡೆಬಿಡುವಿಲ್ಲದೆ ಹೊಮ್ಮಿ ನಾಲ್ಕು ಕಡೆಗೂ ನುಗ್ಗುತ್ತಿರಬೇಕು. ಅದು ಬದುಕುವ ಬದುಕಿನ ಲಕ್ಷಣ.

ಲೋಕದಲ್ಲಿ ಇನ್ನಾವ ಜನಕ್ಕೂ ಇಲ್ಲದ ಸೋಲುಮನಸ್ಸು ಇಂಡಿಯಾ ದೇಶದ ನಮಗೆ ಹೇಗೆ ಬಂತು?

ಮಹರ್ಷಿಗಳ ಜೀವಧ್ವನಿ :

ಪ್ರಪಂಚದಲ್ಲಿರುವ ಗ್ರಂಥಗಳಲ್ಲೆಲ್ಲಾ ನಮ್ಮ ವೇದಗಳೇ ಅತ್ಯಂತ ಪ್ರಾಚೀನವಾದದ್ದೆಂದು ಎಲ್ಲ ಜನರೂ ಅಂಗೀಕರಿಸಿದ್ದಾರೆ. ಅಂಥಾ ವೇದಗಳಲ್ಲಿ ಸೋಲುಮನಸ್ಸಿನ ಸೂಚನೆ ಕಾಣಬರುವುದಿಲ್ಲ. ಅದಕ್ಕೆ ಪ್ರತಿಯಾಗಿ, ಗೆಲುಮನಸ್ಸಿನ ಧ್ವನಿ ಸ್ಪಷ್ಟವಾಗಿ ಕೇಳಬರುತ್ತದೆ. ಅಲ್ಲಿಯ ಮಹರ್ಷಿಗಳ ಪ್ರಾರ್ಥನೆ ಹೀಗೆ [1]

"ದೇವತೆಗಳಿರಾ, ನಾವು ಬದುಕಬೇಕು; ನಮಗೆ ದೀರ್ಘಾಯುಸ್ಸನ್ನು ಕೊಡಿರಿ; ನಮ್ಮ ಕಿವಿ ಶುಭಗಳನ್ನು ಕೇಳುತ್ತಿರಲಿ; ನಮ್ಮ ನಾಲಗೆಗೆ ರುಚಿರುಚಿಯಾದ ಆಹಾರ ಸಿಕ್ಕುತ್ತಿರಲಿ; ನಮ್ಮ ಮನಸ್ಸಿನಲ್ಲಿ ಉಲ್ಲಾಸ ಉಕ್ಕುತ್ತಿರಲಿ; ನಮ್ಮ ಮಾತು ಪಟುವಾಗಿರಲಿ; ನಮ್ಮ ಬುದ್ಧಿಶಕ್ತಿ ಜೋರಾಗಿರಲಿ; ನಮ್ಮ ದೇಶಸಾಮರ್ಥ್ಯ ಜಯಪ್ರದವಾಗಿರಲಿ; ನಮ್ಮ ಶತ್ರುಗಳು ಸೋತು ಓಡಲಿ; ನಮ್ಮ ಸಂಪತ್ತು ಬೆಳೆಯಲಿ; ನಮಗೆ ಗೋವುಗಳು ಧನಧಾನ್ಯಗಳು ಸಮೃದ್ಧಿಯಾಗಲಿ. ಓ ದೇವತೆಗಳಿರಾ, ನೀವು ನಮ್ಮಿಂದ ನೂರು ನೂರು ವರ್ಷ ಸಂತೋಷದ ಸೇವೆಯನ್ನು ಮಾಡಿಸಿಕೊಳ್ಳಿರಿ; ನಮಗೆ ಕಾಲಕಾಲಕ್ಕೆ ಮಳೆಯನ್ನು ಕೊಡಿರಿ; ನಮ್ಮ ಭೂಮಿಗಳನ್ನು ಫಲವತ್ತಾಗಿರಿಸಿರಿ; ನಮ್ಮನ್ನು ರೋಗಗಳು ಸೋಂಕದಂತೆ ಮಾಡಿರಿ; ನಮಗೆ ನಾನಾ ಭೋಗಸಾಮಗ್ರಿಗಳನ್ನು ಒದಗಿಸಿರಿ" – ಈ ರೀತಿಯಾಗಿತ್ತು ನಮ್ಮ ಆರ್ಯವಂಶದ ಮೂಲಪುರುಷರ ಮನೋವೃತ್ತಿ. ಅದು ಜೀವನೋತ್ಸಾಹದ ಮನೋವೃತ್ತಿ; ಜಯಶ್ರದ್ಧೆಯ ಮನೋವೃತ್ತಿ; ಆತ್ಮವಿಶ್ವಾಸದ ಮನೋವೃತ್ತಿ. ಅವರು ಅಪಜಯದ ದೈನ್ಯವನ್ನು ಅರಿಯದವರು; ಜೀವನದಲ್ಲಿ ಅವರು ಬೇಸರಗೊಂಡಿದ್ದವರಲ್ಲ; ಜೀವನವು ಒಂದು ಧೈರ್ಯೋಲ್ಲಾಸದ ಸಾಹಸವೆಂದು ಅವರು ಭಾವಿಸಿದ್ದರು.

ನಮ್ಮ ಪೂರ್ವಿಕರ ಮನೋವೃತ್ತಿ ಸಾಮಾನ್ಯವಾಗಿ ಹಾಗಿದ್ದರೂ ಅವರಿಗೆ ಕಷ್ಟಪ್ರಸಕ್ತಿ ಇರಲೇ ಇಲ್ಲವೆಂದಲ್ಲ. ಈ ಮೇಲಣ ಪ್ರಾರ್ಥನೆಗಳನ್ನು ದೇವತೆಗಳಿಗೆ ಬಿನ್ನಯಿಸಿಕೊಳ್ಳುವ ವಾಕ್ಯಗಳ ನಡುವೆ, ಪ್ರಕೃತಿಯ ರೌದ್ರ, ಮನುಷ್ಯನ ಕ್ಷುದ್ರತೆ, ಶತ್ರುಭಯ, ಆಶಾಭಂಗ, ದುರ್ಭಿಕ್ಷೆ, ರೋಗ, ವಿಯೋಗ, ಮರಣ–ಇವೇ ಮೊದಲಾದ ದುಃಖಕಾರಣಗಳ ಸ್ಮರಣೆಯೂ ಇದೆ. ಋಷಿಗಳ ಜೀವನವೃಕ್ಷದಲ್ಲಿ ಒಂದು ಕಡೆ ಜೀವನಾಕಾಂಕ್ಷೆಯ ಚಿಗುರು ಹೊಸಹೊಸದಾಗಿ ಹುಟ್ಟಿದಂತೆ, ಇನ್ನೊಂದು ಕಡೆ ಕಷ್ಟ ಚಿಂತೆಯ ತೊಗಟೆ ಒರಟುಕಟ್ಟಿ ಬಿಗಿಯುತ್ತ ಬಂತು. ಹೀಗೆ ಹುಟ್ಟಿದವು ವೇದದ ಆರಣ್ಯಕ ಭಾಗಗಳು. ನಮ್ಮ ಜೀವನದ ಒಳತಿರುಳೇನು? ಕಣ್ಣಿಗೆ ಕಾಣಿಸುತ್ತಿರುವ ಪ್ರಪಂಚದ ಆಚೆ ಕಡೆ ಏನಿದೆ? "ನಾನು" ಎಂದುಕೊಳ್ಳುವ ಪ್ರಾಣಿಯ ಒಳಗಡೆ ಏನಿದೆ? ಬದುಕೆಂಬ ನದಿಯ ಊಟೆ ಎಲ್ಲಿದೆ? ಜಗತ್ತಿನಲ್ಲಿ ಕಾಣುವ ಶಕ್ತಿಗಳನ್ನು ಚಿಮ್ಮಿಸಿ ಹಾರಿಸುತ್ತಿರುವ ಲಂಘಕ (ಸ್ಪ್ರಿಂಗ್) ಯಂತ್ರ ಯಾವುದು? ಸೂರ್ಯನು ಎಲ್ಲಿಂದ ಬರುತ್ತಾನೆ? ಋತುಚಕ್ರವನ್ನು ತಿರುಗಿಸುವ ಕೈ ಯಾರದು? ಮೃತ್ಯುವೆಂಬುದೇನು? ಅದಾದ ಮೇಲೆ ಏನು?–ಈ ವಿಧವಾದ ಪ್ರಶ್ನೆಗಳೂ ತರ್ಕಗಳೂ ಬಹು ದೀರ್ಘಕಾಲ ನಡೆದಿರಬೇಕು. ಅದರಿಂದ ಆದ ಸಿದ್ಧಾಂತಗಳೇ ಉಪನಿಷತ್ತುಗಳ ಸಾರಾಂಶ.

ಈ ತರ್ಕ ದೀರ್ಘವಾಗಿ ಬೆಳೆಯಿತು. ಅದರ ವಾದವಿವಾದಗಳಲ್ಲಿ ಹುಟ್ಟಿಕೊಂಡವು ಅನೇಕ ಮತಗಳು. ಕೆಲವರು ಯಜ್ಞಯಾಗಾದಿ ಕರ್ಮಗಳೇ ದೊಡ್ಡವೆಂದರು. ಕೆಲವರು ಶಾಸ್ತ್ರ ಸಂಪ್ರದಾಯಗಳು ಮುಖ್ಯವೆಂದರು. ಇನ್ನು ಕೆಲವರು ತಪಸ್ಸು ಶ್ರೇಷ್ಠವೆಂದರು. ಮತ್ತೆ ಕೆಲವರು ಸಂಸಾರವೂ ದಾನಧರ್ಮಗಳೂ ಉತ್ತಮವೆಂದರು. ಇನ್ನೂ ಕೆಲವರು ವೈರಾಗ್ಯ ಸಂನ್ಯಾಸಗಳೇ ಸರ್ವೋತ್ಕೃಷ್ಟವೆಂದರು. ಮತ್ತೂ ಕೆಲವರು ಎಲ್ಲ ಉಪದೇಶಗಳೂ ಒಳ್ಳೆಯವೇ; ಆದರೆ ಒಂದೊಂದಕ್ಕೂ ಒಂದೊಂದು ಉಚಿತ

ಸ್ಥಳವುಂಟು; ಅದರದರ ಸ್ಥಳದಲ್ಲಿ ಪ್ರತಿಯೊಂದೂ ಸರಿಯೇ–ಎಂದು ಎಲ್ಲವನ್ನೂ ಸಮನ್ವಯಮಾಡಹೊರಟರು.

ಧೈರ್ಯನಷ್ಟದ ಯುಗ :

ಹೀಗೆ ನಾನಾ ಮತಗಳು ಹೊರಟು ಹೋರಾಡುತ್ತಿದ್ದ ಕಾಲದಲ್ಲಿ ದೇಶ ಚರಿತ್ರೆಯಲ್ಲಿ ಏನೋ ವಿಪರೀತ ವ್ಯತ್ಯಾಸಗಳು ನಡೆದಿರಬೇಕು. ಯಾವ ಮತವೇ ಆಗಲಿ, ಯಾವ ತತ್ತ್ವವೇ ಆಗಲಿ, ಲೋಕಜೀವನದ ಕಡೆಗೆ ದೃಷ್ಟಿಬೀರದೆ ಗುಹೆಯೊಳಗಡೆ ಇದ್ದುಕೊಂಡು ಬೆಳೆಯಲಾರದು. ಲೋಕಕ್ಕೋಸ್ಕರ ಮತವೆ ಹೊರತು ಮತಕ್ಕೋಸ್ಕರ ಲೋಕವಲ್ಲ. ಮತಸ್ಥಾಪಕನಿಗೆ ತಾನು ಹೊಸದೊಂದು ಮತವನ್ನು ಪ್ರಚಾರಮಾಡುವುದು ಅವಶ್ಯವೆಂದು ತೋರಿಬರುವುದು ಸುತ್ತಮುತ್ತಣ ಜನಸ್ಥಿತಿಯ ಕಾರಣದಿಂದ. ಅವನಿಗೆ ಮುಖ್ಯ ಪ್ರೇರಣೆ ತನ್ನ ಸಮಾಜದ ಅಸಮಾಧಾನ ಸ್ಥಿತಿಯಿಂದ ಬಂದಂಥಾದ್ದು. ಹೀಗೆ ಸುಮಾರು ೨,೫೦೦ ವರ್ಷಗಳ ಹಿಂದೆಯೇ ನಮ್ಮ ಪೂರ್ವಿಕರ ಸಮಾಜದ ಸಂದರ್ಭಗಳಲ್ಲಿ ಏನೋ ಒಂದು ಮಹಾ ವ್ಯತ್ಯಾಸ ನಡೆದಿದ್ದಿರಬೇಕು. ವೇದಮಹರ್ಷಿಗಳ ಕಾಲದ ಗೆಲುಮನಸ್ಸು ಹೋಗಿ ಈಚಿನ ಸೋಲುಮನಸ್ಸು ನಮ್ಮಲ್ಲಿ ಬಂದದ್ದಕ್ಕೆ ಆ ವ್ಯತ್ಯಾಸವೇ ಕಾರಣವಾಗಿರಬೇಕು.

ಜನದ ಮನೋಗತಿಯನ್ನು ಬದಲಾಯಿಸುವಷ್ಟು ಬಹಳ ದೊಡ್ಡದಾದ ಸಾಮಾಜಿಕ ವ್ಯತ್ಯಾಸಕ್ಕೆ ಎಷ್ಟೋ ಕಾರಣಗಳಿದ್ದಿರಬಹುದು. ಸಿಡಿಲು, ಭೂಕಂಪ, ಅತಿವೃಷ್ಟಿ ಮೊದಲಾದ ಪ್ರಕೃತಿಯ ಉತ್ಪಾತಗಳು; ರಾಜಕಾರಣದಿಂದ ಆದ ದೇಶೋಪದ್ರವ; ಪರದೇಶದಿಂದ ಬಂದ ಯುದ್ಧಸಂಕ್ಷೋಭೆ; ಬಹು ವರ್ಷಗಳ ವೀರಕ್ಷಾಮ, –ಇಂಥ ನಾನಾ ವಿಪತ್ಪರಂಪರೆಗಳಿಂದ ಜನದ ಮನೋದಾರ್ಢ್ಯ ಸಡಿಲುಬೀಳುವುದುಂಟು. ಹಾಗೆ ಮನಸ್ಸು ಮೆತ್ತಗಾಗಿರುವ ಸನ್ನಿವೇಶದಲ್ಲಿ ಒಬ್ಬ ಮಹಾಪುರುಷನು ದೇಶದಲ್ಲಿ ಹುಟ್ಟಿಕೊಂಡು ತನ್ನ ಬುದ್ಧಿಸಾಮರ್ಥ್ಯದಿಂದಲೋ ವಾಗ್ವೈಖರಿಯಿಂದಲೋ ಸೌಜನ್ಯ ಮಹಿಮೆಯಿಂದಲೋ ಮತ್ತಾವ ವ್ಯಕ್ತಿಪ್ರಭಾವದಿಂದಲೋ ಪ್ರಸಿದ್ಧನಾಗಿ, ಜನದ ಕಣ್ಣಿಗೆ ಹೊಸದೊಂದು ಗುರಿಯನ್ನು ತೋರಿಸಿ, ಅದರ ಪ್ರಯಾಣಗತಿಯನ್ನು ಬೇರೊಂದು ಕಡೆಗೆ ತಿರುಗಿಸಿರಬಹುದು. ಇಂಥ ಮಹತ್ತ್ವದ ಸಂಗತಿಯೊಂದು ಜೈನ ವರ್ಧಮಾನ ಮತ್ತು ಗೌತಮಬುದ್ಧ–ಇವರ ಕಾಲಕ್ಕೆ ಹಿಂದೆಯೇ ನಡೆದಿದ್ದಿರಬೇಕು. ಆರ್ಯ ಜನಾಂಗದ ಜೀವನಸಂತೋಷದ ಧ್ವನಿ ಕಡಮೆಯಾಗಿ ನಿರ್ವಿಣ್ಣತೆಯ ಧ್ವನಿ ಹೆಚ್ಚಾದದ್ದು ಆ ಕಾಲದಲ್ಲಿ ಇರಬಹುದು.

ಅಥವಾ, ಒಂದು ದೀರ್ಘಕಾಲದ ಜಯ ಸಂಪತ್ತುಗಳ ಅತಿಶಯ ಭೋಗದಿಂದಲೇ ಸತ್ತ್ವವೀರ್ಯಗಳ ಅಭ್ಯಾಸ ತಪ್ಪಿಹೋಗಿ, ಕಷ್ಟ ಆಪತ್ತುಗಳಿಗೆ ದಾರಿಯಾಗಿ, ಆ ಮೂಲಕ ಮನಸ್ಸು ಬದಲಾಯಿಸಿರಬಹುದು. ಲೋಕದಲ್ಲಿ ಸಾಧಾರಣವಾದ ಒಂದು ಅನುಭವವನ್ನು ಜ್ಞಾಪಕಕ್ಕೆ ತಂದುಕೊಳ್ಳೋಣ. ಒಬ್ಬ ಮನುಷ್ಯ ಬಡವನಾಗಿ ಹುಟ್ಟಿದ್ದರೂ ತನ್ನ ಬುದ್ಧಿವಿಶೇಷದಿಂದಲೋ ಗುಣಾತಿಶಯದಿಂದಲೋ ಊರಿನಲ್ಲಿ ಗಣ್ಯನಾಗಿ, ಹಣವಂತನಾಗಿ, ತನ್ನ ಕುಟುಂಬವನ್ನು ಐಶ್ವರ್ಯಸೌಖ್ಯದಲ್ಲಿ ಬಿಟ್ಟು ಕಾಲಾಧೀನನಾಗುತ್ತಾನೆ. ಅವನ ತರುವಾಯ ಅವನ ಮಕ್ಕಳು ಆ ಐಶ್ವರ್ಯವನ್ನು ಬೆಳಸುತ್ತಾರೆಂದೇ ಇಟ್ಟುಕೊಳ್ಳೋಣ. ಆದರೆ ಮೊಮ್ಮಕ್ಕಳ ಕಾಲಕ್ಕೋ ಮರಿ ಮಕ್ಕಳ ಕಾಲಕ್ಕೋ ಸುಖಲೋಲುಪತೆ ಅಭ್ಯಾಸವಾಗಿಬಿಟ್ಟಿರುತ್ತದೆ; ಸ್ವಪ್ರಯಾಸದ ಅಭ್ಯಾಸ ಹೋಗಿಬಿಟ್ಟಿರುತ್ತದೆ. ಅಲ್ಲಿಂದ ಮುಂದಕ್ಕೆ ಭೋಗಲಾಲಸೆ, ಕ್ರಮೇಣ ಸಂಪತ್ತಿನ ಹೊರಹರಿವು, ಬಳಿಕ ದಾಯಾದ ವೈಷಮ್ಯ, ಕಲಹ, ಕಾರ್ಪಣ್ಯ, ದಾರಿದ್ರ್ಯ, ದುಃಖ–ಹೀಗೆ ಕ್ರಮಕ್ರಮವಾಗಿ

ಕ್ಷೀಣದಶೆ ಆ ಕುಟುಂಬವನ್ನು ಆವರಿಸಿಕೊಳ್ಳುತ್ತದೆ. ಒಂದು ಜನಸಮಾಜದ ಚರಿತ್ರೆಯಲ್ಲೂ ಅದರಂತೆಯೇ ಸೌಖ್ಯ ಸಮೃದ್ಧಿಯು ಜನಕ್ಕೆ ವೀರ್ಯ ಸಾಹಸಗಳ ಅಭ್ಯಾಸವನ್ನು ತಪ್ಪಿಸಿ, ಅವರ ಹೆಜ್ಜೆಗಳನ್ನು ಅದಿರುಗಾಲು ಮಾಡಿ, ಅವರನ್ನೆಡವಿಸಿ ಬೀಳಿಸಬಹುದು. ಅಧೋಗತಿಯ ಮೂಲಕಾರಣಗಳು ಉನ್ನತ ಸ್ಥಿತಿಯೊಳಗಡೆ ಗೂಢವಾಗಿ ಅಡಗಿಕೊಂಡಿರುತ್ತವೆ. ಮೈಮರಸುವ ಸಂತೋಷ ಸಂಭ್ರಮದಲ್ಲಿ ಪ್ರಮಾದ ಆಲಸ್ಯಗಳ ಬೀಜಗಳು ಹುದುಗಿಕೊಂಡಿರುತ್ತವೆ. ಹೀಗೆ ಪುರಾತನಾರ್ಯರು ಕೃಷಿಮಾಡಿಕೊಂಡಿದ್ದ ಜೀವನಶ್ರದ್ಧೆಯ ದಿಗ್ವಿಜಯರಂಗದಲ್ಲಿಯೇ ಈಚಿನವರ ಮನೋದೌರ್ಬಲ್ಯವೂ ಅಪಜಯಬುದ್ಧಿಯೂ ಮೊಳೆತವೆಂದು ಹೇಳಿದರೂ ಅಸಂಗತವಾಗಲಾರದು.

ಅಂತೂ ಶಂಕರಾಚಾರ್ಯರ ಕಾಲಕ್ಕೆ ಹಿಂದೆಯೇ ನಮ್ಮ ಜನಕ್ಕೆ ಮನಸ್ಸಿನ ಉಲ್ಲಾಸ ಇಳಿದುಹೋಗಿತ್ತು. ಇಹಲೋಕವು ತುಚ್ಛವಾದದ್ದು; ನರಜನ್ಮವು ದೋಷಭೂಯಿಷ್ಠವಾದದ್ದು; ದೇಹವು ಹೇಯವಾದದ್ದು; ಇಂದ್ರಿಯ ಸುಖವು ನಿಂದ್ಯವಾದದ್ದು; ಭೋಗವು ಪಾಪಕರವಾದದ್ದು; ಅಪೇಕ್ಷಿಸಲರ್ಹವಾದದ್ದು ಏನಾದರೂ ಇದ್ದರೆ ಅದು ಪರಲೋಕ; ಅದಕ್ಕಿಂತ ಮೇಲಾದದ್ದು ಮೋಕ್ಷ, ಆದದ್ದರಿಂದ ಊರಿಗಿಂತ ಕಾಡು ಉತ್ತಮ. ಸಂಸಾರಕ್ಕಿಂತ ಸಂನ್ಯಾಸ ಉತ್ತಮ.

"ಸಾಕುಮಾಡೋ, ಜಲ್ಮಾ ಸಾಕುಮಾಡೋ."

ಇದು ನಮಗೆ ಈಗ ನೂರಾರು ವರ್ಷಗಳಿಂದ ಹಿರಿಯರು ಕಲಿಸುತ್ತಿರುವ ಹಾಡು.

ವೇದಾಂತದ ಆಭಾಸ :

ಈ ಜಗತ್ತು ಬ್ರಹ್ಮವಸ್ತುವಿನ ಲೀಲಾಭೂಮಿಯೆಂದೂ, ಪ್ರತಿಜೀವವೂ ಮೂಲರೂಪದಲ್ಲಿ ಆ ವಸ್ತುವಿನ ಒಂದು ಪ್ರತಿಬಿಂಬವೆಂದೂ, ಮನುಷ್ಯನು ವಿವೇಕದಿಂದ ಬಾಳಿದರೆ ಉತ್ತರೋತ್ತರ ಸೂಕ್ಷ್ಮದೃಷ್ಟಿಯನ್ನು ಸಂಪಾದಿಸಿ ಆ ಮಹಾತತ್ತ್ವವನ್ನು ಕಾಣಲಾದೀತೆಂದೂ, ವಿಚಾರಶೀಲನಾದವನಿಗೆ ಬಾಳ್ವೆ ಒಳ್ಳೆಯದೇ ಹೊರತು ಕೆಟ್ಟದ್ದೇನೂ ಅಲ್ಲವೆಂದೂ ವೇದಾಂತಶಾಸ್ತ್ರ ಬೋಧಿಸಿದ್ದು ನಿಜ. ಆದರೆ ಈ ಬೋಧನೆ ಜನಸಾಮಾನ್ಯರ ನಿತ್ಯಜೀವನದೊಳಕ್ಕೆ ವ್ಯಾಪಿಸಿದ್ದು ಅಪರೂಪ. ಶಂಕರಾಚಾರ್ಯರ ಗ್ರಂಥಗಳಿರುವುದು ಸಂಸ್ಕೃತ ಭಾಷೆಯಲ್ಲಿ. ಅವರ ತರುವಾಯ ಹುಟ್ಟಿದ ವೇದಾಂತ ಗ್ರಂಥಗಳನ್ನು ಎರಡು ಜಾತಿಗಳಾಗಿ ವಿಂಗಡಿಸಬಹುದು: (೧) ಪಂಡಿತರದು, (೨) ಪಾಮರರದು. ಪಂಡಿತ ಗ್ರಂಥಗಳು ಮುಖ್ಯವಾಗಿ ಸಂಸ್ಕೃತದಲ್ಲಿವೆ. ಪಾಮರರವು ಹೆಚ್ಚಾಗಿ ನಮ್ಮ ಕನ್ನಡದಂಥ ದೇಶ ಭಾಷೆಗಳಲ್ಲಿವೆ. ಆ ಎರಡು ಜಾತಿಗಳಿಗೂ ಇರುವ ವ್ಯತ್ಯಾಸವು ಭಾಷೆಯ ಮಟ್ಟಿನದಲ್ಲ ಅವುಗಳ ವಿಷಯ ಸ್ವಭಾವವು ಭಾಷೆಗಿಂತ ಮುಖ್ಯವಾದದ್ದು, ಪಂಡಿತ ರಂಜಕವಾದ ಗ್ರಂಥಗಳು ಶಾಂಕರಭಾಷ್ಯದ ಮೇಲಣ ಅಥವಾ ಇತರ ಭಾಷ್ಯಗಳ ಮೇಲಣ ವ್ಯಾಖ್ಯಾನ ಟೀಕೆಗಳು; ಇವು ತರ್ಕಪ್ರಧಾನವಾಗಿ ನಿಘಂಟು, ವ್ಯಾಕರಣ, ಅರ್ಥಚಮತ್ಕಾರ, ಪಾದದ ಯುಕ್ತಿ–ಇವುಗಳಿಂದ ತುಂಬಿರುತ್ತವೆ. ಶಂಕರಾಚಾರ್ಯರ ಅಭಿಪ್ರಾಯ ಹೀಗೆಯೇ ಎಂದು ವಿವರಿಸುವ ಗ್ರಂಥಗಳು ಕೆಲವು; ಅದು ಹಾಗಲ್ಲ, ಬೇರೊಂದು ರೀತಿ ಎಂದು ವಾದಿಸುವವು ಕೆಲವು; ಇದಕ್ಕೆ ಉತ್ತರಕೊಟ್ಟು ಮೊದಲು ಹೇಳಿದ್ದೇ ಸರಿಯೆಂದು ಸಿದ್ಧಾಂತ ಮಾಡುವವು ಇನ್ನು ಕೆಲವು; ಶಂಕರರ ಸಿದ್ಧಾಂತ ಒಪ್ಪತಕ್ಕದ್ದೇ ಅಲ್ಲವೆಂದು ಖಂಡನೆ ಮಾಡುವವು ಮತ್ತೆ ಕೆಲವು; ಈ ಖಂಡನೆಗಳನ್ನು ಖಂಡಿಸಿ

ಶಾಂಕರಭಾಷ್ಯವನ್ನು ಮಂಡನ ಮಾಡುವವು ಇನ್ನೂ ಕೆಲವು; ಈ ಮಂಡನೆಗಳನ್ನು ತುಂಡಿಸಿಹಾಕುವವು ಮತ್ತೂ ಕೆಲವು. ಹೀಗೆ ಹೊರಟಿದೆ ತರ್ಕದ ಮಹಾಪ್ರವಾಹ ನಮ್ಮ ಪಂಡಿತಸಾಹಿತ್ಯದಲ್ಲಿ.

ಪಾಮರಸಾಹಿತ್ಯವಾದರೋ, ಮೇಲಣ ಹಾಡಿನಂತೆ ಪ್ರಲಾಪಮಯವಾದದ್ದು, ಈ ದೇಹ ಒಂದು ಒಣಕಟ್ಟಿಗೆ; ಇದಕ್ಕೇನು ಶೃಂಗಾರ? ಮಡದಿ ಮಕ್ಕಳೆಂಬುದು ಒಂದು ಬೊಂಬೆಯಾಟ; ಅದಕ್ಕೆಷ್ಟು ಮುತುವರ್ಜಿ? ಪ್ರಪಂಚವೆಂಬುದು ಬರಿಯ ಮಾಯೆ; ಬದುಕೆಂಬುದು ನೀರ್ಗುಳ್ಳೆ; ಮನುಷ್ಯಪ್ರಯತ್ನವೆಂಬುದು ಅಧಿಕಪ್ರಸಂಗಿತನ; ನಡೆಯುವುದೆಲ್ಲಾ ವಿಧಿವಿಲಾಸ. ಎಲ್ಲಾ ಪೂರ್ವಾರ್ಜಿತ ಕರ್ಮ; ಸುಖವೆಂಬುದು ಕನಸು; ಸೌಂದರ್ಯವೆಂಬುದು ಭ್ರಾಂತಿ; ಈ ಗಾಳಿಗಂಟಿಗಾಗಿ ಶ್ರಮ ಪಡುವುದೇಕೆ? ದೈವ ತರುವುದನ್ನು ತಪ್ಪಿಸಿಕೊಳ್ಳುವ ಹಾಗಿಲ್ಲ; ದೈವ ತಾರದ್ದನ್ನು ಸಾಧಿಸಿಕೊಳ್ಳುವ ಹಾಗಿಲ್ಲ. ಮನುಷ್ಯತನವೇ ದುಃಖ.

> ಜನ್ಮ ದುಃಖಂ ಜರಾ ದುಃಖಂ ಜಾಯಾ ದುಃಖಂ ಪುನಃಪುನಃ ।
> ಸಂಸಾರಸಾಗರಂ ದುಃಖಂ ಸರ್ವಂ ದುಃಖಮಯಂ ಜಗತ್ ॥

ಇದು ಅಳುಮೋರೆಯ ಅಗ್ಗದ ವೇದಾಂತ. ನಮ್ಮ ಹರಿಶಿವದಾಸರುಗಳು ಹಾಡುವ ಹಾಡುಗಳೂ, ಪುರಾಣಿಕರು ಬಿತ್ತರಿಸುವ ಬೋಧನೆಗಳೂ, ಭಾಗವತರೂ ಕಥಕರೂ ಕೊಂಡಾಡಿ ಕಣ್ಣೀರು ಕರೆಯಿಸುವ ಪ್ರಸಂಗಗಳೂ ಈ ಗೋಳು ವೈರಾಗ್ಯದ ಪ್ರಶಂಸೆ.

ಇಂಥ ವಾದದಿಂದ ಸೃಷ್ಟಿಕರ್ತನ ಮೇಲೆ ದೂರು ಹೊರಿಸಿದಂತೆ ಆದೀತೆಂಬುದನ್ನು ನಮ್ಮ ವೈರಾಗ್ಯ ಪ್ರಚಾರಕರು ಗಮನಿಸಲಿಲ್ಲವೆಂದು ಕಾಣುತ್ತದೆ. ಸರ್ವದಾ ಕಷ್ಟನಿಷ್ಠುರಗಳನ್ನು ಅನುಭವಿಸುತ್ತಿರುವ ಸಾಮಾನ್ಯಜನದ ಕಿವಿಗೆ ಈ ಗೋಳುರಾಗ ರುಚಿಸುತ್ತದೆ. ಅದನ್ನು ಕೇಳುತ್ತಿರುವಾಗ ಅವರಿಗೆ ಏನೋ ಒಂದು ಸಮಾಧಾನ. ಈ ದುಃಖಸಮುದ್ರವನ್ನು ತಪ್ಪಿಸಿಕೊಳ್ಳಬೇಕಾದರೆ ದಾರಿ ಉಪವಾಸ, ದೇಹಶೋಷಣೆ, ದೈವಭಜನೆ, ಲೋಕಪರಿತ್ಯಾಗ, ಹೊಟ್ಟೆ ತುಂಬ ಊಟ ಕೇಳಬಾರದು; ಕೊರಗಾಟ ಹೋಗುವ ಹಾಗೆ ಸಂಪಾದಿಸಬಾರದು. ಪೂರ್ತಿಯಾಗಿ ಆತ್ಮಹತ್ಯೆಮಾಡಿಕೊಳ್ಳದೆ, ಪೂರ್ಣಾಂಗವಾಗಿ ಜೀವಿಸದೆ, ಅರೆಹೆಣವಾಗಿ ಬಾಳಬೇಕು. “ಸಾಕುಮಾಡೋ, ಜಲ್ಮಾ ಸಾಕುಮಾಡೋ” – ಎಂದು ಗೋಳಿಡುತ್ತಿರಬೇಕು. ಇದು ಪಾಮರಜನ ವೇದಾಂತ.

ಧೀರಬುದ್ಧಿ :

ಜೀವನಾಕಾಂಕ್ಷೆಯಲ್ಲಿಯೂ ದಿಗ್ವಿಜಯ ನಿರೀಕ್ಷೆಯಲ್ಲಿಯೂ ಆರಂಭವಾದ ವೇದಬೋಧನೆಯ ಹೊಳೆ ಕ್ರಮೇಣ ದೊಡ್ಡದಾಗಿ ಪರತತ್ತ್ವವಿಚಾರದ ಮಹಾನದಿಯಾಗಿ, ಆ ಬಳಿಕ ಎರಡು ಶಾಖೆಗಳಾಗಿ ಒಡೆಯಿತು. ಅವುಗಳಲ್ಲಿ ಒಂದು ಶಾಖೆಯು ತರ್ಕದ ಘಟಪಟಾದಿ ಮರುಭೂಮಿಗೆ ಹರಿದು, ಅಲ್ಲಿ ಮರಳಿನಲ್ಲಿ ಇಂಗಿ ಹೋಯಿತು. ಇನ್ನೊಂದು ಪ್ರವಾಹ ಅಳುಗೂರಿತನದ ಜವುಗುನೆಲದ ಹೂಳಿನೊಳಕ್ಕೆ ಹರಿದು, ಬುರುದೆ ರೊಚ್ಚಾಗಿದೆ. ಕವಲೊಡೆಯುವುದಕ್ಕೆ ಮುಂಚೆ ಇದ್ದ ಪವಿತ್ರವಾದ ನದಿಯನ್ನು ನಾವು ಹುಡುಕಿ ಕಂಡು,

ಅದರ ಅಮೃತಧಾರೆಯನ್ನು ನಮ್ಮ ಜೀವನಕ್ಷೇತ್ರದೊಳಕ್ಕೆ ಹರಿಯಿಸುವುದು ಈಗ ನಮ್ಮ ಕರ್ತವ್ಯವಾಗಿದೆ. ಆದದ್ದರಿಂದ ಉಪನಿಷತ್ತುಗಳನ್ನೇ ನೋಡೋಣ.

ಒಂದು–ಈಶೋಪನಿಷತ್ತು–ಹೀಗೆ ಹೇಳುತ್ತದೆ:

"ಈ ಜಗತ್ತೆಲ್ಲ ದೇವರ ಒಳಗೆ ಸೇರಿಕೊಂಡಿದೆ. ಆದದ್ದರಿಂದ ಇದೆಲ್ಲವೂ ದೇವರ ಸ್ವತ್ತು. ಹಾಗಿರಲಾಗಿ ನೀನು ಯಾವುದನ್ನೂ ನಿನ್ನ ಸ್ವಂತದ್ದೆಂದು ಭಾವಿಸಿಕೊಳ್ಳದೆ, ಎಲ್ಲವೂ ದೇವರ ಪ್ರಸಾದವೆಂದು ತಿಳಿದು ಉಪಯೋಗ ಮಾಡಿಕೋ. ಆ ಪ್ರಸಾದಕ್ಕೆ ನೀನು ಅರ್ಹನಾಗುವುದು ನೀನು ಮಾಡುವ ದುಡಿಮೆಯಿಂದ. ಆದಕಾರಣ ದೇವರ ತೋಟದಲ್ಲಿ ಚೆನ್ನಾಗಿ ದುಡಿ. ಹಾಗೆ ವಿವೇಕ ಉತ್ಸಾಹಗಳಿಂದ ದುಡಿಯುತ್ತ, ಒಡೆಯನು ಕೊಟ್ಟ ಹಣ್ಣನ್ನು ಊಟ ಮಾಡಿಕೊಂಡು, ನೂರು ವರ್ಷ ತುಂಬ ಬದುಕಬೇಕೆಂದು ಮನಸ್ಸು ಮಾಡು."

ಇನ್ನೊಂದು–ತೈತ್ತಿರೀಯ ಉಪನಿಷತ್ತು:

"ಸತ್ಯವನ್ನು ತಿಳಿದುಕೊಳ್ಳುವುದರಲ್ಲಿಯೂ ನುಡಿಯುವುದರಲ್ಲಿಯೂ ತಪ್ಪು ಮಾಡದಂತೆ ಎಚ್ಚರಿಕೆಯಿಂದಿರು. ಧರ್ಮದ ವಿಷಯದಲ್ಲಿಯೂ ಹಾಗೆ ಇರು. ಒಳ್ಳೆಯದನ್ನು ಸಾಧಿಸುವುದರಲ್ಲಿಯೂ ಮೈಮರೆಯದೆ ಎಚ್ಚರದಿಂದ ಇರು. ಐಶ್ವರ್ಯ ಸಂಪಾದನೆಯಲ್ಲಿಯೂ ಪಾಲುಮಾರದೆ ಇರು... ಗುರುಹಿರಿಯರ ವಿಷಯದಲ್ಲಿಯೂ ಬಂಧುಜನ ವಿಷಯದಲ್ಲಿಯೂ ಲೋಕವಿಷಯದಲ್ಲಿಯೂ, ವಿಹಿತನೀತಿಯಿಂದ, ಸರ್ವ ಹಿತಕರವೂ ನಿರ್ದೋಷವೂ ಆದ ರೀತಿಯಲ್ಲಿ ನಡೆದುಕೋ... ವಿವೇಕ ಜ್ಞಾನಗಳಿಂದ ಪುಣ್ಯಕಾರ್ಯಗಳನ್ನು ಮಾಡು... ಅನ್ನಪಾನಾದಿ ಜೀವನ ಸಾಮಗ್ರಿಯನ್ನು ಸಮೃದ್ಧಿಗೊಳಿಸು. ಯೋಗಕ್ಷೇಮಗಳನ್ನು ಸಾಧಿಸು. ಜಗತ್ತಿನಲ್ಲಿ ಸಾರಭೂತವಾದದ್ದೆಲ್ಲ ದೈವಾಂಶವೇ. ಆದದ್ದರಿಂದ ಎಲ್ಲ ವ್ಯಾಪಾರವೂ ದೈವಸೇವೆ. ಎಲ್ಲವೂ ದೈವ ಪ್ರಸಾದ–ಎಂಬ ಬುದ್ಧಿಯಿಂದ ಬದುಕಿ ಅನುಭವಿಸಿದರೆ ದೇವರ ಸನ್ನಿಧಿಯನ್ನು ಸೇರುವೆ."

ಎಲ್ಲ ಉಪನಿಷತ್ತುಗಳ ಸಾರವೆಂದೆಣಿಸಿಕೊಂಡಿರುವ 'ಭಗವದ್ಗೀತೆ' ಹೀಗೆ ಹೇಳುತ್ತದೆ:

"ಧರ್ಮಕ್ಕೋಸ್ಕರ ಹೋರಾಡಬೇಕಾಗಿ ಬಂದಾಗ ಹೋರು; ಎದೆಗೆಟ್ಟು ಓಡಿ ಹೋಗಬೇಡ; ನಿಂತು ಹೋರಾಡು. ಧರ್ಮವೆಂದರೆ ಲೋಕದ ಸಮಗ್ರ ಜೀವನವನ್ನೂ ಸಮಾಧಾನಸ್ಥಿತಿಯಲ್ಲಿರಿಸಿ ಕಾಪಾಡುವ ಒಂದು ನ್ಯಾಯ ವಿಧಾನ. ನಿನ್ನೊಬ್ಬನ ಸ್ವಂತ ಲಾಭಕ್ಕಾಗಿ ನೀನು ಕಾದಾಡಿದರೆ, ಅದು ನಿನ್ನ ಜೀವಕ್ಕೆ ಸೆರೆಕಟ್ಟಾದೀತು. ಹಾಗಲ್ಲದೆ ಯಾವ ಮನುಷ್ಯ– "ನಾನು", "ನನ್ನದು", "ನನ್ನ ಸುಖ", "ನನ್ನ ಕ್ಷೇಮ", "ನನ್ನ ಪ್ರತಿಷ್ಠೆ", "ನನ್ನ ಹೆಸರು" –ಎಂಬ ಸಣ್ಣ ಸಣ್ಣ ಅಭಿಮಾನಗಳನ್ನು ಬಿಟ್ಟು, ಸಮಸ್ತಲೋಕದ ಹಿತವ್ಯವಸ್ಥೆಗಾಗಿ ದುಡಿಯುತ್ತಾನೋ ಆ ಮನುಷ್ಯನ ಜೀವಕ್ಕೆ ಎಲ್ಲ ತಡೆಕಟ್ಟುಗಳೂ ಸಡಲಿ, ಅವನ ಆತ್ಮ ಬೆಳೆದು ದೊಡ್ಡದಾಗುತ್ತದೆ. ಜಗತ್ತೆಲ್ಲ ಬ್ರಹ್ಮಮಯವಾದದ್ದು. ನೀನು ಸ್ವಂತ ಭೋಗಕ್ಕೆನ್ನದೆ, ಲೋಕಪ್ರಯೋಜನಕ್ಕಾಗಿ, ಈಶ್ವರಾರ್ಪಣ ಬುದ್ಧಿಯಿಂದ ಶ್ರಮಪಟ್ಟರೆ ಅದೇ ನಿನಗೆ ಪರಮಕಲ್ಯಾಣ. ಆದದ್ದರಿಂದ ಲೋಕಕ್ಕಾಗಿ ಹೋರಾಡು; ಬಂದ ಜಯಾಪಜಯಗಳನ್ನು ಸಮರ ಬುದ್ಧಿಯಿಂದ ಸಹಿಸು. ಸಂದರ್ಭ ವಿಮರ್ಶೆ ಮಾಡಿ ನಡೆದುಕೋ. ಈಶ್ವರನ ಬಂಟನಾಗಿ ಹೋರು, ಗೆಲ್ಲು."

ಇಂಥ ಧೀರಬುದ್ಧಿ ನಮ್ಮ ಜನಕ್ಕೆ ಈಗ ಮೊದಲು ಬೇಕಾದದ್ದು.

ಜೀವನದ ಮಹತ್ತ್ವ :

ಜೀವನ ಎಂಬುದು ಬಹು ದೊಡ್ಡ ಸಂಗತಿ. ಅದು ಅತ್ಯಂತ ಪವಿತ್ರವಾದದ್ದು ಮತ್ತು ಗೌರವಕ್ಕೆ ಅರ್ಹವಾದದ್ದು. ಒಂದು ಜೀವ ಈ ಲೋಕದಲ್ಲಿ ಹುಟ್ಟಬೇಕಾದರೆ ಅದಕ್ಕೆ ಪೂರ್ವಭಾವಿಯಾಗಿ ಸೃಷ್ಟಿದೇವತೆ ಎಷ್ಟೊಂದು ಸಿದ್ಧತೆಗಳನ್ನು ಮಾಡಿರುತ್ತಾಳೆ! ಅದನ್ನು ನಾವು ಪದೇಪದೇ ಆಲೋಚಿಸುತ್ತಿರಬೇಕು. ಸಸ್ಯಗಳಲ್ಲಿ, ಹಲ್ಲಿ ಹಾವು ಮೀನುಗಳಲ್ಲಿ, ಪಕ್ಷಿಗಳಲ್ಲಿ, ಮೃಗಗಳಲ್ಲಿ ಸಂತಾನಾಭಿವೃದ್ಧಿಗಾಗಿ ಪ್ರಕೃತಿ ಎಂಥೆಂಥ ವಿಚಿತ್ರವಾದ ಏರ್ಪಾಟುಗಳನ್ನಿಟ್ಟಿದ್ದಾಳೆ! ಮನುಷ್ಯದೇಹ ಎಂಥ ಆಶ್ಚರ್ಯಕರವಾದ ಯಂತ್ರ! ಎಂಥೆಂಥ ರಸಧಾತುಗಳು ಅದರಲ್ಲಿ ತುಂಬಿಕೊಂಡು ಅದನ್ನು ತಿರುಗಿಸುತ್ತವೆ! ಮನಸ್ಸೆಂಬುದು ಎಂಥ ಅದ್ಭುತ ರಸಾಯನ! ಇಂಥ ಎಷ್ಟೋ ರಸಯಂತ್ರಗಳನ್ನು ಜೋಡಿಸಿ, ಎಷ್ಟೋ ತಾಳ್ಮೆಯಿಂದ ಕೆಲಸಮಾಡಿ, ಎಷ್ಟೋ ಅಕ್ಕರೆಯಿಂದ ಪ್ರಕೃತಿಮಾತೆ ಜೀವವೆಂಬ ವಸ್ತುವನ್ನು ತಯಾರು ಮಾಡುತ್ತಾಳೆ. ಅಂಥಾದ್ದನ್ನು ನೀಚವೆನ್ನುವುದೂ ಅಲಕ್ಷ್ಯದಿಂದ ಕಾಣುವುದೂ ವಿವೇಕದ ಲಕ್ಷಣವಲ್ಲ. ಜೀವವನ್ನು ಆದರಿಸಿ, ಅದರ ಉತ್ತಮಗತಿಗಾಗಿ ತನ್ನಿಂದ ಸಾಧ್ಯವಿರುವಷ್ಟು ಪ್ರಯತ್ನ ತೊಡುವವನೇ ಧರ್ಮಿಷ್ಠ. ಪ್ರತಿಯೊಂದು ಜೀವದಲ್ಲಿಯೂ ಎಷ್ಟೋ ಗುಣಶಕ್ತಿಗಳು ಅಡಗಿಕೊಂಡಿರುತ್ತವೆ. ಒಂದು ಜೀವದ ಅಂಥಾ ಗೂಢ ಪ್ರಭಾವಗಳು ವಿಕಾಸಗೊಂಡು, ಬಲಿತು, ಲೋಕಪ್ರಯೋಜನಕ್ಕೆ ಒದಗಿಬಂದಾಗ ಆ ಜೀವವೂ ಸಾರ್ಥಕವಾಗಿ ಪರಿಪೂರ್ಣವಾಗುತ್ತದೆ. ಆದದ್ದರಿಂದ ಜೀವನದ ವಿಷಯದಲ್ಲಿ ನಿರುತ್ಸಾಹವೂ ಖಿನ್ನಭಾವವೂ ತಕ್ಕುವಲ್ಲ. ಸಮಸ್ತ ಜೀವನ ವಿಷಯದಲ್ಲಿಯೂ ಶ್ರದ್ಧೆಗೌರವಗಳಿರಬೇಕು.

ಅಗ್ಗದ ವೈರಾಗ್ಯ ತಕ್ಕದ್ದಲ್ಲ :

ಅನೇಕ ದೇವರ ನಾಮಗಳು, ತತ್ತ್ವದ ಹಾಡುಗಳು, ವೇದಾಂತ ಲಾವಣಿಗಳು, ದಾಸರ ಪದಗಳು, ಶರಣ ವಚನಗಳು–ಇಂಥಾ ಗ್ರಂಥಗಳಲ್ಲಿ ನಮಗೆ ಸುಲಭವಾಗಿ ಸಿಕ್ಕುವುದು ವೈರಾಗ್ಯ ಬೋಧನೆ. ಅದು ಅಗ್ಗದ ವೈರಾಗ್ಯ. ಅದು ಬಾಯಿಮಾತಿನ ವಿರಕ್ತಿ. ಸೋಮಾರಿತನದ ವಿರಕ್ತಿ. ಹೇಡಿತನದ ವಿರಕ್ತಿ. ಕೈಲಾಗದವರ ವಿರಕ್ತಿ. "ನನ್ನಿಂದ ಏನೂ ಆಗಲಾರದು; ಎಲ್ಲವನ್ನೂ ಮಾಡಿಸುವವನು ಬೇರೆ ಇದ್ದಾನೆ. ನೀನು ಒದ್ದಾಡಿ ಏನು ಪ್ರಯೋಜನ? ಗಾಳಿ ಗುದ್ದಿ ಮೈನೋಯಿಸಿಕೋಬೇಡ. ಸುಮ್ಮನೆ ಕುಳಿತು ದೇವನ ಧ್ಯಾನ ಮಾಡುತ್ತಿರು" – ಎಂದು ಮೈಗಳ್ಳಭಕ್ತಿಯನ್ನು ಬೋಧಿಸುವುದೇ ಸಾಮಾನ್ಯ ಕೀರ್ತನೆಗಳು. ಇದು ಸಾಲದ್ದಕ್ಕೆ "ಪ್ರಪಂಚದ ಸುಖ ಏನು ಶಾಶ್ವತ? ಈ ಹಾಳು ಕಟ್ಟಿಗೆ ದೇಹಕ್ಕೆ ಎಷ್ಟು ಉಪಚಾರಮಾಡಿ ಏನು ಪ್ರಯೋಜನ?–ಎಂಬ ನಿರಾಶೆಯ ಭಾವಗಳೂ ಸೇರುತ್ತವೆ! ಇಂಥಾ ಹಾಡುಗಳು ನಮ್ಮವರ ಕಿವಿಗೆ ಬಹು ಆಪ್ಯಾಯಮಾನವಾಗಿರುತ್ತವೆ. ಮೊದಲೇ ಅವರು ಬಡತನದಿಂದ ಬಳಲಿ ಬೇಸತ್ತಿರುವ ಜನ. ಅಂಥವರಿಗೆ– "ಯಾವುದು ಎಲ್ಲಾದರೂ ಹೋಗಲಿ; ನೀನು ಇದ್ದಲ್ಲಿ ಬಿದ್ದುಕೋ" –ಎಂಬ ವೈರಾಗ್ಯವನ್ನೂ; "ನೀನೇನು ಹುಲುಮನುಜ" ಎಂಬ ಜವಾಬ್ದಾರಿ ತಪ್ಪಿಸುವ ದೈನ್ಯವನ್ನು ಕುರಿತು, ರಾಗರಾಗಗಳಲ್ಲಿ, ತಂಬೂರಿ ತಾಳ

ಸಮೇತನಾಗಿ, ಹಾಡುತ್ತಿದ್ದರೆ, ಕಿವಿ ಅಗಲವಾಗಿ ಮನಸ್ಸಿಗೆ ಮತ್ತೇರಿದಂತಾಗುತ್ತದೆ. ಆ ಮತ್ತಿನಲ್ಲಿ ಅವರ ಕಷ್ಟ ನಿಷ್ಠುರಗಳು ಮರೆತುಹೋಗುತ್ತವೆ. ಇದೇ ಪಾಮರ ವೇದಾಂತ.

ವೈರಾಗ್ಯ ಎಂದರೆ ಲೋಕದ ವಸ್ತುಗಳಲ್ಲಿ ತನಗೆಂಬ ಅಪೇಕ್ಷೆಯನ್ನು ಬಿಡುವುದು. "ಯಾವುದೂ ನನ್ನದಲ್ಲ, ಎಲ್ಲಾ ದೇವರದು" ಎಂದುಕೊಂಡು, ತನ್ನ ಸ್ವಂತ ಸುಖಕ್ಕಾಗಿ ಯಾವುದನ್ನೂ ಬೇಡದೆ, ಯಾರನ್ನೂ ಕಾಡಿಸದೆ ಇರುವುದು. ಇದೇ ನಿಜವಾದ ತ್ಯಾಗ; ಇದೇ ವಿವೇಕಶುದ್ಧವಾದ ವಿರಕ್ತಿ. ಆದರೆ ಲೋಕದಲ್ಲಿ ತನ್ನದೆಂದು ಹೇಳಿಕೊಳ್ಳಲು ಯಾವ ಸ್ವತ್ತೂ ಇಲ್ಲದೆ, ಕೂಲಿಯಿಂದ ಹೊಟ್ಟೆ ಹೊರೆದುಕೊಳ್ಳುವವನು ಯಾವುದರಲ್ಲಿ ವೈರಾಗ್ಯ ಮಾಡಬಹುದು? ತನ್ನ ಪ್ರಾಣದ ವಿಷಯದಲ್ಲಿ ವೈರಾಗ್ಯ ಮಾಡೋಣವೆಂದರೆ ಪ್ರಾಣವೇ ಒಪ್ಪುವುದಿಲ್ಲ. ಅದು ದೇಹದೊಡನೆ ಬದುಕಬೇಕೆಂದೇ ಒತ್ತಾಯಪಡಿಸುತ್ತದೆ. ಅದನ್ನು ಬಿಟ್ಟರೆ ಮತ್ತಾವುದೂ ಬಡವನ ಕೈಯಲ್ಲಿಲ್ಲ. ಏನನ್ನಾದರೂ ಇಟ್ಟುಕೊಂಡಿರುವವನು ಅದನ್ನು ತ್ಯಾಗಮಾಡಬಹುದು. ಏನೂ ಇರದವನು ಏನು ತ್ಯಾಗ ಮಾಡಿಯಾನು? ಹೀಗೆ ಬಡವರಿಗೆ ವೈರಾಗ್ಯವನ್ನು ಬೋಧಿಸುವುದು ಬರಿಯ ಅಣಕಾಟ; ಬರಿಯ ಆಭಾಸ. ಅದರಿಂದ ಅವರ ಬಡತನದ ಕಷ್ಟಕಾರ್ಪಣ್ಯಗಳ ಪೈರಿಗೆ ಮತ್ತಷ್ಟು ಗೊಬ್ಬರಹಾಕಿ ಪಾತಿ ಕಟ್ಟಿದ ಹಾಗೆ ಆದೀತು. ರೋಗಿಗೆ ನಾಲಗೆ ಬೇಡುವ ತಿಂಡಿಯನ್ನು ಕೊಡುವುದೂ, ಬಡವನಿಗೆ ಕೈಕಟ್ಟಿ ಕುಳ್ಳಿರೆಂದು ಬೋಧಿಸುವುದೂ ಅವರನ್ನು ಕೆಡಿಸುವ ದಾರಿಯೇ ಹೊರತು ಬದುಕಿಸುವ ದಾರಿಯಲ್ಲ. ನಮ್ಮ ಜನವನ್ನು ಅಂಥಾ ಆಭಾಸ ವೈರಾಗ್ಯದ ದೇವರ ನಾಮಗಳಿಂದಲೂ ತತ್ತ್ವದ ಹಾಡುಗಳಿಂದಲೂ ಎಷ್ಟು ಬೇಗ ಬಿಡುಗಡೆಮಾಡಿದರೆ ಅಷ್ಟು ಬೇಗ ಅವರಿಗೆ ಶುಭೋದಯವಾದೀತು.

ಹಣೆಯಬರಹದ ಗೊಣಗಾಟ ನಮ್ಮಿಂದ ತೊಲಗಬೇಕು; ಗಂಡುತೇಜಸ್ಸು ಬರಬೇಕು. ಅಳುಮೋರೆ ಹೋಗಬೇಕು; ನಗುಮುಖ ಬರಬೇಕು. ಸೋಲು ಮನಸ್ಸು ತೊಲಗಬೇಕು; ಗೆಲುಬುದ್ಧಿ ತಲೆಯೆತ್ತಬೇಕು; ಖಿನ್ನ ವಿರಕ್ತಿ ಹೋಗಬೇಕು; ಧೀರಪ್ರಯತ್ನ ಬರಬೇಕು.

ದೈವಭಕ್ತಿ ಎಂದರೇನು? :

ಹಾಗಾದರೆ ದೈವಭಕ್ತಿ ಬೇಡವೆ? ಇದು ಅನವಶ್ಯವಾದ ಪ್ರಶ್ನೆ. ಏಕೆಂದರೆ ಭಕ್ತಿ ಬೇಡವೆಂದು ಯಾರೂ ಹೇಳುತ್ತಿಲ್ಲ. ಆದರೆ ಭಕ್ತಿಯೆಂದರೆ ಏನು ಎಂಬ ವಿಷಯದಲ್ಲಿ ಮಾತ್ರ ತಿಳಿವಳಿಕೆ ಸರಿಯಾಗಿರಲಿ. ಭಕ್ತಿಯೆಂದರೆ ವಿಭೂತಿ, ಕುಂಕುಮ, ನಾಮ, ತುಲಸೀಸರ, ರುದ್ರಾಕ್ಷಿ, ತಾಯಿತಿ, ಚಕ್ರ, ತ್ರಿಶೂಲ–ಹೀಗೆಂದು ಬಹುಜನದ ನಂಬಿಕೆ. ಯಾವಾಗಲೂ "ರಾಮರಾಮ", "ಶಿವಶಿವ" ಎಂದು ನಾಮಸ್ಮರಣೆ ಮಾಡುತ್ತಿರುವುದೂ ಶನಿವಾರ ಸೋಮವಾರ ಭಜನೆ ಮಾಡುವುದೂ ಭಕ್ತಿಯ ಮುಖ್ಯಲಕ್ಷಣವೆಂದು ಬಹುಜನದ ತಿಳಿವಳಿಕೆ. ಈ ಆಚಾರ ನಿಯಮಗಳು ಕೆಟ್ಟವೆಂದಾಗಲಿ ವ್ಯರ್ಥವೆಂದಾಗಲಿ ಯಾರೂ ಹೇಳರು. ಆದರೆ ಭಕ್ತಿಗೆ ಅಷ್ಟು ಮಾತ್ರವೇ ಸಾಲದೆಂದು ನಮ್ಮ ಕಕ್ಷಿ. ನಾಮವಿಭೂತಿಗಳು ಜಪಕೀರ್ತನೆಗಳೂ ಬೇಕಾದರೆ ಇದ್ದುಕೊಳ್ಳಲಿ. ಇವುಗಳಿಂದ ಕೆಲವರ ಮನಸ್ಸಿಗೆ ಒಂದು ಧೈರ್ಯವೂ ಒಂದು ನೆಮ್ಮದಿಯೂ ಬರಬಹುದು. ಮನೆಗೆ ರಂಗವಲ್ಲಿ ತೋರಣಗಳಿಂದ ಒಂದು ಕಳೆ ಬರುವಂತೆ ನಮ್ಮ ಜೀವನಕ್ಕೆ ನಾಮಧಾರಣೆ ಪೂಜೆ ಭಜನೆಗಳಿಂದ ಒಂದು ಕಾಂತಿ ಬರಬಹುದು. ಆ ಅಲಂಕಾರಗಳು ಬೇಡವೆಂದು ಯಾರೂ ಹೇಳುವುದಿಲ್ಲ. ಆದರೆ ಬಾಗಿಲ ತೋರಣದಿಂದ ಹಬ್ಬವಾಗುವುದಿಲ್ಲ. ಒಳಗಡೆ ಹೂರಣದ

ಊಟವೂ ಇರಬೇಕು. ಎಂದರೆ ಭಕ್ತಿಯಲ್ಲಿ ನಾಮಸಂಕೀರ್ತನೆಗಳ ಜೊತೆಗೆ–ಅವಕ್ಕಿಂತ ಸಾಧ್ಯವಾದಷ್ಟು ಹೆಚ್ಚಾಗಿ, ವಿವೇಕದ ಕಾರ್ಯಗಳೂ ಸೇರಿರಬೇಕು. ಭಕ್ತಿಯೆಂಬುದು ಬರಿಯ ಮನಸ್ಸಿನ ತಳಮಳವಲ್ಲ; ಪುರುಷಶಕ್ತಿಯ ಪ್ರಯೋಗವೂ ಹೌದು. ಭಕ್ತಿಯೆಂಬುದು ಎದೆಯಿಂದ ಗಂಟಲಿನ ದ್ವಾರಾ ಹರಿದುಬರುವ ಒಂದು ರಸ–ಎಂಬುದು ಹಳೆಯ ಭಾವನೆ. ಭಕ್ತಿಯೆಂಬುದು ತಲೆಯಿಂದ ಕೈಗಳ ದ್ವಾರಾ ಹರಿದುಬರುವ ಒಂದು ಆತ್ಮಶಕ್ತಿ ಎಂಬುದು ನಮ್ಮ ಭಾವನೆ. ಭಕ್ತಿಗೆ ಹೃದಯವೊಂದೇ ಪೀಠವೆಂದು ಪೂರ್ವಭಾವನೆ; ಭಕ್ತಿಯ ಒಂದು ಪಾದ ಹೃದಯದಲ್ಲಿ, ಇನ್ನೊಂದು ಪಾದ ಬುದ್ಧಿಯಲ್ಲಿ ನಿಂತಿರುತ್ತದೆಯೆಂದು ನಮ್ಮ ಭಾವನೆ. ಭಕ್ತಿ ದೇವರಿಗೆ ತಲುಪತಕ್ಕದ್ದೆಂದು ಪೂರ್ವಭಾವನೆ; ಅದು ದೇವರು ಸೃಷ್ಟಿಮಾಡಿರುವ–ದೇವರ ಪ್ರತ್ಯಕ್ಷಕಾರ್ಯವಾದ–ಜೀವಲೋಕಕ್ಕೆ ತಲಪಬೇಕಾದದ್ದೆಂದು ನಮ್ಮ ಭಾವನೆ. ಭಕ್ತಿ ಒಳ್ಳೆಯ ಮಾತುಗಳನ್ನಾಡಿಸಿದರೆ ಸಾಲದು; ಅದು ಒಳ್ಳೆಯ ಕೆಲಸಗಳನ್ನು ಮಾಡಿಸಬೇಕು. ಮತ್ತು ಆ ಕೆಲಸಗಳ ಒಳ್ಳೆಯತನ ಲೋಕದ ಜೀವನಕ್ಕೆ ಉಪಯೋಗವಾಗಬೇಕು. ಇದು ನಮ್ಮ ಮತ. ನಮ್ಮ ಭಕ್ತಿಯಲ್ಲಿ ಪೌರುಷ ಮುಖ್ಯಾಂಶ.

ಈ ಮತದ ಪ್ರಕಾರ ನೋಡಿದರೆ, ಪುರಂದರದಾಸರು, ಕನಕದಾಸರು, ಕಬೀರ್ದಾಸರು, ಬಸವಣ್ಣನವರು, ನಿಜಗುಣ ಶಿವಯೋಗಿಗಳು–ಇಂಥಾ ದೇವಮಹಿಮಾ ಪ್ರಚಾರಕರು ಹೇಗೆ ಭಕ್ತರೋ ಹಾಗೆಯೇ ಕೆಂಪೇಗೌಡರು, ದಾದಾಬಾಯಿ ನವರೋಜಿಯವರು, ರ್‍ಯಾನಡೆಯವರು, ರಂಗಾಚಾರ್ಲು ಅವರು, ಗೋಖಲೆಯವರು, ತಿಲಕರವರು, ಗಾಂಧಿಯವರು, ಜಗದೀಶ ಚಂದ್ರಬೋಸ್ ಅವರು, ಪಿ. ಸಿ. ರೇ ಅವರು, ಜೆ. ಎನ್. ತಾತಾ ಅವರು, ವಿಶ್ವೇಶ್ವರಯ್ಯನವರು–ಇಂಥ ಮಾನುಷೋಪಕಾರಿಗಳೂ ದೈವಭಕ್ತರು. ದೇಶದ ಸರಕಾರದ ವಿಚಕ್ಷಣೆಯನ್ನು ಉತ್ತಮಪಡಿಸಿದವರು, ಜನರ ಬಡತನದ ಕಾರಣಗಳನ್ನು ಹೋಗಲಾಡಿಸಲು ಕಷ್ಟಪಟ್ಟವರು, ದೇಶದಲ್ಲಿ ವಿದ್ಯೆ ಜ್ಞಾನಗಳನ್ನು ಹರಡಿದವರು, ಹೊಸ ಹೊಸ ಶಾಸ್ತ್ರಶೋಧನೆಗಳನ್ನು ನಡಸಿದವರು, ಹೊಸ ಯಂತ್ರ ಸಾಧನಗಳನ್ನೂ ವ್ಯಾಪಾರಗಳನ್ನೂ ಸ್ಥಾಪಿಸಿ ಜನಕ್ಕೆ ಜೀವನೋಪಾಯಗಳನ್ನು ಕಲ್ಪಿಸಿದವರು–ಇವರೆಲ್ಲ ಭಗವದ್ಭಕ್ತರೇ. ಒಬ್ಬರದು ಕಣ್ಣೀರಿನ ಭಕ್ತಿಯಾದರೆ, ಇನ್ನೊಬ್ಬರದು ಗಟ್ಟಿ ದುಡಿತದ ಭಕ್ತಿ.

ಇಂಥ ಪ್ರತ್ಯಕ್ಷ ಭಕ್ತಿಗೆ ಸಾಧಕವಾದ ಮನೋಭಾವವನ್ನೂ ಬುದ್ಧಿಸಾಮರ್ಥ್ಯವನ್ನೂ ವಿಜ್ಞಾನಶಾಸ್ತ್ರ ಪ್ರಭಾವವೆಂದು ನಾವು ಅಂಗೀಕರಿಸಬೇಕು. ವಿಜ್ಞಾನವೆಂಬುದು ಇಂಗ್ಲಿಷಿನ "ಸಯನ್ಸ್" (Science).

ವಿಜ್ಞಾನವೆಂದರೇನು? :

ವಿಜ್ಞಾನದ ಕಾರ್ಯವೆಂದರೆ ಈ ಪ್ರಪಂಚವನ್ನು ಕುರಿತ ಪ್ರಶ್ನೆ, ಪರೀಕ್ಷೆ, ಶೋಧನೆ; ಇದು ಏಕೆ? ಅದು ಹೇಗೆ? ಎಂಬ ಹುಡುಕಾಟ. ಈ ಹುಡುಕುವಿಕೆಯ ಫಲವಾಗಿ ದೊರೆತ ಜ್ಞಾನವೇ ವಿಜ್ಞಾನ. ಕುರುಡು ನಂಬಿಕೆಯಾಗದೆ ಸ್ವತಂತ್ರ ವಿಚಾರ ವಿಮರ್ಶೆಗಳಿಂದ ಬಂದ ಜ್ಞಾನವೇ ವಿಜ್ಞಾನ.

ವಿಜ್ಞಾನ ವಿದ್ಯಾರ್ಥಿಯ ಕ್ರಿಯೆಗಳು ಮುಖ್ಯವಾಗಿ ಮೂರು: (೧) ಪದಾರ್ಥಸ್ವರೂಪ ವಿವೇಕ, (೨) ಪದಾರ್ಥಜಾತಿ ವಿಭಾಗ, (೩) ಪದಾರ್ಥ ಪರಸ್ಪರ ಸಂಬಂಧ ನಿಶ್ಚಯ.

- ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವಿನ ಆಕಾರವನ್ನೂ ಗಾತ್ರವನ್ನೂ ಭಾರವನ್ನೂ ಬಣ್ಣವನ್ನೂ ಗುಣವನ್ನೂ ಶಕ್ತಿಯನ್ನೂ, ಭಾಗಭಾಗವನ್ನೂ ಕಣಕಣವನ್ನೂ ಅಳೆದು, ತೂಗಿಸಿ, ಎಣಿಸಿ, ಅದರ ಸ್ವಭಾವವನ್ನು ಗೊತ್ತುಹಚ್ಚುವುದು ಮೊದಲನೆಯ ಕೆಲಸ. ಹೀಗೆ ವಿಜ್ಞಾನದ ಪ್ರಥಮ ಕರ್ತವ್ಯವು ಅಂಶ ವಿಭಾಗಗಳ ಲೆಕ್ಕಾಚಾರ. ಅದೇ "ಅನ್ಯಾಲಿಸಿಸ್" –ಅಂಶಾಂಶ ಪರೀಕ್ಷೆ.
- ಹಾಗೆ ಜಗತ್ತಿನ ವಸ್ತುಗಳನ್ನೆಲ್ಲ ಪರೀಕ್ಷಿಸಿ, ಅವುಗಳ ಗುಣ ಶಕ್ತಿ ಸ್ವಭಾವಗಳಿಗೆ ಅನುಸಾರವಾಗಿ ಅವುಗಳನ್ನು ಜಾತಿಜಾತಿಯಾಗಿ ವಿಂಗಡಿಸುವುದು ವಿಜ್ಞಾನದ ಎರಡನೆಯ ಕೆಲಸ. ಹೀಗೆ ಪ್ರಪಂಚವೆಲ್ಲ ಜೀವ, ಜಡೆ ಎಂದು ಎರಡು ಸಾಮಾನ್ಯ ಭಾಗವಾಗಿಯೂ, ಜೀವರಾಶಿಯಲ್ಲಿ ಜಲವಾಸಿ, ಸ್ಥಲವಾಸಿ, ವಾಯುವಾಸಿ–ಎಂಬಂಥ ವಿಶೇಷ ಭಾಗಗಳಾಗಿಯೂ; ಸ್ಥಲವಾಸಿಗಳಲ್ಲಿ ಮನುಷ್ಯ, ಮೃಗ, ಸರೀಸೃಪ, ಕ್ರಿಮಿ ಇತ್ಯಾದಿಯಾಗಿ ವಿಶೇಷಜಾತಿಗಳಾಗಿಯೂ; ಜಡದಲ್ಲಿ ಲೋಹಗಳು, ಲವಣಗಳು, ಆಮ್ಲಗಳು, ಅನಿಲಗಳು ಇತ್ಯಾದಿಯಾಗಿ ವಿಶೇಷ ಜಾತಿಗಳಾಗಿಯೂ ನಾನಾ ವರ್ಗಗಳು ಅಥವಾ ಪಂಗಡಗಳು ಏರ್ಪಡುತ್ತವೆ. ಈ ವರ್ಗವ್ಯವಸ್ಥೆಯಿಂದ ಜಗತ್ತಿನ ಮೂಲದ್ರವ್ಯಗಳ ಸ್ವರೂಪವೆಂಥಾದ್ದೆಂಬುದು ಕೊಂಚಮಟ್ಟಿಗೆ ಗೋಚರವಾಗುತ್ತದೆ. ಹೀಗೆ ವಸ್ತುಗಳ ಸಾಮಾನ್ಯ ಲಕ್ಷಣ ವಿಶೇಷ ಲಕ್ಷಣಗಳ ನಿಷ್ಕರ್ಷೆಯೂ ವಿಜ್ಞಾನದ ಕಾರ್ಯ. ಇದೇ "ಕ್ಲ್ಯಾಸಿಫಿಕೇಷನ್" –ವರ್ಗವಿಭಜನೆ.
- ಈ ರೀತಿ ವಿಂಗಡವಾದ ನಾನಾ ಪದಾರ್ಥಗಳಲ್ಲಿ ಒಂದನ್ನಿನ್ನೊಂದು ಹೇಗೆ ಹೆಚ್ಚಿಸುತ್ತದೆ, ಅಥವಾ ತಗ್ಗಿಸುತ್ತದೆ, ಬದಲಾಯಿಸುತ್ತದೆ–ಎಂದು ವಿವೇಚನೆ ಮಾಡಿ ನಿಶ್ಚಯಿಸುವುದೂ ವಿಜ್ಞಾನದ ಕೆಲಸ. ಈ ಪರಸ್ಪರ ಪರಿಣಾಮ ನಿಯಮವೇ ನಾನಾ ವಸ್ತುಗಳ ವಿವಿಧ ಜಗತ್ತನ್ನು ಒಂದು ಮಹಾವಸ್ತುವನ್ನಾಗಿ ಕೂಡಿಸಿ ಗಂಟು ಹಾಕಿರುವ ದಿವ್ಯಸೂತ್ರ. ಈ ಕಾರ್ಯಕಾರಣ ಸಂಬಂಧಜ್ಞಾನದಿಂದ ನಿರ್ಮಾಣವಾಗಿರುವುವು ನಾವು ನಿತ್ಯವೂ ಉಪಯೋಗಿಸುವ ನಾನಾ ಯಂತ್ರ ರಸಾಯನ ಸಂಧಾನಗಳು. ಹೀಗೆ ಕಾರ್ಯಕಾರಣ ("ಕಾಸ್ಯಾಲಿಟಿ") ವಿವೇಕವೂ ವಿಜ್ಞಾನದ ಕಾರ್ಯ.

ಬಹು ವಿಸ್ತಾರವಾದದ್ದು ಈ ವಿಜ್ಞಾನ ಶಾಸ್ತ್ರ; ಮತ್ತು ಅದು ಇನ್ನೂ ಬೆಳೆದು ಇನ್ನೂ ವಿಸ್ತಾರವಾಗುತ್ತಲೇ ಇರತಕ್ಕದ್ದು. ಅದರ ಮುಖ್ಯ ಗುಣವು ಸ್ವತಂತ್ರವಾದ ವಿಷಯಪರೀಕ್ಷೆ. ನಿರ್ಭಯವೂ ನಿಷ್ಪಕ್ಷಪಾತವೂ ಆದ ಜಗತ್ಸತ್ಯಾನ್ವೇಷಣೆಯೇ ವಿಜ್ಞಾನ.

ಪ್ರಪಂಚ ಸಂದರ್ಭಗಳ ಸಂಖ್ಯೆಗೆ ಮಿತಿ ಪಾರಗಳಿಲ್ಲ. ಆದಕಾರಣ ಅವುಗಳ ಯಥಾರ್ಥವನ್ನು ತಿಳಿಯುವ ಪ್ರಯತ್ನಕ್ಕೂ ಮಿತಿ ಪಾರಗಳು ಇರವು. ಹೀಗೆ ಅನಂತವಾಗಿ ಬೆಳೆಯುತ್ತಲೇ ಇರಬೇಕಾದದ್ದು ವಿಜ್ಞಾನಶಾಸ್ತ್ರ. ಇಲ್ಲಿಗೆ ಇದು ಮುಗಿಯಿತು ಎಂಬ ಮಾತು ಆ ಶಾಸ್ತ್ರದಲ್ಲಿಲ್ಲ.

ಪ್ರಕೃತಿವಿಜ್ಞಾನ :

ಈ ಶಾಸ್ತ್ರದಲ್ಲಿ ಮುಖ್ಯ ಜಾತಿಗಳು ಎರಡು: (೧) ಪ್ರಕೃತಿ ವಿಜ್ಞಾನ, (೨) ಸಮಾಜವಿಜ್ಞಾನ.

ಪ್ರಕೃತಿ ವಿಜ್ಞಾನವೆಂದರೆ ನಮ್ಮ ದೇಹ ಮೊದಲುಗೊಂಡು ಸೂರ್ಯಚಂದ್ರಾದಿ ಗ್ರಹತಾರೆಗಳವರೆಗೆ ಪ್ರಪಂಚದ ಸಕಲ ವಸ್ತುಗಳನ್ನೂ ಹಿಡಿದು ಆಯಾ ವಸ್ತುವಿನ ರಚನೆಯೇನು, ಅದರ ಮೂಲಾಂಶವೇನು,

ಸ್ವಭಾವ ನಿಯಮಗಳೇನು, ಅದಕ್ಕೂ ಇತರವಸ್ತುಗಳಿಗೂ ಇರುವ ಸ್ನೇಹ ವಿರೋಧಗಳೇನು, ಅದರ ಶಕ್ತಿಯ ಮರ್ಮವೇನು, ಅದರಿಂದ ನಾವು ಸಾಧಿಸಬಹುದಾದ ಉಪಯೋಗಗಳೇನು–ಎಂಬೀ ತೆರದ ವಿವರ ಭರ್ತಿಗಳನ್ನು ಕಂಡುಹಿಡಿಯುವುದು. ಈ ಶಾಸ್ತ್ರದಿಂದ ಆಗಿರುವ ಕೆಲವು ಕೆಲಸಗಳನ್ನು ಹೇಳಿದರೆ ಅದರ ಸ್ವರೂಪ ಕೊಂಚಮಟ್ಟಿಗೆ ತೋರಿಬರಬಹುದು. ಪ್ರಕೃತಿವಿಜ್ಞಾನದ ಕೆಲವು ಕಾರ್ಯಗಳು:

1. ರೈಲು, ಮೋಟಾರು, ಏರೋಪ್ಲೇನ್ ಮೊದಲಾದ ಪ್ರಯಾಣ ಸಾಧನಗಳು.
2. ಎಲೆಕ್ಟ್ರಿಸಿಟಿ ಅಥವಾ ವಿದ್ಯುಚ್ಛಕ್ತಿ, ಎಕ್ಸ್–ರೇ ಮೊದಲಾದ ತೇಜಃ ಕಿರಣ ವಿಶೇಷಗಳು.
3. ಟೆಲಿಗ್ರಾಫ್, ಟೆಲಿಫೋನ್, ಗ್ರಾಮಾಫೋನ್, ರೇಡಿಯೊ ಮೊದಲಾದ ಧ್ವನಿಸಾಧನಗಳು.
4. ಫೋಟೋಗ್ರಾಫ್, ಸಿನೆಮ ಮೊದಲಾದ ಛಾಯಾಗ್ರಾಹಕ ಯಂತ್ರಗಳು.
5. ಅಕ್ಷರ ಮುದ್ರಣ ಯಂತ್ರ, ನೂಲು ತೆಗೆದು ಬಟ್ಟೆ ನೆಯ್ಯುವ ಯಂತ್ರ, ಎಣ್ಣೆಗಾಣದ ಯಂತ್ರ, ನಾನಾ ವಿಧದ ಕಾರ್ಖಾನೆಗಳ ಯಂತ್ರಗಳು, ನೇಗಿಲು, ಟ್ರ್ಯಾಕ್ಟರ್ ಮೊದಲಾದ ವ್ಯವಸಾಯ ಸಾಧನಗಳು, ಪಂಪುಗಳು.
6. ಬಗೆಬಗೆಯ ಹಡಗುಗಳು, ಜಹಜುಗಳು.
7. ವಿವಿಧ ದ್ರಾವಕಗಳು, ಅನಿಲಗಳು, ಲವಣಗಳು, ಆಮ್ಲಗಳು ಮೊದಲಾದ ರಾಸಾಯನಿಕ ಪದಾರ್ಥಗಳು.
8. ಬಗೆಬಗೆಯ ಗೊಬ್ಬರಗಳು.
9. ಔಷಧದ್ರವ್ಯಗಳು.
10. ಶಸ್ತ್ರವೈದ್ಯರ ಉಪಕರಣಗಳು.
11. ಸುಗಂಧ ಪದಾರ್ಥಗಳು.
12. ಬಣ್ಣಕಟ್ಟುವ ಪದಾರ್ಥಗಳು.
13. ಗಾಜು, ಕನ್ನಡಿ, ಕೈಬಳೆ.
14. ಕಾಗದ, ಮಶಿ.
15. ಗಡಿಯಾರ, ಚಾಕು, ಕತ್ತರಿ, ಸೂಜಿ ಇತ್ಯಾದಿ.
16. ಫಿರಂಗಿ, ಬಾಂಬ್, ಟ್ಯಾಂಕ್ ಮೊದಲಾದ ಯುದ್ಧೋಪಕರಣಗಳು.
17. ದೂರದರ್ಶಿ, ಸೂಕ್ಷ್ಮದರ್ಶಿ ಯಂತ್ರಗಳು.
18. ಉಷ್ಣಮಾಪಕ, ಶೈತ್ಯಮಾಪಕ, ಭೂಕಂಪಮಾಪಕ ಯಂತ್ರಗಳು.
19. ಕಬ್ಬಿಣ, ತಾಮ್ರ, ಉಕ್ಕು, ಕಲ್ಲಿದ್ದಲು, ಪೆಟ್ರೋಲ್ ಮೊದಲಾದ ಖನಿಜಗಳನ್ನು ಕಂಡುಹಿಡಿಯುವುದಕ್ಕೂ ಅವುಗಳನ್ನು ಭೂಗರ್ಭದಿಂದ ಮೇಲಕ್ಕೆ ತಂದು ನಾನಾ ರೂಪಗಳಲ್ಲಿ ಉಪಯೋಗಕ್ಕೆ ಸಿದ್ಧಗೊಳಿಸುವುದಕ್ಕೂ ಬೇಕಾದ ಯಂತ್ರಸಾಧನಗಳು.
20. ಪ್ರಾಣಿವರ್ಗಗಳ ವಂಶಾನುಕ್ರಮ, ವಂಶಬೀಜ ವಿಕಾಸ–ಈ ಜೈವ ತತ್ತ್ವ ವಿಚಾರಗಳು.

ಈ ಪಟ್ಟಿಯನ್ನು ಇದರ ಇಪ್ಪತ್ತರಷ್ಟು ಬೆಳೆಸಿದರೂ ಪ್ರಕೃತಿ ವಿಜ್ಞಾನದ ಸಿದ್ಧಿಗಳ ಎಣಿಕೆ ಮುಗಿಯಲಾರದು. ನಮ್ಮ ದಿನಂಪ್ರತಿಯ ಜೀವನದಲ್ಲಿ ವಿಜ್ಞಾನ ಸಂಪರ್ಕ ಬೇಕಿಲ್ಲದ ಇಲಾಖೆ ಒಂದೂ ಇಲ್ಲವೆಂದು ಈ ಪಟ್ಟಿಯನ್ನು ನೋಡುವುದರಿಂದಲೇ ಗೊತ್ತಾಗುತ್ತದೆ. ನೇಗಿಲುಗಳ ಮೊದಲುಗೊಂಡು ಆಕಾಶದಲ್ಲಿ ಭೋರಿಡುವ ಏರೋಪ್ಲೇನ್, ಆಸ್ಪತ್ರೆಯಲ್ಲಿ ನಡೆಯುವ ಅದ್ಭುತ ಚಿಕಿತ್ಸೆಗಳವರೆಗೂ ಎಲ್ಲ ಪ್ರಕೃತಿ ವಿಜ್ಞಾನದ ಮಹಿಮೆ. ಲೋಕಜೀವನಕ್ಕೆ ಇಷ್ಟು ಉಪಕಾರವಾಗಿರುವ, ಇಷ್ಟು ಅನಿವಾರ್ಯವಾಗಿರುವ,

ಯಂತ್ರೋಪಕರಣಗಳನ್ನೂ ರಸಾಯನ ತಂತ್ರಸಂಧಾನಗಳನ್ನೂ ಕಂಡುಹಿಡಿದವರು ಭಕ್ತರಲ್ಲವೆ? ಅವರು ಮಾಡಿದ ಕೆಲಸ ಭಗವಂತನ ಸೃಷ್ಟಿಯ ಪೋಷಣೆಗೆ ಸಾಧಕವಾಗಿಲ್ಲವೆ?

ಅವರಲ್ಲಿ ಕೆಲವರು ಲೋಕಸೇವಾ ಬುದ್ಧಿಯಿಂದ ಅಲ್ಲದೆ ದ್ರವ್ಯಲಾಭದ ಬುದ್ಧಿಯಿಂದ ಕೆಲಸ ಮಾಡಿದವರು ಇದ್ದಿರಬಹುದು. ಅದರಿಂದೇನು? ಹರಿದಾಸರುಗಳಲ್ಲಿಯೂ ಭಾಗವತರಲ್ಲಿಯೂ ಶಾಸ್ತ್ರಿ ಪುರೋಹಿತರುಗಳಲ್ಲಿಯೂ ಜೀವನೋಪಾಯಕ್ಕಾಗಿ ಬಾಯಿಬಿಡುವವರು ಎಷ್ಟೋ ಮಂದಿ ಇರುತ್ತಾರೆ. ಅದರಿಂದ ಮಿಕ್ಕೆಲ್ಲರೂ ಅಂಥವರೇ ಎಂದು ಹೇಳಲಾದೀತೇ? ಮತ್ತು ಜೀವನ ಸಂಪಾದಿಸಿಕೊಳ್ಳಬೇಕಾದದ್ದು ಮನುಷ್ಯರಿಗೆ ಕರ್ತವ್ಯ ತಾನೆ? ಕೆಲಸ ಮಾಡಿ ಜೀತ ಪಡೆಯುವುದರಲ್ಲಿ ದೋಷವೇನು? ಜೀತದ ಮಾತಲ್ಲ ಮುಖ್ಯ: ಕೆಲಸದ ಮಾತು ಮುಖ್ಯ. ಭೌತಶಾಸ್ತ್ರ ಶಿರೋಮಣಿ ನ್ಯೂಟನ್; ವಂಶಾನುಕ್ರಮ ವಿಕಾಸದರ್ಶಕ ಡಾರ್ವಿನ್; ಮಲಕ್ರಿಮಿನಾಶನ ವಿಧಾನವನ್ನು ಕಂಡುಹಿಡಿದ ಲಿಸ್ಟರ್; ಪ್ರತಿವಿಷಪ್ರಯೋಗರೂಪದ ವ್ರಣ ಚಿಕಿತ್ಸೆಯನ್ನು ಕಂಡುಹಿಡಿದ ಪ್ಯಾಶ್ಚರ್, ರೈಲನ್ನು ಕಂಡುಹಿಡಿದ ವ್ಯಾಟ್, ನೂಲು ರಾಟೆಯನ್ನು ನಿರ್ಮಿಸಿದ ಆರ್ಕ್‌ರೈಟ್, ಟೆಲಿಗ್ರಾಫನ್ನು ಕಂಡುಹಿಡಿದ ಎಡಿಸನ್– ಇಂಥವರೆಷ್ಟೋ ಮಂದಿ ತಮ್ಮ ತಮ್ಮ ಬುದ್ಧಿ ಪರಿಶ್ರಮದ ಮೂಲಕ ಮಾಡಿದ ಲೋಕ ಸೇವೆಯಿಂದ ಭಗವಂತನನ್ನು ಆರಾಧಿಸಿದ್ದಾರೆ.

ಪ್ರಕೃತಿವಿಜ್ಞಾನದಲ್ಲಿ ನಾನಾ ಶಾಸ್ತ್ರಗಳು ಶಾಸ್ತ್ರಶಾಖೆ ಉಪಶಾಖೆಗಳು ಸೇರಿವೆ. ಅವುಗಳಲ್ಲಿ ಮುಖ್ಯವಾದವು–

- ಭೌತಶಾಸ್ತ್ರ (ಫಿಸಿಕ್ಸ್)–ಇದರಲ್ಲಿ ಗಣಿತವೂ ಸೇರಿದೆ. ಖಗೋಳ ಪರೀಕ್ಷೆ, ಯಂತ್ರಾಂಗಗಳ ಬಲಕ್ರಿಯಾ ವಿಚಾರ, ಉಷ್ಣಪ್ರಭೆಗಳ ವೇಗಮಾಪನೆ, ವರ್ಣಕಾಂತಿ ವಿಮರ್ಶೆ, ಧ್ವನಿ ತರಂಗ ವ್ಯಾಪನ ವಿಚಾರ, ವಿದ್ಯುಚ್ಛಕ್ತಿಯ ವಿಚಾರ–ಇವೆಲ್ಲ ಫಿಸಿಕ್ಸಿನ ಇಲಾಖೆಗೆ ಸೇರಿದವು. ಇವೇ ಸಮಸ್ತ ಯಂತ್ರಸಂಧಾನ ವಿದ್ಯೆಗೂ ತಾಯಿ; ಮತ್ತು ವಿಜ್ಞಾನ ಸಾಮ್ರಾಜ್ಯಕ್ಕೆಲ್ಲಾ ಮಹಾರಾಣಿ.
- ರಸಾಯನಶಾಸ್ತ್ರ (ಕೆಮಿಸ್ಟ್ರಿ)–ಇದು ಜಗತ್ತಿನ ಪದಾರ್ಥಗಳಲ್ಲಿ ಸಂಯೋಗವಾಗಿರುವ ನಾನಾ ಧಾತುಗಳ ಸ್ವರೂಪವನ್ನು ಕಂಡುಕೊಳ್ಳತಕ್ಕದ್ದು. ಆಮ್ಲಗಳು, ಲವಣಗಳು, ಅನಿಲಗಳು, ಲೋಹಗಳು, ತೈಲಗಳು– ಇವು ನಾನಾ ಪ್ರಭೇದಗಳು, ಅವು ಪಡೆಯಬಹುದಾದ ನಾನಾ ರೂಪ ವಿಕಾರಗಳು– ಇದೆಲ್ಲ ಕೆಮಿಸ್ಟ್ರಿಯ ಕಾರ್ಯಕ್ಷೇತ್ರ. ಆಹಾರ ವಸ್ತುಗಳ ತಯಾರಿಕೆಯಲ್ಲಿಯೂ ಔಷಧವಸ್ತುಗಳ ತಯಾರಿಯಲ್ಲಿಯೂ ಬಟ್ಟೆಯ ಕಾರ್ಖಾನೆ ಮೊದಲಾದ ಯಂತ್ರ ಪರಿಶ್ರಮಗಳಲ್ಲಿಯೂ ಗೊಬ್ಬರ ಮೊದಲಾದ ವ್ಯವಸಾಯ ಸಾಮಗ್ರಿಗಳಲ್ಲಿಯೂ ರಸಾಯನ ಶಾಸ್ತ್ರ ಉಪಕಾರಿ.
- ಜೀವಶಾಸ್ತ್ರ (ಬಯಾಲಜಿ)–ಇದು ಸಸ್ಯಗಳ ಮತ್ತು ಪ್ರಾಣಿಗಳ ಅಂಗಾಂಗ ರಚನೆಯನ್ನೂ, ಅವಯವ ಕ್ರಿಯಾವಿಧಾನವನ್ನೂ, ವೃದ್ಧಿಕ್ಷಯ ಕ್ರಮಗಳನ್ನೂ ತಿಳಿಸುವ ಶಾಸ್ತ್ರ. ಇದರಲ್ಲಿ ಪ್ರಾಣಿಶಾಸ್ತ್ರ (ಜುಆಲಜಿ), ಸಸ್ಯವಿಜ್ಞಾನ (ಬಾಟನಿ) ಎಂಬೆರಡು ಮುಖ್ಯಭಾಗಗಳು.
- ಭೂಗರ್ಭಶಾಸ್ತ್ರ (ಜಿಯಾಲಜಿ)–ಇದು ಭೂಮಿಯ ಒಳರಚನೆ, ಅದರಲ್ಲಡಗಿರುವ ವಿವಿಧ ಶಿಲೆಗಳು, ಕಲ್ಲಿದ್ದಲು, ಎಣ್ಣೆ, ಲೋಹ ಮೊದಲಾದುವನ್ನು ಕುರಿತದ್ದು.
- ಶಿಲ್ಪಶಾಸ್ತ್ರ (ಎಂಜಿನೀಯರಿಂಗ್)–ಇದು ಕಟ್ಟಡಗಳು, ರಸ್ತೆಗಳು, ಸೇತುವೆಗಳು, ಯಂತ್ರಗಳು, ವಿದ್ಯುಚ್ಛಕ್ತಿ ಸಾಧನಗಳು–ಇವುಗಳ ರಚನೆಗೆ ಸಂಬಂಧಪಟ್ಟದ್ದು. ಇದು ಭೌತಶಾಸ್ತ್ರ ಗಣಿತಶಾಸ್ತ್ರಗಳ ಆಧಾರದ ಮೇಲೆ ನಿಂತಿರತಕ್ಕದ್ದು.

- ವೈದ್ಯಶಾಸ್ತ್ರ (ಮೆಡಿಸಿನ್)–ಇದರಲ್ಲಿ ಔಷಧಚಿಕಿತ್ಸೆ, ಶಸ್ತ್ರಚಿಕಿತ್ಸೆ ಎಂಬೆರಡು ಮುಖ್ಯಭಾಗಗಳು, ಜೊತೆಗೆ ಆಹಾರವಿಜ್ಞಾನ ವಿಭಾಗ, ಜನಾರೋಗ್ಯ ವಿಭಾಗ ಮೊದಲಾದ ಹೊಸ ಹೊಸ ಇಲಾಖೆಗಳು ಉಪಾಂಗಗಳಾಗಿ ಹುಟ್ಟಿಕೊಳ್ಳುತ್ತಿವೆ. ಈ ಶಾಸ್ತ್ರವು ಜೀವವಿಜ್ಞಾನ ರಸಾಯನವಿಜ್ಞಾನಗಳ ಆಧಾರದ ಮೇಲೆ ಬೆಳೆದಿರತಕ್ಕದ್ದು.

ಈ ನಾನಾ ಶಾಸ್ತ್ರಗಳಿಂದ ಲೋಕಕ್ಕೆ ಎಂಥೆಂಥ ಉಪಕಾರಗಳು ಆಗುತ್ತಿವೆಯೆಂಬುದನ್ನು ತಿಳಿಯದವರು ಈಗ ಬಹುಶಃ ಹಳ್ಳಿಗಾಡುಗಳಲ್ಲಿಯೂ ಸಹ ಇರಲಾರರು.

ಸಮಾಜವಿಜ್ಞಾನ :

ಇನ್ನು ಸಮಾಜವಿಜ್ಞಾನವನ್ನು ನೋಡೋಣ. ಈ ವಿಜ್ಞಾನಭಾಗವು ಮನುಷ್ಯರು ಊರು ಕೇರಿಗಳನ್ನೂ ಕುಲಜಾತಿಗಳನ್ನೂ ಕಟ್ಟಿಕೊಂಡು, ಗುಂಪು ಗುಂಪಾಗಿ ಬದುಕು ನಡೆಸುವ ಕ್ರಮಗಳ ವಿಚಾರದ್ದು ಮತ್ತು ಅವರ ಮನಸ್ಸಂಚಾರ ಅಂತರಂಗ ಸಂಸ್ಕಾರಗಳ ವಿಚಾರದ್ದು. ಇದರಲ್ಲಿ ಮುಖ್ಯ ವಿಭಾಗಗಳು ಯಾವುವೆಂಬುದನ್ನು ನೋಡಿದರೆ ಅದರ ಸ್ವರೂಪ ತಕ್ಕಮಟ್ಟಿಗೆ ಮನದಟ್ಟಾಗಬಹುದು. ಈ ವಿಭಾಗಗಳು ಇವು;

- ರಾಜ್ಯಶಾಸ್ತ್ರ (ಪಾಲಿಟಿಕ್ಸ್)–ಒಂದು ರಾಜ್ಯ ಅಥವಾ ಸರಕಾರ ಎಂದರೆ ಏನು, ಅದರ ರಚನೆ ಹೇಗಿರಬೇಕು, ಅದಕ್ಕೆ ಎಂಥೆಂಥ ಅಂಗಗಳಿರಬೇಕು, ಸರಕಾರಕ್ಕೂ ಪ್ರಜೆಗಳಿಗೂ ಸಂಬಂಧ ಹೇಗಿರಬೇಕು; ಸರಕಾರದ ಕರ್ತವ್ಯಗಳೇನು; ಸರಕಾರ ತಪ್ಪು ಮಾಡಿದರೆ ಜನದ ಪ್ರತೀಕಾರವೇನು; ಒಂದು ರಾಜ್ಯಕ್ಕೂ ಇನ್ನೊಂದು ರಾಜ್ಯಕ್ಕೂ ಸಂಬಂಧ ಎಂಥಾದ್ದಾಗಿರಬೇಕು; ಸರಕಾರಕ್ಕೆ ಮುಖ್ಯ ಬಲ ಎಲ್ಲಿಯದು; ದೇಶಪ್ರಜೆಗೆ ಸರಕಾರ ಇಷ್ಟವಾಗಿರಬೇಕಾದರೆ ಏನೇನು ವ್ಯವಸ್ಥೆ ಇರಬೇಕು–ಇದೇ ಮೊದಲಾದ ವಿಚಾರವು ರಾಜ್ಯಶಾಸ್ತ್ರದ್ದು.
- ಅರ್ಥಶಾಸ್ತ್ರ (ಎಕನಾಮಿಕ್ಸ್)– "ಅರ್ಥ" ಎಂದರೆ ಇಲ್ಲಿ ಹಣಕಾಸು ಆಸ್ತಿಪಾಸ್ತಿಗಳ ಆಡಳಿತ. ಇದು ದೇಶದ ಸಂಪತ್ತನ್ನು ಕುರಿತದ್ದು. ಇದರಲ್ಲಿ ನಾನಾ ಶಾಖೆಗಳು:
    - ರಾಜ್ಯಕೋಶ–ಎಂದರೆ ಸರಕಾರದ ವರಮಾನ ವೆಚ್ಚಗಳ ವಿಚಾರ. ಇದರಲ್ಲಿ ನಾನಾ ತೆರದ ತೆರಿಗೆಗಳು, ಸುಂಕಗಳು, ಕಂದಾಯಗಳು ಮೊದಲಾದ ಅಂಶಗಳು ಸೇರಿರುತ್ತವೆ.
    - ನಾಣ್ಯ ಮತ್ತು ನಾಣ್ಯ ವಿನಿಮಯ–ಎಂದರೆ ರೂಪಾಯಿ, ಆಣೆ, ಕಾಸು ಅಥವಾ ಪೈಸ (ನಯಾಪೈಸೆ) ಮೊದಲಾದುವನ್ನು ಯಾವ ಆಧಾರದ ಮೇಲೆ ಗೊತ್ತುಮಾಡುವುದು; ಅವುಗಳ ಪರಸ್ಪರ ಪರಿಣಾಮ ಹೇಗೆ; ಒಂದು ದೇಶದ ನಾಣ್ಯಕ್ಕೂ ಇನ್ನೊಂದು ದೇಶದ ನಾಣ್ಯಕ್ಕೂ ಇರಬೇಕಾದ ಬದಲಾಬದಲಿಯ ದರ ಹೇಗೆ–ಮೊದಲಾದ ವಿಚಾರ.
    - ಧನಾಪಣಗಳು–ಎಂದರೆ ಬ್ಯಾಂಕುಗಳು, ಅಥವ ಹಣದ ಮಳಿಗೆಗಳು. ಇದು ಸಾಲಗಳು, ಬಡ್ಡಿಯ ದರಗಳು ಮೊದಲಾದ ವಿಚಾರಕ್ಕೆ ಸೇರಿದ್ದು. ದೇಶದಲ್ಲಿ ಜನದ ಜೀವನಕ್ಕೆ ಬೇಕಾದ ಪದಾರ್ಥಗಳ ವ್ಯಾಪಾರ ಪ್ರವಾಹ ಧಾರಾಳವಾಗಿ ಹರಿಯುವಂತೆ ಮಾಡಲು ಹಣದ ಅನುಕೂಲತೆಯನ್ನೊದಗಿಸುವುದು ಈ ದ್ರವ್ಯಸಂಸ್ಥೆ.

    - ಉದ್ಯೋಗಾರ್ಜನೆ–ಎಂದರೆ ದೇಶಪ್ರಜೆಯ ಕಸಬು ಸಂಪಾದನೆ, ವೆಚ್ಚ, ಉಳಿತಾಯ ಈ ವಿಚಾರ. ಜನರ ಉದ್ಯೋಗಗಳೂ ಜೀವನೋಪಾಯಮಾರ್ಗಗಳೂ ಏನೇನು; ಅವರು ಉತ್ಪತ್ತಿ ಮಾಡುವ ದಿನಸುಗಳೇನು; ಎಷ್ಟು; ಅವುಗಳ ಬೆಲೆಗಳೇನು; ಪರದೇಶಗಳೊಡನೆ ಮಾಡುವ ಆಮದು ರಫ್ತುಗಳು ಎಷ್ಟರಮಟ್ಟಿನವು; ಒಟ್ಟಿನಮೇಲೆ ಪ್ರಜೆಯ ನೆಮ್ಮದಿ ಸೌಖ್ಯಗಳ ಅಂತಸ್ತು ಎಂಥಾದ್ದು –ಈ ವಿಚಾರವೂ ಅರ್ಥಶಾಸ್ತ್ರದ್ದು.
    - ಸಂಪದ್ವಿಭಾಗ–ಒಟ್ಟು ದೇಶದಲ್ಲಿರುವ ಪ್ರಜಾಸಮುದಾಯದ ಆಸ್ತಿ ಹಣ ಮೊದಲಾದ ಸಂಪತ್ತು ಜನದ ನಾನಾ ವರ್ಗಗಳಲ್ಲಿ ಯಾರ್ಯಾರಿಗೆ ಹೇಗೆ ಹೇಗೆ ಹಂಚಿಕೆಯಾಗಿದೆ; ಧನಿಕರ ಅಭಿವೃದ್ಧಿ ಯಾವ ಮಟ್ಟದಲ್ಲಿದೆ; ಬಡವರ ಯೋಗಕ್ಷೇಮಗಳು ಯಾವ ಮಟ್ಟದಲ್ಲಿವೆ; ಧನಿಕರಿಗೂ ಬಡವರಿಗೂ ತಾರತಮ್ಯ ಎಷ್ಟು ಮಟ್ಟಿಗಿದೆ; ಆ ವ್ಯತ್ಯಾಸಕ್ಕೆ ಸರಿಯಾದ ಮಿತಿ ಯಾವುದು; ಅದು ಮಿತಿಮೀರದಂತೆ ನೋಡಲು ಏನು ಏರ್ಪಾಟಿವೆ; ಜನಸಮಸ್ತಕ್ಕೂ ಸೇರಿರುವ ರಾಜ್ಯದ ಭೂಮಿ, ಗಣಿಗಳು, ನದಿ, ಜಲಾಶಯಗಳು, ಕಾಡುಗಳು ಮೊದಲಾದ ಸ್ವಾಭಾವಿಕ ಸಂಪತ್ತನ್ನು ಸರಕಾರ ಎಷ್ಟು ಮಾತ್ರ ಆಳುತ್ತಿದೆ; ಆ ಸಂಪತ್ತು ಎಷ್ಟು ದೂರ ಬಂಡವಾಳಸ್ಥರ ಕೈಸೇರಿದೆ; ಬಂಡವಾಳಸ್ಥರಿಂದ ಜೀತಗಾರರಿಗೆ ಅನ್ಯಾಯವಾಗದಂತೆ ನೋಡಲು ಎಂಥೆಂಥ ಕಾನೂನು ಕಟ್ಟುಪಾಡುಗಳು ಇವೆ–ಈ ಪ್ರಶ್ನೆಗಳು ಕೂಡ ಅರ್ಥಶಾಸ್ತ್ರದ ಒಂದು ಶಾಖೆ.
- ವ್ಯವಹಾರಧರ್ಮಶಾಸ್ತ್ರ (ಜೂರಿಸ್ ಪ್ರೂಡೆನ್ಸ್)–ಇದು ನ್ಯಾಯ ತತ್ತ್ವಶಾಸ್ತ್ರ. ಒಬ್ಬ ಮನುಷ್ಯನಿಗೂ ಇನ್ನೊಬ್ಬ ಮನುಷ್ಯನಿಗೂ, ಒಂದು ಗುಂಪಿಗೂ ಇನ್ನೊಂದು ಗುಂಪಿಗೂ, ರಾಜ್ಯಕ್ಕೂ ಪ್ರಜೆಗೂ ಎಂಥೆಂಥ ಪರಸ್ಪರ ಸಂಬಂಧಗಳಿರುವುದು ಸರಿ; ಆಸ್ತಿ, ಹಕ್ಕು, ದಾಯಭಾಗ, ಯಜಮಾನಿಕೆ, ಪೋಷ್ಯ–ಪೋಷಕ ಸಂಬಂಧ, ಸ್ವಾಮಿ–ಭೃತ್ಯಸಂಬಂಧ, ಋಣ, ಒಪ್ಪಂದ–ಈ ಬಾಧ್ಯತೆಗಳ ನ್ಯಾಯಾನ್ಯಾಯಗಳು; ಆ ಸಂಬಂಧಗಳಲ್ಲಿ ತಪ್ಪಿತ ನಡೆದರೆ ಅದನ್ನು ತಿದ್ದುವುದು ಹೇಗೆ; ವಿವರಣೆ ನಡಸುವವರು ಯಾರು; ಎಂಥ ಅಪರಾಧಕ್ಕೆ ಎಂಥ ದಂಡನೆ; ಸರಕಾರವು ಪ್ರಜೆಯ ಜೀವನದೊಳಕ್ಕೆ ಎಷ್ಟು ದೂರ ಕೈಹಾಕಬಹುದು; ಎಲ್ಲಿ ಅದು ಪ್ರವೇಶ ಮಾಡುವುದು ಅನುಚಿತ–ಇವೇ ಮೊದಲಾದ ವಿಚಾರಗಳನ್ನು ವಿಮರ್ಶೆ ಮಾಡಿ ರಾಜ್ಯಶಾಸನದ (ಎಂದರೆ ಕಾನೂನು ಕಾಯಿದೆಗಳ) ಮೂಲತತ್ತ್ವಗಳನ್ನು ನಿರ್ಧಾರಪಡಿಸುವುದು ವ್ಯವಹಾರಧರ್ಮಶಾಸ್ತ್ರ.
- ಸಮಾಜ ಸಂಪ್ರದಾಯಶಾಸ್ತ್ರ (ಸೋಷಿಯಾಲಜಿ)–ಇದು ಜನದ ಕುಲಾಚಾರ ಪದ್ಧತಿಗಳನ್ನು ಕುರಿತದ್ದು. ಮದುವೆ, ಕುಟುಂಬ ವ್ಯವಸ್ಥೆ, ಜನನ ಮರಣ ಸಂಸ್ಕಾರಗಳು, ಬಂಧುಬಳಗಗಳ ಮರ್ಯಾದೆಗಳು, ಅತಿಥಿಸತ್ಕಾರ ರೀತಿ–ಇವೇ ಮೊದಲಾದ ಸಂಸಾರ ಜೀವನದ ನಯ ನೀತಿಗಳು ಯಾವ ಯಾವ ಜನಾಂಗದಲ್ಲಿ ಹೇಗೆ ಹೇಗೆ ಇವೆ. ಅವುಗಳ ಸೂಕ್ಷ್ಮತತ್ತ್ವವೇನು; ನಾನಾ ಸಂಪ್ರದಾಯಗಳ ಚರಿತ್ರೆಯೇನು–ಎಂದು ಶೋಧನೆ ಮಾಡಿ ಹೋಲಿಸಿ ನೋಡಿ, ಮನುಷ್ಯ ಜಾತಿಗೆಲ್ಲ ಸರ್ವಸಾಮಾನ್ಯವಾದ ಲಕ್ಷಣಗಳಾವುವು, ವಿಲಕ್ಷಣಗಳಾವುವು ಎಂಬುದನ್ನು ಗೊತ್ತುಮಾಡಿ, ಸಮಾಜ ವ್ಯವಸ್ಥೆಯ ಪರಿಷ್ಕರಣಕ್ಕೆ ಸಹಾಯವಾಗಬೇಕಾದದ್ದು ಈ ಶಾಸ್ತ್ರ.
- ಸಂಖ್ಯಾಪ್ರಮಾಣಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್)–ಇದು ದೇಶದ ಪರಿಸ್ಥಿತಿಯನ್ನು ಎಣಿಕೆಯಿಂದಲೂ ಅಳತೆಯಿಂದಲೂ ನಿಷ್ಕರ್ಷೆಯಾಗಿ ತಿಳಿಸತಕ್ಕದ್ದು; ಎಂದರೆ, ಜನದ ಕ್ಷೇಮಲಾಭಗಳ ಲೆಕ್ಕಾಚಾರ. ಸೆನ್ಸಸ್ ಅಥವಾ ಖಾನೇಷುಮಾರಿಯೆಂಬ ಪ್ರಜಾಗಣತಿ ಇದಕ್ಕೆ ಮೂಲಾಧಾರ, ವರ್ಷೇವರ್ಷೇ ಜನನಗಳೆಷ್ಟು; ಮರಣಗಳೆಷ್ಟು; ಆಯುಃಪ್ರಮಾಣವೆಷ್ಟು; ಯಾವ ಯಾವ ವಯಸ್ಸಿನಲ್ಲಿ ಯಾವ ಯಾವ ದರ್ಜೆಯ ಜನ ಕಾಯಪುಷ್ಟಿಯಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಯಾವ ಯಾವ

ಸ್ಥಿತಿಯಲ್ಲಿರುತ್ತಾರೆ; ನಾನಾ ದರ್ಜೆಯ ಆಹಾರ ಪದಾರ್ಥಗಳ ಆರೋಗ್ಯ ಗುಣ ಹೇಗೆ; ಅವರ ವಸತಿಯ ಅನುಕೂಲತೆ ಹೇಗೆ; ಯಾರ್ಯಾರಲ್ಲಿ ಸಮಾಜಾನುಕೂಲಗುಣ ಎಷ್ಟೆಷ್ಟು ಮಟ್ಟಿಗೆ ಇದೆ; ದುರಭ್ಯಾಸ ದುಷ್ಟಚಾಳಿಗಳ ಹಂಚಿಕೆ ಹೇಗಿದೆ–ಇವೇ ಮೊದಲಾದ ಸಂಗತಿಗಳನ್ನು ಅಂಕಿ ಅಂಶಗಳ ಆಧಾರದಿಂದ ಖಚಿತವಾಗಿ ಗೊತ್ತುಮಾಡಿ ಹೇಳುವ ಶಾಸ್ತ್ರ ಇದು. ಇದು ನಾಗರಿಕ ದೇಶಗಳಲ್ಲಿ ಈಚೀಚೆಗೆ ವಿಶೇಷವಾಗಿ ಬೆಳೆಯುತ್ತಿದೆ.

- ಮನಶ್ಶಾಸ್ತ್ರ (ಸೈಕಾಲಜಿ)–ಜನರ ಮನಸ್ಸುಗಳ ಬಲಾಬಲಗಳು ಯಾವ ಮಟ್ಟದಲ್ಲಿವೆ, ಅವರ ಶುಚಿ ನೀತಿ ನಯಗಳೂ ಲೈಂಗಿಕ ವ್ಯಾಪಾರ ವಿಕಾರಗಳೂ ಹೇಗೆ ಹೇಗಿವೆ; ಅವರ ಕಸಬಿಗೂ ಅವರ ಬುದ್ಧಿಶಕ್ತಿಗೂ ಅವರ ಮನೋಧರ್ಮಕ್ಕೂ ಸಂಬಂಧವೇನಾದರೂ ಉಂಟೆ; ಯಾವ ಯಾವ ದರ್ಜೆಯ ಜನರಲ್ಲಿ ಎಂಥೆಂಥ ಸಾಮರ್ಥ್ಯ ಹೆಚ್ಚಾಗಿರುತ್ತದೆ; ಯಾವ ಯಾವ ವಯಸ್ಸಿನಲ್ಲಿ ಆ ಸಾಮರ್ಥ್ಯ ಮೇಲ್ಮಟ್ಟದಲ್ಲಿರುತ್ತದೆ; ಜವಾಬ್ದಾರಿ ಕೆಲಸಗಳಿಗೂ ಯಜಮಾನಿಕೆಯ ಪದವಿಗಳಿಗೂ ಅರ್ಹರಾದವರು ಯಾರು; ತಾಪೇದಾರಿಗೆ ಅರ್ಹರು ಯಾರು; ಸಾಹಸಗಳಿಗೆ ಅರ್ಹರು ಯಾರು–ಎಂದು ವಿಚಾರಿಸಿ ಜನಕ್ಕೆ ಯೋಗ್ಯತಾನಿರ್ಣಯ ಮಾಡಿ ಹೇಳುವುದು ಈ ಶಾಸ್ತ್ರ. ಈಚೆಗೆ ಅಮೆರಿಕದಲ್ಲಿ ಸೈನ್ಯೋದ್ಯೋಗ ಮೊದಲಾದ ಮುಖ್ಯಮುಖ್ಯ ಉದ್ಯೋಗಗಳಿಗೆ ಈ ಶಾಸ್ತ್ರದ ಪರೀಕ್ಷೆಗಳಿಂದ ಜನರನ್ನಾರಿಸಿಕೊಳ್ಳುವುದುಂಟು.

ಹೀಗೆ ನೂರು ಮುಖವಾಗಿ ಬೆಳೆದು ಸಾವಿರ ಪ್ರಕಾರವಾಗಿ ಲೋಕದ ಜೀವನವನ್ನು ಬದಲಾಯಿಸುತ್ತಿದೆ ವಿಜ್ಞಾನ ಮಹಿಮೆ. ವಿಜ್ಞಾನಶಾಸ್ತ್ರವು ಮನುಷ್ಯ ಬುದ್ಧಿಯ ಫಲ. ವಿಜ್ಞಾನಸಂಧಾನವು ಮನುಷ್ಯಯತ್ನದ ಫಲ. ನೂರಾರು ಮಂದಿ ಮೇಧಾವಿಗಳ ಯುಕ್ತಿಚಮತ್ಕಾರಗಳೂ, ಆಲೋಚನೆ ಅನ್ವೇಷಣೆಗಳೂ, ಪ್ರಯೋಗ ಪರೀಕ್ಷೆಗಳೂ ವಿಜ್ಞಾನ ಪ್ರಗತಿಯನ್ನು ಮುಂದು ಮುಂದಕ್ಕೊಯ್ಯುತ್ತಿವೆ. ಇಂಗ್ಲೆಂಡು, ಫ್ರಾನ್ಸು, ಜರ್ಮನಿ, ರಷ್ಯ, ಜಪಾನ್, ಅಮೆರಿಕ ಮೊದಲಾದ ವಿದೇಶಗಳಲ್ಲಿಯೂ ನಮ್ಮ ಇಂಡಿಯಾದೇಶದಲ್ಲಿಯೂ ಕೂಡಾ ನಾನಾ ಯಂತ್ರ ಸಾಧನಗಳಿಂದ ಆಗುತ್ತಿರುವ ಮಹಾ ವ್ಯತ್ಯಾಸಗಳನ್ನು ನೋಡಿದರೆ ಪುರುಷಪ್ರಯತ್ನ ವ್ಯರ್ಥವೆಂದು ಯಾರಿಗಾದರೂ ಅನ್ನಿಸೀತೆ? ಇಂಥಾ ವಿಜ್ಞಾನವನ್ನು ನಾವು ಬಿಡಲಾಗದು. ಅದನ್ನು ನಮ್ಮ ಜೀವನಕ್ರಮದೊಳಕ್ಕೆ ಹದವರಿತು ತಂದುಕೊಳ್ಳಬೇಕು.

ವಿಜ್ಞಾನಕ್ಕಿರುವ ಮಿತಿ :

ವಿಜ್ಞಾನದಿಂದ ಎಲ್ಲವೂ ಸಾಧ್ಯವೆಂದು ಯಾರೂ ಹೇಳುವುದಿಲ್ಲ. ವಿಜ್ಞಾನಕ್ಕೆ ಮಿಂಚಿದ ಪ್ರಶ್ನೆಗಳು ನಮ್ಮ ಜೀವನದಲ್ಲಿ ಸಾವಿರ ಇವೆಯೆಂಬುದು ನಿಜ. ಜೀವತತ್ತ್ವ ಮನಸ್ತತ್ತ್ವಗಳ ಮರ್ಮವನ್ನು ವಿಜ್ಞಾನವು ಸೋಕಲಾಗಿಲ್ಲ. ಜಗನ್ಮೂಲವನ್ನು ಅದೇನೂ ಕಂಡಿಲ್ಲ. ಇಷ್ಟೆಲ್ಲಾ ವಿಜ್ಞಾನವೃದ್ಧಿ ಮಾಡಿಕೊಂಡಿರುವ ಯೂರೋಪಿಗೆ ಭಯಂಕರ ಯುದ್ಧವನ್ನೂ ನರಹತ್ಯೆಯನ್ನೂ ತಪ್ಪಿಸುವುದು ಸಾಧ್ಯವಾಗಿಲ್ಲ. ಬರಿಯ ವಿಜ್ಞಾನವೊಂದು ಮಾತ್ರವೇ ಪ್ರಬಲಿಸಿದರೆ ಸಾಲದು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಹಾಗೆಯೇ ವಿಜ್ಞಾನವನ್ನು ಬಿಟ್ಟರೂ ನಮ್ಮ ಜೀವನ ಚೆನ್ನಾಗಿ ಸಾಗಲಾರದು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು.

ವಿಜ್ಞಾನ ಒಂದು ಆಯುಧದಂತೆ, ಅಥವಾ ಹಣದಂತೆ. ಆಯುಧವನ್ನು ಪ್ರಾಣಸಂರಕ್ಷಣೆಗಾದರೂ ಉಪಯೋಗಿಸಬಹುದು; ಕೊಲೆಪಾತಕಕ್ಕಾದರೂ ಉಪಯೋಗಿಸಬಹುದು. ಆಯುಧದಲ್ಲಿ ತಪ್ಪೂ ಇಲ್ಲ.

ಸರಿಯೂ ಇಲ್ಲ. ತಪ್ಪು ಸರಿಗಳು ಆಯುಧ ಹಿಡಿದವನ ಮನಸ್ಸಿನವು. ಹಣದ ಮಾತೂ ಅಷ್ಟೇ. ಅದು ಪರೋಪಕಾರಕ್ಕೂ ಆಗುತ್ತದೆ, ಹಿಂಸೆಗೂ ಆಗುತ್ತದೆ. ಹಣ ಒಳ್ಳೆಯದೋ ಕೆಟ್ಟದ್ದೋ ಹಣವಂತನ ನೀತಿ ವಿವೇಕದಂತೆ ಇರುತ್ತದೆ. ವಿಜ್ಞಾನಶಕ್ತಿಯೂ ಅಷ್ಟೇ.

ದುಷ್ಟರು ಐಶ್ವರ್ಯವನ್ನು ದುರುಪಯೋಗ ಮಾಡಿಯಾರೆಂಬ ಕಾರಣದಿಂದ ಯಾರೂ ದಾರಿದ್ರ್ಯವನ್ನು ಬೇಡುವುದಿಲ್ಲ. ಯೂರೋಪಿಯನ್ನರ ಯುದ್ಧದ ಕಾರಣದಿಂದ ನಾವು ವಿಜ್ಞಾನಶಕ್ತಿ ನಮಗೆ ಬೇಡವೆನ್ನತಕ್ಕದ್ದಲ್ಲ.

ಶಕ್ತಿಯಿಲ್ಲದವರ ಒಳ್ಳೆಯತನ ಬರಿಯ ಪೇಚಾಟ. ತಾಯಿಗೆ ಮಗುವಿನಲ್ಲಿ ಪ್ರೀತಿ ಸಹಜವಾಗಿರುತ್ತದಷ್ಟೆ? ಆದರೆ ಮಗುವಿಗೆ ರೋಗ ಬಂದಿರುವಾಗ ತಾಯಿ ಅಳುತ್ತ ಕೂತರೆ ವಾಸಿಯಾಗುತ್ತದೆಯೆ? ತಾಯಿಯ ಪ್ರೀತಿಯು ಆಗ ಬರಿಯ ಕಣ್ಣೀರಾಗಬಾರದು, ಅದು ಶಕ್ತನಾದ ವೈದ್ಯನನ್ನು ಕರೆತರುವ ಧೈರ್ಯವಿವೇಕವಾಗಬೇಕು. ಕಾಯಿಲೆಯನ್ನು ಗುಣಮಾಡುವುದು ತಾಯಿಯ ಪೇಚಾಟವಲ್ಲ. ವೈದ್ಯನ ವಿಜ್ಞಾನಶಕ್ತಿ. ನಮ್ಮ ಎಲ್ಲ ಕಷ್ಟಗಳ ವಿಚಾರವೂ ಹಾಗೆಯೇ. ಅವುಗಳ ನಿವಾರಣೆಗೆ ಮೊದಲು ಬೇಕಾದದ್ದು ನಮ್ಮ ವಿವೇಕದ ಪ್ರಯತ್ನ. ದೈವಕೃಪೆಯ ಮಾತು ಆಮೇಲೆ, ಕಷ್ಟ ಹೇಗೆ ಹುಟ್ಟಿತು, ಅದಕ್ಕೆ ಯಾವ ಪ್ರತಿಕ್ರಿಯೆ ಸರಿ, ಎಂಬುದನ್ನು ಹುಡುಕಿ ಹೇಳುವುದು ವಿಜ್ಞಾನ ಶೋಧನೆ. ನಮ್ಮ ಜೀವನದ ಎಲ್ಲಾ ಪ್ರಶ್ನೆಗಳನ್ನೂ ವಿಜ್ಞಾನದ ರೀತಿಯಲ್ಲಿ ಯೋಚಿಸಿ ವಿಮರ್ಶೆಮಾಡಿಕೊಳ್ಳಬೇಕು.

ಅಬಿಸೀನಿಯ ದೇಶದ ಹೆಸರು ೨೦-೨೫ ವರ್ಷಗಳಿಂದೀಚೆಗೆ ಇಂಡಿಯದಲ್ಲಿ ಕೂಡ ಎಲ್ಲರಿಗೂ ತಿಳಿದಿದೆ. ಆ ದೇಶ ಆಫ್ರಿಕಾ ಭೂಖಂಡದಲ್ಲಿದೆ. ಅಲ್ಲಿಯ ಜನರು ಮಿಶ್ರವರ್ಣದವರು; ಬಹುಮಟ್ಟಿಗೆ ಕ್ರಿಶ್ಚಿಯನರು. ಅವರ ಸ್ವಭಾವದ ಒಳ್ಳೆಯತನವೂ, ಸ್ವದೇಶ ಪ್ರೀತಿಯೂ ಯಾವ ಜನಾಂಗದ್ದಕ್ಕಿಂತಲೂ ಕಡಮೆಯಾದದ್ದಲ್ಲ. ಅವರು ಧೈರ್ಯಸಾಹಸಿಗಳೂ ಹೌದು. ಆದರೆ ವಿಜ್ಞಾನದ ಸಹಾಯ ಮಾತ್ರ ಅವರಿಗೆ ಹೆಚ್ಚಾಗಿ ಇರಲಿಲ್ಲ. ೧೯೩೫ನೆಯ ಅಕ್ಟೋಬರ್ ೩ರಲ್ಲಿ ಇಟಲೀ ದೇಶದ ಸೈನ್ಯವು ಮುಸ್ಸೋಲಿನಿಯ ಆಧಿಪತ್ಯದಲ್ಲಿ ಅಬಿಸೀನಿಯದ ಮೇಲೆ ನುಗ್ಗಿತು. ಆ ದೇಶವನ್ನು ಜಯಿಸುವುದಕ್ಕೆ ನಾಲ್ಕು ಲಕ್ಷದಷ್ಟು ಸೈನ್ಯವು ನಾಲ್ಕು ವರ್ಷದಷ್ಟು ಕಾಲ ಕಾದಬೇಕಾದೀತೆಂದು ಮುಸ್ಸೋಲಿನಿಯ ಯುದ್ಧಪ್ರವೀಣರು ಹೇಳುತ್ತಿದ್ದರು. ಆದರೆ ಇಟಲಿಯ ಚಿಲ್ಲರೆ ಸೈನ್ಯಗಳಿಂದಲೇ ಏಳು ತಿಂಗಳೊಳಗಾಗಿ-೧೯೩೬ನೆಯ ಮೇ ೫ ರಲ್ಲಿ-ಅಬಿಸೀನಿಯ ರಾಜ್ಯ ಇಟಲಿಯ ಪಾಲಾಯಿತು. ಇಟಲಿಗಿದ್ದ ಬಲವು ವಿಜ್ಞಾನಬಲ-ಮೋಟಾರುಗಳು, ಏರೋಪ್ಲೇನುಗಳು, ಸೈನ್ಯವ್ಯೂಹದ ಚಮತ್ಕಾರ. ಅಬಿಸೀನಿಯದವರಿಗೆ ಸ್ವಾಭಾವಿಕವಾದ ಸಂರಕ್ಷಣೆಗಳು ಎಷ್ಟೋ ಇದ್ದವು-ಬೆಟ್ಟಕಾಡುಗಳು, ಏರುತಗ್ಗು ನೆಲ, ಸಂಚಾರಕ್ಕೆ ಕಷ್ಟವಾದ ಸನ್ನಿವೇಶ. ಆದರೆ ಈ ಅನುಕೂಲತೆಗಳೂ, ಅಬಿಸೀನಿಯನ್ನರ ಶೌರ್ಯಸಾಹಸಗಳೂ ಮುಸ್ಸೋಲಿನಿಯ ಮೋಟಾರು, ಏರೋಪ್ಲೇನುಗಳ ಹೊಡೆತದ ಮುಂದೆ ಎಷ್ಟು ಮಾತ್ರವೂ ಸಾರ್ಥಕವಾಗದೆ ಹೋದುವು. ಅದು ಇಂಡಿಯಾದೇಶಕ್ಕೆ ದೊಡ್ಡ ಪಾಠ.

ಪ್ಲೇಗು, ಕಾಲರಾ ಇಂಥಾ ಸೋಂಕುರೋಗದ ಸೂಚನೆ ಪರಂಗಿಯವರ ಊರಿನಲ್ಲಿ ಎಲ್ಲಾದರೂ ಕಾಣಿಸಿಕೊಂಡರೆ ಕೂಡಲೆ ಅವರು ಅಲ್ಲಿಗೆ ಜನಾರೋಗ್ಯದ (ಹೆಲ್ತ್) ಅಧಿಕಾರಿಯನ್ನು ಬರಮಾಡಿ, ಜನರಿಗೆ ಚುಚ್ಚುಮದ್ದು (ಇನಾಕ್ಯುಲೇಷನ್) ಹಾಕಿಸಿ, ಮನೆಗಳನ್ನು ಶುದ್ಧಿಮಾಡಿಸಿ, ಮುಂಜಾಗ್ರತೆಯಿಂದ ರೋಗವನ್ನು ತಡೆಯುತ್ತಾರೆ. ನಮ್ಮೂರಿನಲ್ಲಿ ಹಾಗೆ ಕಾಣಿಸಿದರೆ ಮನೆಯ ರೊಚ್ಚನ್ನು ಹಾಗೆಯೇ ಬಿಟ್ಟು,

ವೈದ್ಯರ ಹೆಸರನ್ನು ಕೂಡ ನೆನೆಯದೆ, ಮೊದಲು ಮಾರಮ್ಮನಿಗೆ ಹರಕೆ ಹೊರುತ್ತೇವೆ. ಎರಡು ಜನಾಂಗಗಳಿಗೂ ಇರುವ ಈ ದೊಡ್ಡ ವ್ಯತ್ಯಾಸ ನಮ್ಮ ಗಮನದಲ್ಲಿರಬೇಕಾದದ್ದು. ಮಾರಮ್ಮನ ಪೂಜೆಯನ್ನು ಬೇಕಾದ ಹಾಗೆ ಮಾಡೋಣ. ಆದರೆ ಅದರ ಜೊತೆಯಲ್ಲಿಯೇ ವಿಜ್ಞಾನದ ಸಹಾಯವನ್ನು ತಪ್ಪದೆ ತೆಗೆದುಕೊಳ್ಳೋಣ.

"ಪಂಪಿಸಿ" – ಪ್ರಾರ್ಥಿಸಿ :

ಹಲವು ಮಂದಿ ಇಂಗ್ಲಿಷ್ ಜನರು ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದರಂತೆ. ಆಗ ಬಿರುಗಾಳಿಯೆದ್ದು, ಸಮುದ್ರ ಕೆರಳಿ, ಅಲೆಗಳ ಹೊಡೆತ ಜೋರಾಯಿತು. ಹಡಗಿನೊಳಗೆ ನೀರು ತುಂಬಿಕೊಂಡುಬಂತು. ಜನ ಹೆದರಿ ದಿಕ್ಕು ತೋರದೆ ಕಡೆಗೆ, ಹಡಗಿನ ಕೋಣೆಯಲ್ಲಿದ್ದ ಪಾದರಿಯ ಬಳಿ ಹೋಗಿ ಸಂಗತಿಯನ್ನು ಆತನಿಗೆ ತಿಳಿಸಿದರಂತೆ. ಆತ–ಆ ಕ್ರೈಸ್ತಗುರುವು– "ಹಾಗೆಯೆ? ಏನು ಮಾಡೋಣ!" ಎಂದು ಕೇಳಿದನಂತೆ. ಅವರು "ದೇವರಿಗೆ ಪ್ರಾರ್ಥನೆ ಮಾಡೋಣ, ಬನ್ನಿ; ನೀವು ನಮ್ಮನ್ನು ನಡಸಿ" ಎಂದರು. ಆತನು "ಓಹೋ? ಅಷ್ಟಕ್ಕೆ ಬಂತೆ ನಿರಾಶೆ?" ಎಂದನಂತೆ. ಅವರ ಕೂಗಾಟ ಇನ್ನೂ ಹೆಚ್ಚಲು, ಆತ "ಹಾಗಾದರೆ ಪ್ರಾರ್ಥನೆ ಮಾಡಿರಿ; ಆದರೆ ಪಂಪು (ನೀರೆತ್ತುವ ನಾಳ) ಹೊಡೆಯುತ್ತ ಪ್ರಾರ್ಥನೆ ಮಾಡಿರಿ (Pump and Pray), ಪಂಪು ಮಾತ್ರ ಕೈಬಿಡಬೇಡಿ" ಎಂದು ಸಾರಿದನಂತೆ. ಇದು ಬರಿಯ ಕಥೆ ಇರಬಹುದು. ಆದರೆ ಅದು ಇಂಗ್ಲೀಷ್ ಜನದ ಮನೋಭಾವವನ್ನು ತೋರಿಸುತ್ತದೆ. ಅವರ ಸೂತ್ರ (God helps those who help themselves) "ಯಾರು ತಮಗೆ ತಾವು ಸಹಾಯ ಮಾಡಿಕೊಳ್ಳುತ್ತಾರೋ ಅಂಥವರಿಗೆ ದೇವರು ಸಹಾಯವಾಗುತ್ತಾನೆ" ಎಂದು. ದೈವಸಹಾಯವಿಲ್ಲದೆ ಜಯವಿಲ್ಲ ಎಂಬುದು ನಿಜ. ಅದರ ಜೊತೆಗೆ ಸ್ವಪ್ರಯತ್ನವಿಲ್ಲದೆ ದೈವಸಹಾಯವಿಲ್ಲ ಎಂಬುದೂ ನಿಜ. ಮನುಷ್ಯನಿಗೆ ದೇವರು ಬುದ್ಧಿಸಾಮರ್ಥ್ಯಗಳನ್ನು ಒಂದಷ್ಟು ಕೊಟ್ಟಿದ್ದಾನೆ. ಅದರಿಂದ ಮನುಷ್ಯನ ಮೇಲೆ ಕರ್ತವ್ಯದ ಜವಾಬ್ದಾರಿ ಅಷ್ಟಿಷ್ಟು ಹೊತ್ತಿದೆ. ತನ್ನ ಆ ಕರ್ತವ್ಯದ ಹೊರೆಯನ್ನು ಅವರು ದೇವರ ಹೆಗಲಿಗೆ ಹಿಂತಿರುಗಿಸುವುದು ದೈವವಿಧೇಯತೆಯಲ್ಲ. ತನ್ನ ಭಾರವನ್ನು ತಾನು ಹೊತ್ತು, ಮಿಕ್ಕದ್ದನ್ನು ದೈವಕ್ಕೆ ಒಪ್ಪಿಸಬೇಕು.

ವಿಜ್ಞಾನ ಬೇಕು:

ರೋಗಕ್ಕೆ ಹೇಗೆ ವೈದ್ಯಚಿಕಿತ್ಸೆಯೋ ನಮ್ಮ ಎಲ್ಲ ಇತರ ಕಷ್ಟಗಳಿಗೂ ವಿಜ್ಞಾನ ಹಾಗೆ. ನಮ್ಮ ರೈತರು ಬೇಸಾಯದಲ್ಲಿ–ನೆಲ ಉಳುವುದರಲ್ಲಿ, ಗೊಬ್ಬರ ಹಾಕುವುದರಲ್ಲಿ, ಬೀಜ ಆರಿಸುವುದರಲ್ಲಿ, ಕಳೆ ತೆಗೆಯುವುದರಲ್ಲಿ, ನೀರಿನ ವ್ಯರ್ಥವನ್ನು ಕಡಮೆ ಮಾಡುವುದರಲ್ಲಿ, ಬಂದ ಬೆಳೆಯನ್ನು ಒಟ್ಟು ದಾಸ್ತಾನು ಸೇರಿಸುವುದರಲ್ಲಿ–ಎಲ್ಲ ಕೆಲಸಗಳಲ್ಲಿಯೂ ಹೊಸ ಹೊಸ ವಿಜ್ಞಾನಯಂತ್ರಗಳನ್ನೂ ವಿಜ್ಞಾನ ಕ್ರಮಗಳನ್ನೂ ಹಿಡಿಯಬೇಕು. ಆಗ ಒಂದು ತೆನೆ ಬೆಳೆಯುತ್ತಿರುವ ಕಡೆ ಎರಡು ತೆನೆ ಬೆಳೆದೀತು; ಒಂದು ರೂಪಾಯಿ ಉತ್ಪತ್ತಿಯಾಗುತ್ತಿರುವ ಕಡೆ ಎರಡು ರೂಪಾಯಿ ಹುಟ್ಟೀತು.

ನೆಯ್ಗೆಯವರೂ ಹಾಗೆಯೇ–ಹತ್ತಿ ಆರಿಸುವುದರಲ್ಲಿ, ಅದನ್ನು ಚೊಕ್ಕಟ ಮಾಡುವುದರಲ್ಲಿ, ನೂಲು ತೆಗೆಯುವುದರಲ್ಲಿ, ಬಣ್ಣ ಕಟ್ಟುವುದರಲ್ಲಿ, ಮಗ್ಗದ ವೇಗದಲ್ಲಿ, ಬಟ್ಟೆಯ ನಯದಲ್ಲಿ, ಅಂಚಿನ

ನಮೂನೆಯಲ್ಲಿ –ಎಲ್ಲದರಲ್ಲಿಯೂ ವಿಜ್ಞಾನ ಒದಗಿಸಿರುವ ಸಾಧನಗಳನ್ನು ಉಪಯೋಗಿಸಿಕೊಳ್ಳಬೇಕು.

ಬಡಗಿಯವರೂ ಹಾಗೆಯೇ ಮಾಡಬೇಕು. ಅಗಸರೂ ನಾಯಿಂದರೂ ಸಹ ತಮ್ಮ ತಮ್ಮ ಕಸಬಿನಲ್ಲಿ – ಸಾಬೂನಿನ ಗಂಜಿ ಹಿಟ್ಟುಗಳಲ್ಲಿ, ಇಸ್ತ್ರಿಪೆಟ್ಟಿಗೆ ಕ್ಷೌರಕತ್ತಿಗಳಲ್ಲಿ, ತಮ್ಮ ಮೈಕೈ ಶುದ್ಧಿಯಲ್ಲಿ–ವಿಜ್ಞಾನದ ಸಹಾಯವನ್ನು ತೆಗೆದುಕೊಳ್ಳಬೇಕು.

ಉಪಾಧ್ಯಾಯರೂ ಹಾಗೆಯೇ ಮಾಡಬೇಕಾದವರೆಂದು ಹೇಳಬೇಕಾದದ್ದೇ ಇಲ್ಲ. ವಿಜ್ಞಾನ ವಿಚಾರದಲ್ಲಿ ಅವರೇ ಎಲ್ಲರಿಗೂ ಗುರುಗಳಾಗಬೇಕು.

ನಮ್ಮ ನಮ್ಮ ಗೃಹಕೃತ್ಯಗಳಲ್ಲೂ ವಿಜ್ಞಾನಕ್ರಮ ಬರಬೇಕು. ಮನೆಯ ಶುಚಿ, ಮಕ್ಕಳ ಚೊಕ್ಕಟ, ಪದಾರ್ಥಗಳ ಒಪ್ಪ ಓರಣ, ಊಟ ಉಪಚಾರಗಳ ಕಾಲ ನಿಯಮ, ಮಾತುಕಥೆಗಳ ಮರ್ಯಾದೆ, ಅತಿಥಿಗಳ ಆದರಣೆ, ಆದಾಯ ವೆಚ್ಚಗಳ ಹೊಂದಿಕೆ–ಈ ಎಲ್ಲ ವಿಚಾರಗಳಲ್ಲೂ ಒಂದು ಗೊತ್ತಾದ ಏರ್ಪಾಟು, ಒಂದು ಅಚ್ಚುಕಟ್ಟು ಇರಬೇಕು.

ಕರಾರುವಾಕ್ಕಾದ ಮಾತು–ಲೆಕ್ಕಾಚಾರದ ನಡವಳಿಕೆ–ಅದೇ ವಿಜ್ಞಾನ ಮಾರ್ಗ. ಅದು ಎಲ್ಲಿ ಬೇಡ? ನಮ್ಮ ದೇಶದಲ್ಲಿ ಮನೆಮನೆಯೂ ಕಸಬು ಕಸಬೂ ಹೊಲಹೊಲವೂ ಅಂಗಡಂಗಡಿಯೂ ವಿಜ್ಞಾನಮಯವಾಗಬೇಕು.

ವಿಜ್ಞಾನದ ಬೆಳಕಿಲ್ಲದೆ ನಮ್ಮ ದೇಶದ ಮಂಕೂ ಮಾಸಲುತನವೂ ತೊಲಗಲಾರದು.

ವಿಜ್ಞಾನಶಾಸ್ತ್ರಗಳು ದಿನೇದಿನೇ ಬೆಳೆಯುತ್ತಲೇ ಇವೆ. ಅವುಗಳಿಂದ ನಮ್ಮ ಜೀವನದಲ್ಲಿ ಇನ್ನೂ ಏನೇನು ಬದಲಾವಣೆಗಳು ನಡೆಯುವುವೋ ಊಹಿಸುವುದು ಕೂಡ ಅಸಾಧ್ಯವಾಗಿದೆ. ಈಚಿನ ಯುದ್ಧದಿಂದ ಲೋಕಕ್ಕೆ ಅಪಾರ ನಷ್ಟವುಂಟಾಗಿದ್ದರೂ, ಅದು ವಿಜ್ಞಾನದ ಅಭಿವೃದ್ಧಿಗೆ ಮಾತ್ರ ಪ್ರೋತ್ಸಾಹಕವಾಗಿದೆ. ಯುದ್ಧದ ಉಪಯೋಗಕ್ಕಾಗಿ ನೂರಾರು ಹೊಸಹೊಸ ಪರೀಕ್ಷೆಗಳೂ ಹೊಸಹೊಸ ಸಂಧಾನಗಳೂ ಆಗುತ್ತಿವೆ. ಯುದ್ಧಾನಂತರದ ಪ್ರಪಂಚದಲ್ಲಿ ವಿಜ್ಞಾನದ ಅದ್ಭುತಗಳು ನಮ್ಮ ಬದುಕನ್ನು ಇನ್ನೂ ಹೆಚ್ಚುಹೆಚ್ಚಾಗಿ ಆಳುವುವೆಂಬುದಕ್ಕೆ–ಕಾಡುವುವೆಂಬುದಕ್ಕೂ–ಸಂದೇಹವಿಲ್ಲ.

ಆದರೂ :

ಈ ಮಾತನ್ನು ಹೇಳುವಾಗ ಸಂಗಡಲೇ ಇನ್ನೂ ಒಂದು ಮಾತನ್ನು ನೆನಪಿಗೆ ತಂದುಕೊಳ್ಳಬೇಕಾಗಿದೆ. ವಿಜ್ಞಾನ ಸಾಧಿಸಬಹುದಾದದ್ದು ಅಪಾರವಾಗಿ ಕಂಡರೂ, ನಿಜವಾಗಿ ಅದಕ್ಕೂ ಪಾರವುಂಟು. ವಿಜ್ಞಾನದ ವ್ಯಾಪಾರವೇನಿದ್ದರೂ ನಮ್ಮ ಬಾಹ್ಯಪ್ರಪಂಚದಲ್ಲಿಯೇ ಹೆಚ್ಚಾಗಿ ನಡೆಯತಕ್ಕದ್ದು. ಕಣ್ಣು ಕಿವಿ ಮೊದಲಾದ ಇಂದ್ರಿಯಗಳಿಗೆ ಗೋಚರವಾಗುವ ಕಡೆಯೇ ಅದರ ಅಧಿಕಾರ. ಈ ಇಂದ್ರಿಯಗಳ ಹಿಡಿತಕ್ಕೆ ಸಿಕ್ಕಲಾರದ್ದು ನಮ್ಮ ಅಂತಃಪ್ರಪಂಚ. ನಮ್ಮ ಅಂತರಂಗ ಕಾರ್ಯಗಳನ್ನು ಊಹಿಸಬಹುದೇ ವಿನಾ, (ಮೈಕ್ರೋಸ್ಕೋಪ್) ದುರ್ಬಿನ್ನಿನಲ್ಲಿ ಪರೀಕ್ಷಿಸುವುದೂ ತಕ್ಕಡಿಯಲ್ಲಿ ತೂಗಿಸುವುದೂ ಸಾಧ್ಯವಿಲ್ಲ. ತಲೆಯನ್ನು ಒಡೆದು

ನೋಡಿದಾಗ ಅಲ್ಲಿ ಮನೋಬುದ್ಧಿಗಳಿರುವುದಿಲ್ಲ; ಮನೋಬುದ್ಧಿಗಳು ಕಾರ್ಯ ಮಾಡುತ್ತಿರುವಾಗ ಅದನ್ನು ತೋರಿಸಬಲ್ಲ ಕನ್ನಡಕದ (ಪಾರದರ್ಶಕ) ಯಂತ್ರವಿಲ್ಲ. ಹೀಗೆ ಒಬ್ಬ ಮನುಷ್ಯನ ಹೃದಯವ್ಯಾಪಾರವೇನಿದ್ದರೂ ಇನ್ನೊಬ್ಬನಿಗೆ ಕೇವಲ ಊಹೆ ಅನುಮಾನಗಳ ವಿಷಯವೇ ಹೊರತು ಪ್ರತ್ಯಕ್ಷಪ್ರಮಾಣದ್ದಲ್ಲ. ಅದೇ ಹೀಗಿರುವಾಗ ಇನ್ನು ನಮ್ಮ ಜೀವಮೂಲದ ಮತ್ತು ಆಜನ್ಮಸಿದ್ಧ ವಾಸನೆಗಳ ವಿಚಾರವೇನು? ವಿಜ್ಞಾನ ಅಲ್ಲಿಗೆಲ್ಲಾ ತನ್ನ ಅಧಿಕಾರವನ್ನು ವಿಸ್ತರಿಸುವ ಸೂಚನೆ ಇದುವರೆಗೆ ತೋರಿಬಂದಿಲ್ಲ.

ವಿಜ್ಞಾನಯುಗದ ಮೊದಮೊದಲಿನಲ್ಲಿ ವಿಜ್ಞಾನಕ್ಕೆ ದೊರೆತ ಕೆಲವು ಜಯಗಳನ್ನು ನೋಡಿ, ಕೆಲಮಂದಿ "ವಿಜ್ಞಾನಕ್ಕೆ ಅಸಾಧ್ಯವಾದದ್ದು ಜಗತ್ತಿನಲ್ಲಿ ಏನೂ ಇರಲಾರದು" ಎಂದು ಅಂದುಕೊಂಡರು. ಆದರೆ ಕಳೆದ ೫೦-೬೦ ವರ್ಷಗಳಲ್ಲಿ ವಿಜ್ಞಾನ ಅಂಥಾ ಅತ್ಯಾಶೆಯನ್ನು ಇಟ್ಟುಕೊಳ್ಳತಕ್ಕದ್ದಲ್ಲವೆಂದು ಸಿದ್ಧವಾಗಿದೆ. ವಿಜ್ಞಾನವು ಬಿಡಿಸಲಾಗದ ಒಗಟುಗಳು-ಜಗತ್ತಿನಲ್ಲಿ ಉಂಟೆಂಬುದನ್ನು ಮಹಾ ಪ್ರಸಿದ್ಧರಾದ ವೈಜ್ಞಾನಿಕರು ಈಗ ಒಪ್ಪಿಕೊಂಡಿದ್ದಾರೆ. ಆತ್ಮ, ದೈವ, ಕರ್ಮ-ಇಂಥಾ ವಿಚಾರಗಳಲ್ಲಿ ವಿಜ್ಞಾನ ಯಾವ ಸಿದ್ಧಾಂತವನ್ನೂ ಮಾಡಿಲ್ಲ. ಇಂಥಾ ರಹಸ್ಯಗಳನ್ನು ಅನ್ವೇಷಣೆ ಮಾಡುತ್ತಿರುವ ವೈಜ್ಞಾನಿಕರಲ್ಲಿ ಒಮ್ಮತ ಬಂದಿಲ್ಲ; ತಕರಾರುಗಳೇ ಹೆಚ್ಚಾಗಿವೆ. ಅವರಲ್ಲಿ ಒಬ್ಬನ ವಾದದ ಭಾಷೆ ಇನ್ನೊಬ್ಬನಿಗೆ ಅರ್ಥವಾಗುವುದು ಕೂಡ ದುರ್ಲಭವಾಗಿದೆ. ಏವಂಚ ವಿಜ್ಞಾನದ ಕಣ್ಣಿಗೆ ಕಾಣಬಾರದ ಸತ್ಯಾಂಶದ ವಿಚಾರವೇ ತತ್ತ್ವಶಾಸ್ತ್ರ, ಅಥವಾ ಆಧ್ಯಾತ್ಮ ವಿಜ್ಞಾನ, ಅಥವಾ ವೇದಾಂತ. ಅದೇ ಮತಧರ್ಮದ ಮೂಲಸ್ಥಾನ. ದೇವರು, ಆತ್ಮ, ಪುಣ್ಯ, ಪಾಪ, ಸ್ವರ್ಗ, ನರಕ, ಜನ್ಮಾಂತರ್ಯ, ಋಣಾನುಬಂಧ, ಪ್ರಾರಬ್ಧವಾಸನೆ, ಮೋಕ್ಷ-ಇವು ಆ ರಹಸ್ಯಸ್ಥಾನದ ವಿಚಾರಗಳು.

ಹೀಗೆ ವಿಜ್ಞಾನಕ್ಷೇತ್ರದ ಆಚೆಯಕಡೆ ರಹಸ್ಯಕ್ಷೇತ್ರವೊಂದು ಅದಕ್ಕಂಟಿಕೊಂಡಿರುತ್ತದೆ. ಇನ್ನೂ ಪರಿಷ್ಕಾರವಾಗಿ ಹೇಳಬೇಕಾದರೆ, ವಿಜ್ಞಾನಕ್ಷೇತ್ರದ ಒಳಗಡೆಯೆಲ್ಲ ರಹಸ್ಯ ಬೀಜಗಳು ಹುದುಗಿಕೊಂಡಿರುತ್ತವೆ. ಇದು ವೇದ ವೇದಾಂತಗಳಿಗೆ ಹೊಸ ಮಾತಲ್ಲ. ಭಗವಂತನ ಮಹಿಮೆಯಲ್ಲಿ ನಮಗೆ ವ್ಯಕ್ತವಾಗಿರುವ ಭಾಗವೂ ಉಂಟು, ಅವ್ಯಕ್ತವೂ ಉಂಟು. ಆ ಪರವಸ್ತುವು ಸಗುಣವೂ ಹೌದು, ನಿರ್ಗುಣವೂ ಹೌದು. ಅದರ ಸ್ವರೂಪವು ವಿಶ್ವಾಕಾರವೂ ಹೌದು, ನಿರ್ವಿಕಾರವೂ ಹೌದು-ಹೀಗೆ ಹೇಳುತ್ತದೆ ವೇದಾಂತ. ಆ ಸಿದ್ಧಾಂತದ ಮೇರೆಗೆ, ಮನುಷ್ಯಬುದ್ಧಿಗೆ ದೊರೆಯಬಹುದಾದ ಭಗವತ್ಕಾರ್ಯವು ಸೃಷ್ಟಿಯಲ್ಲಿದೆ, ಅದನ್ನು ಮೀರಿದ್ದೂ ಇದೆ. ಮನುಷ್ಯನು ಕೈಯನ್ನು ಎಷ್ಟು ದೂರ ಚಾಚುವುದು ಸಾಧ್ಯವೋ ಅಷ್ಟು ದೂರವೂ ಚಾಚಿ ಪ್ರಯತ್ನಿಸುವುದು ಅವನ ಕರ್ತವ್ಯ. ಎಲ್ಲಿ ಅವನ ಕೈಸಾಗದೋ ಅಲ್ಲಿ ಬಂದದ್ದನ್ನು ಭಗವದಿಚ್ಛೆಯೆಂದು ಅಂಗೀಕರಿಸುವುದೂ ಅವನ ಕರ್ತವ್ಯ. ಹೀಗೆ ವಿವೇಕಿಯ ಮತದಲ್ಲಿ ವಿಜ್ಞಾನ ಪ್ರಯತ್ನವೂ ಅದೃಷ್ಟ ಸಹನೆಯೂ ಎರಡೂ ಮಿಳಿತವಾಗಿರುತ್ತವೆ. ಅವನ ಬದುಕಿನಲ್ಲಿ ಪೌರುಷವೂ ವೈರಾಗ್ಯವೂ ಬೆರೆತುಕೊಂಡಿರುತ್ತವೆ. ಅವನ ನಂಬಿಕೆಗೆ ಆತ್ಮ ವಿಶ್ವಾಸ ಒಂದು ಕಣ್ಣು, ದೈವಭಕ್ತಿ ಇನ್ನೊಂದು ಕಣ್ಣು.

ವಿಜ್ಞಾನಶಕ್ತಿಯೂ ದೈವಭಕ್ತಿಯೂ ಪುರುಷವಿವೇಕವೂ ಮೂರೂ ಹೊಂದಿಕೊಂಡಿರುವುದಕ್ಕೆ ಒಂದು ದೃಷ್ಟಾಂತವನ್ನು ಕೊಡಬಹುದು. ನಮ್ಮೊಲ್ಲೊಬ್ಬರ ಮನೆಯಲ್ಲಿ ಯಾರಿಗಾದರೂ ವ್ಯಾಧಿ ಬಂದರೆ ಆಗ ಏನುಮಾಡುತ್ತೇವೆ? ಅಲ್ಲಲ್ಲಿ ವಿಚಾರಿಸಿ-ಬಹಳ ಸಮರ್ಥ, ಯೋಗ್ಯ, ಎನ್ನಿಸಿಕೊಂಡಿರುವ ವೈದ್ಯನನ್ನು ಕರೆತರುತ್ತೇವೆ. ಹಾಗೆ ವೈದ್ಯನನ್ನು ಹುಡುಕಿ ಆರಿಸುವ ಜಾಗರೂಕತೆಯೇ ಪುರುಷವಿವೇಕ. ಆ ವೈದ್ಯನು ರೋಗಿಯನ್ನು ಬಗೆಬಗೆಯಾಗಿ ಪರೀಕ್ಷೆ ಮಾಡಿ ಚಿಕಿತ್ಸೆಯನ್ನು ಗೊತ್ತು ಮಾಡುತ್ತಾನೆ. ಅದರಲ್ಲಿರತಕ್ಕದ್ದು

ವಿಜ್ಞಾನದ ಶಕ್ತಿ. ಹಾಗೆ ಆತ ಒಂದು ಕಷಾಯವನ್ನೋ ಚೂರ್ಣವನ್ನೋ ಮಾತ್ರೆಯನ್ನೋ ತಯಾರುಮಾಡಿಕೊಟ್ಟ ಬಳಿಕ, ರೋಗಿ ಅದನ್ನು ಸೇವಿಸುವ ಕಾಲದಲ್ಲಿ ನಂಬಿಕೆಯಿಂದಲೂ ಶ್ರದ್ಧೆಯಿಂದಲೂ ತೆಗೆದುಕೊಳ್ಳಬೇಕೆನ್ನುತ್ತೇವೆ. ಏಕೆಂದರೆ ವ್ಯಾಧಿ ವಾಸಿಯಾಗುವುದಕ್ಕೆ ವೈದ್ಯನ ಔಷಧಬಲದ ಜೊತೆಗೆ ರೋಗಿಯ ಮನೋಬಲವೂ ಸೇರಬೇಕು. ಇದು ವೈದ್ಯಶಾಸ್ತ್ರಜ್ಞರು ಅಂಗೀಕರಿಸಿರುವ ತತ್ತ್ವ. ಮನಸ್ಸಿಗೂ ದೇಹದ ಮೇಲೆ ಅಧಿಕಾರವುಂಟು. ಆದಕಾರಣ ಮನಸ್ಸಿನ ಧೈರ್ಯ ವಿಶ್ವಾಸಗಳೂ ಔಷಧದ ಸರಕುಗಳೇ. ಈ ಭಾವನೆಯಿಂದಲೇ ಪೂರ್ವಿಕರು–

ಔಷಧಂ ಜಾಹ್ನವೀತೋಯಂ
ವೈದ್ಯೋ ನಾರಾಯಣೋ ಹರಿಃ

“ಈ ಕಷಾಯವೇ ಸಂಜೀವನವಾದ ಗಂಗಾತೀರ್ಥ; ಈ ಡಾಕ್ಟರು ದೇವರ ಸ್ವರೂಪ” ಎಂದು ಹೇಳುತ್ತಿದ್ದದ್ದು. ಇದು ವಿವೇಕ–ವಿಜ್ಞಾನ–ಭಕ್ತಿಗಳ ಸಮ್ಮೇಳನ.

ಪುರುಷ ಪ್ರಯತ್ನವು ಒಂದು ಕಡೆ ವಿಜ್ಞಾನವಿದ್ಯೆಯಾದಂತೆ ಇನ್ನೊಂದು ಕಡೆ ನೀತಿವಿವೇಕವಾಗುತ್ತದೆ. ಅದೇ ಸೌಜನ್ಯ; ಅದೇ ಧರ್ಮ. ಧರ್ಮ ಎಂದರೆ ನಾನಾ ಜೀವರಾಶಿಗಳ ಜೀವನದಲ್ಲಿ ಅನ್ಯೋನ್ಯ ಬಾಧೆ ಕಡಮೆಯಾಗಿ ಅನ್ಯೋನ್ಯ ಸಹಾಯ ಹೆಚ್ಚಾಗುವಂತೆ ಮಾಡುವ ನಡವಳಿಕೆ. ಸಮಸ್ತ ಲೋಕದ ಜೀವನವನ್ನೂ ಯಾವ ಒಂದು ಮನುಷ್ಯವರ್ತನೆಯ ಕ್ರಮವು, ಅಥವಾ ಎಂಥ ಒಂದು ಸಂಬಂಧ ವ್ಯವಸ್ಥೆಯು ಧರಿಸುತ್ತದೆಯೋ ಆ ಚರ್ಯೆಯೇ ಧರ್ಮ. ವಿಜ್ಞಾನವಿವೇಕದ ಜೊತೆಗೆ ಧರ್ಮ ವಿವೇಕ ಹೊಂದಿಕೊಂಡಷ್ಟೂ ನಮ್ಮ ಜೀವನಕ್ಕೆ ಕಳೆಯೇರುತ್ತದೆ.

ವಿಜ್ಞಾನವಿಲ್ಲದ ಧರ್ಮನಿಷ್ಠೆಯ ಅನರ್ಥಕ್ಕೆ ಅಬಿಸೀನಿಯ ಉದಾಹರಣೆಯಾಗಿರುವಂತೆ, ಧರ್ಮನಿಷ್ಠೆಯಿಲ್ಲದ ವಿಜ್ಞಾನದ ಅನರ್ಥಕ್ಕೆ ಯುದ್ಧ ಪೂರ್ವದ ಜರ್ಮನಿ ಉದಾಹರಣೆಯಾಗಿದೆ. ವಿಜ್ಞಾನಸಿದ್ಧಿಯಲ್ಲಿ ಜರ್ಮನಿಗಿಂತ ಮುಂದುವರಿದ ದೇಶವೇ ಇರಲಿಲ್ಲ. ಆದರೆ ಅದು ಒಂದಾನೊಂದು ಘಳಿಗೆಯಲ್ಲಿ ಸೌಜನ್ಯವನ್ನು ತೊರೆದದ್ದರಿಂದ ಪ್ರಪಂಚದ ಅರ್ಧಭಾಗವನ್ನು ರುದ್ರಭೂಮಿಯಾಗಿ ಮಾಡಿತು (ಅದು ೧೯೧೪ ರಿಂದ ೧೯೧೮ ರ ವರೆಗೆ). ಮತ್ತೆ ೧೯೩೯–೪೫ರ ಯುದ್ಧವೂ, ಅಂದಿನಿಂದೀಚೆಗೆ ಈಗಲೂ ಪಾಶ್ಚಾತ್ಯ ಜನಾಂಗಗಳಲ್ಲಿ ನಡೆಯುತ್ತಿರುವ ಶಸ್ತ್ರಾಸ್ತ್ರ ಸಿದ್ಧತಾರೂಪವಾದ “ಶೀತಲ” ಯುದ್ಧವೂ ಧರ್ಮಹೀನವಾದ ವಿಜ್ಞಾನವೈಪರೀತ್ಯಕ್ಕೆ ನಿದರ್ಶನ.

ಇಂಡಿಯಾ ದೇಶವು ಹಾಗೆ ನೀತಿ ತಪ್ಪೀತೆಂಬ ಭೀತಿಗೆ ಇದುವರೆಗೂ ಕಾರಣ ತೋರಿಲ್ಲ. ಅದು ಮಹರ್ಷಿಗಳ ಬೋಧನೆಯ ಪ್ರಭಾವದಿಂದ. ಆದರೆ ಈಗ ನವನಾಗರಿಕತೆ ನಮ್ಮಲ್ಲೂ ನುಗ್ಗಿ ಬರುತ್ತಿದೆ. ಯೂರೋಪಿನ ವಿಜ್ಞಾನ, ಕಾರ್ಯದೀಕ್ಷೆ, ವ್ಯವಸ್ಥಾನಿಯಮ ಮೊದಲಾದ ಒಳ್ಳೆಯ ಗುಣಗಳನ್ನು ನಮ್ಮವರು ಕಲಿಯದೆ, ಅವರ ಭೋಗಪದ್ಧತಿ ಧನವ್ಯಾಮೋಹ ಪದ್ಧತಿಗಳನ್ನು ಮಾತ್ರ ಅಭ್ಯಾಸ ಮಾಡಿಕೊಳ್ಳುತ್ತಿದ್ದಾರೆ. ಯಾವುದು ಸುಲಭವೋ, ಯಾವುದು ಸದ್ಯಕ್ಕೆ ರುಚಿಯೋ ಅದನ್ನು ತೆಗೆದುಕೊಳ್ಳುತ್ತಿದ್ದಾರೆ; ಯಾವುದು ಸದ್ಯಕ್ಕೆ ಕಷ್ಟವಾಗಿ ಕಂಡರೂ ದೂರಕ್ಕೆ ಹಿತವೋ ಅದನ್ನು ಬಿಡುತ್ತಿದ್ದಾರೆ. ಪರಂಗಿಯವರ ಆತ್ಮಶಿಕ್ಷಣವನ್ನು ನಾವು ದೂರ ಬಿಟ್ಟು, ಅವರ ಮೇಲ್ಮೇಲಿನ ಷೋಕು “ಫ್ಯಾಷನ್ನು”ಗಳಿಗೆ ಮನಸೋತಿದ್ದೇವೆ. ಇಂಥ ಕಾಲದಲ್ಲಿ ನಮ್ಮ ನೀತಿವಿವೇಕವೂ ಸ್ವಲ್ಪ ತಲೆಕೆಳಗಾದರೆ ಆಶ್ಚರ್ಯವೇನು?

ಹಳ್ಳಿಗಳ ಹೀನದಶೆ :

ನಮ್ಮ ಹಳ್ಳಿಯ ಜನರಿಗೆ ವಿಶೇಷವಾಗಿ ಹೇಳಬೇಕಾದ ಮಾತು ಒಂದಿದೆ. ರಾಜಕೀಯ ಸಭೆಗಳಲ್ಲಿ ಉಪನ್ಯಾಸ ಮಾಡುವವರೂ ವಾರ್ತಾಪತ್ರಿಕೆಗಳಲ್ಲಿ ಬರೆಯುವವರೂ ಹಳ್ಳಿಯವರನ್ನು ಪರಮ ಸಾಧುಗಳೆಂಬಂತೆ ವರ್ಣಿಸುವುದು ವಾಡಿಕೆ. ಹಳ್ಳಿಯವರು ವಿದ್ಯೆಯಿಲ್ಲದವರು; ಆದದ್ದರಿಂದ ಅವರು ಏನೂ ಅರಿಯದವರು; ಆದದ್ದರಿಂದ ಕೃತ್ರಿಮವಿಲ್ಲದವರು; ಆದದ್ದರಿಂದ ಸತ್ಯವಂತರು–ಹೀಗೆ ಹಳ್ಳಿಗರನ್ನು ಕೆಲವರು ಹೊಗಳುವುದುಂಟು. ಅದು ಹೆಚ್ಚಿನ ಮಾತೆಂದೇ ಹೇಳಬೇಕಾಗಿದೆ. ಹಸು ಮೇಯಿಸುವವರೆಲ್ಲ ಹಸುಮಕ್ಕಳಾಗಿಯೇ ಇರುತ್ತಾರೆಯೆ? ನಮ್ಮ ಹಿರಿಯರು ಸೂರ್ಯ ಚಂದ್ರರನ್ನು ಸಾಕ್ಷಿಯಾಗಿಟ್ಟುಕೊಂಡು ಲೇವಾದೇವಿ ನಡೆಸುತ್ತಿದ್ದ ಕಾಲವೂ, ಕೈಮೇಲೆ ಕೈಹಾಕಿ ಆಣೆಯಿಟ್ಟು ಕೊಟ್ಟಮಾತಿಗೆ ಜನರು ಕಟ್ಟುಬೀಳುತ್ತಿದ್ದ ಕಾಲವೂ ಹಿಂದೆ ಯಾವಾಗಲೋ ಇತ್ತು. ಆ ಯುಗ ಮುಗಿದು ಇಂದಿಗೆ ಬಹುವರ್ಷಗಳಾಗಿವೆ. ಈಗ ಎಲ್ಲಾ "ಲಾ" (ಕಾನೂನು) ಮೇರೆಗೆ ನಡವಳಿಕೆ. ಹಳ್ಳಿಹಳ್ಳಿಯಲ್ಲಿಯೂ "ಲಾ" ತಿಳಿದವರು, ಅಥವಾ ತಿಳಿದಿದೆಯೆಂದು ಹೇಳಿಕೊಳ್ಳುವವರು, ಒಬ್ಬರೋ ಇಬ್ಬರೋ ಇರುತ್ತಾರೆ. ಅಂಥಾ "ಪೂಟು" ಲಾಯರುಗಳ ಸಲಹೆಗಳೂ ಸುಲಭವಾಗಿಯೇ ಸಿಕ್ಕುತ್ತವೆ. ಆದಕಾರಣ ಕಾನೂನಿನ ಬಗ್ಗೆ ಎಷ್ಟು ಮಟ್ಟಿನ ನೀತಿ ಅವಶ್ಯವೋ ಅಷ್ಟುಮಟ್ಟಿನ ಮೇಲ್ತೋರಿಕೆಯ ನೀತಿಯೇ ಸಾಕೆಂದು ಹಳ್ಳಿಗರೂ ಕಲಿತುಕೊಳ್ಳುತ್ತಿದ್ದಾರೆ. ಇದರ ಮೇಲೆ, ಹಳ್ಳಿಗರ ನೀತಿಗೆ ಎರಡು ಹೆಚ್ಚು ಅಪಾಯಗಳಿವೆ:

- ಅವರು ಬಡವರು; ಹೇಗೋ ಮಾಡಿ ಒಂದೆರಡು ಕಾಸನ್ನೋ ಕಾಳನ್ನೋ ಗಿಟ್ಟಿಸಿಕೊಳ್ಳಬೇಕೆಂಬ ಆಶೆ ಅಂಥವರಿಗೆ ಸಹಜ. "ದಾರಿದ್ರ್ಯ ದೋಷೇಣ ಕರೋತಿ ಪಾಪಂ" – ಎಂದು ಪೂರ್ವಿಕರು ಹೇಳಿಲ್ಲವೆ?
- ಲೋಕಾಪವಾದದ ಭೀತಿ ಪಟ್ಟಣಿಗರಿಗೆ ಇರುವಷ್ಟು ಮಟ್ಟಿಗೂ ಹಳ್ಳಿಗಳಲ್ಲಿರುವುದಿಲ್ಲ. ಪಟ್ಟಣದ ವ್ಯವಹಾರಗಳು ಹೇಗೋ ನಾಲ್ಕು ಮಂದಿಯ ಗೋಚರಕ್ಕೆ ಬಂದೇಬರುತ್ತವೆ, ಬರವಣಿಗೆಗೆ ಸಿಕ್ಕುತ್ತವೆ. ಹಳ್ಳಿಯ ವ್ಯವಹಾರಗಳು ಗೋಪ್ಯದಲ್ಲಿ ನಡೆಯುತ್ತವೆ, ಲೇಖಣಿಗೆ ಸಿಕ್ಕುವುದಿಲ್ಲ. ಈ ಕಾರಣಗಳಿಂದ ಸುಳ್ಳು, ತಟವಟ, ಮೋಸ, ಕುಟಿಲ ಯುಕ್ತಿ, ಮೇಲು ಮೇಲಿನ ವೇಷ–ಇವು ಹಳ್ಳಿಗಳಲ್ಲಿ ಅಪರೂಪವೇನೂ ಅಲ್ಲ. ಇದಕ್ಕೆ ನಮ್ಮ ಕೋರ್ಟುಗಳಲ್ಲಿ ಬೇಕಾದಷ್ಟು ರುಜುವಾತು ದೊರೆಯುತ್ತದೆ.

ನಮ್ಮ ಹಳ್ಳಿಗಳಲ್ಲಿ ಕಕ್ಷಿಗಳೂ ಪಾರ್ಟಿಗಳೂ ಪಂಗಡಗಳು ಬಲಿತು, ಮಾರಾಮಾರಿಗಳು ನಡೆಯುತ್ತ, ಗ್ರಾಮೋದ್ಧಾರ ಕಾರ್ಯಗಳಿಗೆ ಅಡಚಣೆಯಾಗುತ್ತಿರುವುದೂ ಪ್ರಸಿದ್ಧವಾದ ಸಂಗತಿ. ಅದೇನೂ ನೀತಿಮಹತ್ವದ ಗುರುತಲ್ಲ.

ಹಳ್ಳಿಗರ ಅವಗುಣಗಳ ಮಾತನ್ನೆತ್ತಿದಾಗ ಅವರ ಗುರುಗಳು ಪಟ್ಟಣಿಗರೆಂಬುದನ್ನು ಮರೆಯಬಾರದು. ನಾಗರಿಕರೇ ಮಾನವಶ್ರೇಷ್ಠರೆಂಬ ಅಭಿಪ್ರಾಯವು ಲೋಕದಲ್ಲಿ ಪ್ರಚಾರಕ್ಕೆ ಬಂದಮೇಲೆ, ಗ್ರಾಮಸ್ಥರೂ ನಗರದ ದಾರಿ ಹಿಡಿಯುವುದು ಸಹಜವಾಗಿಯೇ ಇದೆ. ನಗರದ ಮುಖ್ಯ ಲಕ್ಷಣ ನಾಣ್ಯವೈಭವ–ಎಂದರೆ ಹಣದಿಂದ–ಹಣದಿಂದ ಮಾತ್ರವೇ–ಕೊಂಡುಕೊಳ್ಳಲಾಗುವ ಭೋಗಾಡಂಬರ.

ಧಾನ್ಯ–ಹಣ :

ಪೂರ್ವಕಾಲದ ಅರ್ಥಪದ್ಧತಿಯಲ್ಲಿ ಧಾನ್ಯ ಮುಖ್ಯವಾಗಿತ್ತು. ಆಗ ಲೋಹನಾಣ್ಯದ ಅಧಿಕಾರ, ಅಥವಾ ನೋಟು ಕಾಗದದ ಅಧಿಕಾರ, ಈಗಿನಷ್ಟು ಪ್ರಬಲವಾಗಿರಲಿಲ್ಲ. ಹೊಟ್ಟೆಯ ತುಂಬ ಊಟ, ಮೈತುಂಬ ಬಟ್ಟೆ, ಕಣಜದ ತುಂಬ ಧಾನ್ಯ, ಕೊಟ್ಟಿಗೆ ತುಂಬ ದನಕರು–ಇದು ಆಗಿನ ಧ್ಯೇಯ. ಜೇಬಿನಲ್ಲಿ ಬಿಡಿ ರೂಪಾಯಿ, ಬ್ಯಾಂಕಿನಲ್ಲಿ ಮುಡುಪು ರೂಪಾಯಿ–ಇದು ಈಗಿನ ಧ್ಯೇಯ. ಸರ್ವಸಾಧಕವಾದದ್ದು ನಾಣ್ಯ ನೋಟು–ಎಂಬುದನ್ನು ಹಳ್ಳಿಗರು ಈಗ ಚೆನ್ನಾಗಿ ಕಲಿತುಕೊಂಡಿದ್ದಾರೆ. ಪಟ್ಟಣಿಗರಿಂದಲೇ ಅವರು ಅದನ್ನು ಕಲಿತದ್ದು. ಜಗತ್ತಿನಲ್ಲಿ ಯಾವ ಮಹಾನುಭಾವನು ನಾಣ್ಯವೆಂಬ ವಶೀಕರಣತಂತ್ರವನ್ನು ಮೊದಲು ಕಂಡು ಹಿಡಿದನೋ ಅವನೇ ನಮ್ಮ ನಾಗರಿಕತೆಯ ಅನಿಷ್ಟಗಳಿಗೆಲ್ಲ ಮೂಲಪುರುಷ. ಅವನಿಂದ ಲೋಕದಲ್ಲಿ ಆಗಿರುವಷ್ಟು ಗಾಳಿಗಂಟುಗಳೂ ಗುದ್ದಾಟಗಳೂ ಮತ್ತಾರಿಂದಲೂ ಆಗಿಲ್ಲ. ಧಾನ್ಯಸಂಪತ್ತಿನಿಂದ ಅಷ್ಟು ಕೇಡು ಸಾಧ್ಯವಿಲ್ಲ; ಏಕೆಂದರೆ ಸ್ವಲ್ಪಕಾಲದ ಮೇಲೆ ಧಾನ್ಯ ಹುಳುತು ಕೊಳತುಹೋಗತಕ್ಕದ್ದು; ಯಾರೂ ಅದನ್ನು ಮಿತಿಮೀರಿ ಬಚ್ಚಿಟ್ಟುಕೊಳ್ಳಲು ಆಗುವುದಿಲ್ಲ. ಯಾವುದೋ ಒಂದು ರೀತಿ ಅದನ್ನು ಉಪಯೋಗ ಮಾಡಿಯೇ ಮುಗಿಸಬೇಕು. ನಾಣ್ಯಸಂಪತ್ತು ಹಾಗಲ್ಲ; ಇದನ್ನು ಎಷ್ಟುದಿನ ಬೇಕಾದರೂ ಭದ್ರವಾಗಿ, ರಹಸ್ಯವಾಗಿ ಎತ್ತಿಡಬಹುದು; ಎಲ್ಲಿ ಬೇಕಾದರೂ, ಹೇಗೆ ಬೇಕಾದರೂ, ಉಪಯೋಗಿಸಿಕೊಳ್ಳಬಹುದು. ಧಾನ್ಯಕ್ಕೆ ಬದಲಾಬದಲಿಯಾಗಿ ಸಿಕ್ಕಲಾರದ ಎಷ್ಟೋ ಭೋಗವಸ್ತುಗಳು ನಾಣ್ಯ –ನೋಟು ಕೊಟ್ಟರೆ ಸಿಕ್ಕುತ್ತವೆ. ಆದದ್ದರಿಂದ ಎಲ್ಲರಿಗೂ ನಾಣ್ಯಸಂಪತ್ತಿನ ಮೇಲೆ ಆಶೆ. ಏನಾದರೂ ಮಾಡಿ ಹಣ ಕೂಡಿ ಹಾಕಬೇಕು. ಸರಕಾರದ ಅಧಿಕಾರಿಗಳ ನೀತಿ ಇದು; ವಕೀಲರದೂ ಇದೇ ಮಂತ್ರ; ಕಾಲೇಜುಗಳಲ್ಲಿ ಶಾಸ್ತ್ರಬೋಧನೆ ಮಾಡುವ ದಿಗ್ಗಜಗಳದೂ ಅದೇ ಸೂತ್ರ; ವರ್ತಕ ಸಾಹುಕಾರರಿಗಂತೂ ಅದೇ ವಿಹಿತ ಮಾರ್ಗ. ಇದನ್ನು ದಿನೇದಿನೇ ನೋಡುವ ಹಳ್ಳಿಗರು ಮಾತ್ರ ಆ ದಾರಿಯನ್ನು ಬಿಟ್ಟಿರುವುದು ಹೇಗೆ?

ಸರಿ. ನಾಣ್ಯಸಂಗ್ರಹಕ್ಕಾಗಿ ನಾಗರಿಕರು ನಾಗರಿಕ ಉಪಾಯಗಳನ್ನು ಅನುಸರಿಸುತ್ತಾರೆ. ಅದು ಬೇಗ ಕಣ್ಣಿಗೆ ಕಾಣಿಸುವುದಿಲ್ಲ. ಗ್ರಾಮಸ್ತರು ಬೇರೆ ಉಪಾಯಗಳನ್ನು ಹಿಡಿಯುತ್ತಾರೆ; ಇವು ಸ್ವಲ್ಪ ಒರಟು, ಬೇಗ ಕಾಣಿಸುತ್ತವೆ. ಕೃತ್ರಿಮ ಕೂಟಗಳು, ಪೋಟಾಪೋಟಿ, ಕಕ್ಷಿವ್ಯಾಜ್ಯಗಳು, ಲಂಚ, ವೇಷ, ಆಡಂಬರ, ಬಿನ್ನಾಣ, ತಟವಟ–ಇವು ನಾಣ್ಯದ ದೊಡ್ಡಸ್ತಿಕೆಯಿರುವ ಕಡೆಯಲ್ಲೆಲ್ಲಾ ಇರುವುದು ಸಹಜ. ಪಟ್ಟಣಗಳಲ್ಲಿ ಅವು ಜರೀ ರುಮಾಲು ಧರಿಸಿ ಹಾರಾಡುತ್ತವೆ. ಹಳ್ಳಿಗಳಲ್ಲಿ ಅವು ಹಚ್ಚಡ ಹೊದ್ದುಕೊಂಡಿರುತ್ತವೆ. ಮನುಷ್ಯಜಾತಿಯೆಲ್ಲಾ ಮೂಲದಲ್ಲಿ ಒಂದೇ ಪಿಂಡ. ಆದದ್ದರಿಂದ ನಮ್ಮ ದೇಶದಲ್ಲಿ ಈಗ ನೀತಿಸಂಸ್ಕಾರ ನಡೆಯಬೇಕಾಗಿರುವುದು ಹಳ್ಳಿಗಳಲ್ಲಿ ಮಾತ್ರವೇ ಅಲ್ಲ. ಪಟ್ಟಣಿಗರ ನೀತಿಯೂ ಮೇಲ್ಮಟ್ಟಕ್ಕೆ ಏಳಬೇಕಾಗಿದೆ. ಸತ್ಯ, ಪ್ರಾಮಾಣಿಕತೆ, ಮನಸ್ಸಾಕ್ಷಿಯ ಭೀತಿ, ಧರ್ಮೇಂದ್ರಿಯದ ಶುಶ್ರೂಷೆ–ಈ ಗುಣಗಳು ಎಲ್ಲ ಅಭಿವೃದ್ಧಿಗಳಿಗೂ ಮೂಲಾಧಾರ. ಈ ನೀತಿ ಮೂಲಗಳನ್ನು ಕೃಷಿ ಮಾಡಿ ಬೆಳಸಿಕೊಳ್ಳದಿರುವ ಜನಾಂಗಕ್ಕೆ ಎಂದಿಗೂ ನಿಜವಾದ ಏಳಿಗೆ ಬರಲಾರದು. "ಅನ್ಯಾಯದ ಹಣ ನೆಮ್ಮದಿಯ ಹೆಣ" ಎಂಬುದಕ್ಕೆ ಇಂದಿನ ಯೂರೋಪಿನ ಚರಿತ್ರೆ ಪ್ರತ್ಯಕ್ಷ ದೃಷ್ಟಾಂತವಾಗಿದೆ.

ನಮ್ಮ ದೈವಭಕ್ತಿ :

ಇಂಡಿಯಾ ದೇಶದ ಜನರು ಸ್ವಾಭಾವಿಕವಾಗಿ ದೈವಭಕ್ತರೆಂದು ಒಂದು ಭಾವನೆ ಸಾಮಾನ್ಯವಾಗಿದೆ. ಅದನ್ನೂ ನಾವು ಪರೀಕ್ಷೆ ಮಾಡಬೇಕಾದದ್ದೇ.

ನಮ್ಮ ಭಕ್ತಿಯಲ್ಲಿ ಪ್ರೀತಿ ಎಷ್ಟು ಭಾಗ, ಭೀತಿ ಎಷ್ಟು ಭಾಗ? ಪ್ರೀತಿಯೂ ಭೀತಿಯೂ ಒಂದೇ ಅಲ್ಲ. ಬಹುಮಂದಿಯ ದೈವಭಕ್ತಿ ಕೇವಲ ದೈವಭೀತಿ. ಎಷ್ಟೋ ಜನಕ್ಕೆ ದೇವಸ್ಥಾನ ಒಂದು ಅಂಗಡಿ; ಅಲ್ಲಿ ದೇವರೊಂದಿಗೆ ವ್ಯಾಪಾರ. "ದೇವರೇ, ನೀನು ನನಗೆ ಮಗುವನ್ನು ಕೊಟ್ಟರೆ ನಾನು ನಿನಗೆ ಬೆಳ್ಳಿಯ ತೊಟ್ಟಿಲು ಕೊಡುತ್ತೇನೆ" ; "ನೀನು ನನಗೆ ವ್ಯಾಪಾರದಲ್ಲಿ ಲಾಭ ಕೊಡಿಸಿದರೆ ನಾನು ನಿನಗೆ ದೀಪಾರಾಧನೆ ಮಾಡಿಸುತ್ತೇನೆ" ; ಅಥವಾ "ದೇವರೆ, ನನ್ನ ಈ ಗುಟ್ಟು ಹೊರಕ್ಕೆ ಬೀಳದಂತೆ ನೀನು ಮುಚ್ಚಿಟ್ಟರೆ ನಿನಗೆ ನಾನು ಊರಲ್ಲೆಲ್ಲಾ ಮೆರವಣಿಗೆ ಮಾಡಿಸುತ್ತೇನೆ" ; "ನನ್ನ ನೆರೆ ಮನೆಯವನ ಮೀಸೆಯನ್ನು ನೀನು ಉದುರಿಸಿದರೆ ನನ್ನ ತಲೆಗೂದಲನ್ನೆಲ್ಲ ನಿನಗೆ ಮುಡುಪು ಕೊಡುತ್ತೇನೆ" –ಈ ರೀತಿ ಮುಯ್ಯಿಗೆ ಮುಯ್ಯಿ, ಸರಕಿಗೆ ಪ್ರತಿ ಸರಕು, ಬಹುಮಂದಿಯ ಭಕ್ತಿ. ಒಬ್ಬ ದೇವರು ಒಪ್ಪಂದಕ್ಕೆ ಬಾರದೆಹೋದರೆ ಇನ್ನೊಬ್ಬ ದೇವರ ಹತ್ತಿರ ಹೋಗುತ್ತಾರೆ ಇಂಥವರು. ನಂಜುಂಡೇಶ್ವರನು ತಪ್ಪಿದರೆ ವೆಂಕಟೇಶ್ವರನಿರುತ್ತಾನೆ ಅವರ ವ್ಯಾಪಾರಕ್ಕೆ. ಅವರ ಅಂತರಂಗದಲ್ಲಿರುವುದು ಶುದ್ಧ ಪ್ರೀತಿಯಲ್ಲ; ಅದು ಭೀತಿಮೂಲವಾದ ಪ್ರೀತಿ. ದೇವರು ನಮ್ಮಿಷ್ಟಕ್ಕೆ ಎಲ್ಲಿ ವಿಘ್ನಮಾಡಿಯಾನೋ, ನಮ್ಮ ಒಳಸಂಚನ್ನು ಅವನು ಎಲ್ಲಿ ಹೊರಕ್ಕೆ ತಂದುಬಿಟ್ಟಾನೋ ಎಂಬ ಭೀತಿ ಮಾಡಿಸಿದ ಪ್ರೀತಿ ಬಹುಜನದ್ದು.

ನಿಜವಾದ ಪ್ರೀತಿ ಯಾವ ಪ್ರತಿಫಲವನ್ನೂ ಬೇಡುವುದಿಲ್ಲ. ತಾಯಿ ಮಗುವಿನಿಂದ ಏನು ಪ್ರತ್ಯುಪಕಾರವನ್ನು ಬಯಸುತ್ತಾಳೆ? ಮಗುವನ್ನು ನೋಡಿದ ಮಾತ್ರದಿಂದಲೇ ತಾಯಿಗೆ ಹೇಗೆ ಸಂತೋಷವುಂಟಾಗುತ್ತದೆಯೋ, ಬೆಳಕು ಹರಿದಾಗ ತೋಟದ ಪಕ್ಷಿಗಳಿಗೆ ಹೇಗೆ ಹರ್ಷವುಂಟಾಗುತ್ತದೆಯೋ, ಒಳ್ಳೆಯ ಸಂಗೀತವನ್ನು ಕೇಳಿದಾಗ ನಮಗೆ ಹೇಗೆ ಮೈಮರೆಯುತ್ತದೆಯೋ, ಒಂದು ಮಹಾ ಸೌಂದರ್ಯವನ್ನು ನೋಡಿದಾಗ ನಮ್ಮ ಮನಸ್ಸು ಹೇಗೆ ಬೆರಗುಪಡುತ್ತದೆಯೋ, ಹಾಗೆ ದೇವರನ್ನು ಧ್ಯಾನಿಸಿದಾಗ ನಮ್ಮ ಮನಸ್ಸು ಬೇರೆ ಯಾವುದನ್ನೂ ನೆನೆಯದೆ ಆನಂದವನ್ನನುಭವಿಸಿ, ಆ ನಿರ್ಮಲವಾದ ಆನಂದದಲ್ಲಿಯೇ ಕಲೆತು ಹೋದರೆ ಆ ಮನಸ್ಸಿನದು ನಿಜವಾದ ಭಕ್ತಿ. ಇಂಥ ಭಕ್ತಿ ಸುಲಭವಲ್ಲ–ಯಾರಿಗೂ ಎಲ್ಲಿಯೂ ಸುಲಭವಲ್ಲ. ಅದು ಬಹುದಿನಗಳ ಅಭ್ಯಾಸದಿಂದ ಬರತಕ್ಕದ್ದು. ಅದಕ್ಕೆ ಬೇಕಾದದ್ದು ನಿಜವಾದ ವೈರಾಗ್ಯ, ಮತ್ತು ವಿವೇಕ, ಮತ್ತು ಧರ್ಮಚರ್ಯೆ. ಸ್ವಂತ ಸುಖದ ಯೋಚನೆಯನ್ನು ಹದ್ದಿನಲ್ಲಿರಿಸುವುದು, ಮತ್ತು ಜಗತ್ಸೃಷ್ಟಿಯಲ್ಲಿ ಕಾಣಬರುವ ಭಗವಂತನ ಅದ್ಭುತ ಕ್ರಿಯೆಗಳನ್ನು ಕುರಿತು ಚಿಂತಿಸುವುದು, ಮತ್ತು ಜಗಜ್ಜೀವನದಲ್ಲಿ ಹೊಂದಿಕೊಂಡು ಬಾಳುವುದು.

ಜಗಜ್ಜೀವನದಲ್ಲಿ ಬೆರೆಯುವುದು ಎಂಬುದೇ ಆತ್ಮವಿಕಾಸ. ಅದೇ ಧರ್ಮದ ರಹಸ್ಯ. ಮನೆ, ಕುಲ, ಸಮಾಜ, ರಾಜ್ಯ–ಮೊದಲಾದ ಎಲ್ಲ ಏರ್ಪಾಟುಗಳೂ ಆ ಆತ್ಮವಿಕಾಸದ ಅಭ್ಯಾಸಕ್ಕಾಗಿ.

ಆತ್ಮವಿಕಾಸ ಕ್ರಮ :

ಉಪನಿಷತ್ತು ಭಗವದ್ಗೀತೆಗಳ ಉಪದೇಶದ ಸಾರಂಶವನ್ನು ಆಗಲೇ ನೋಡಿದ್ದೇವೆ. ಅವುಗಳ ಧ್ಯೇಯದ ಅಥವಾ ಗುರಿಯ ಮಾತು ಇದು:

"ಯಾವ ಮನುಷ್ಯನು ಸಮಸ್ತ ಜೀವಜಂತುಗಳೂ ತನ್ನೊಳಗೇ–ತನ್ನ ಅಂಶವಾಗಿಯೇ–ಸೇರಿಕೊಂಡಿವೆಯೆಂಬಂತೆ ಅಭೇದ ಬುದ್ಧಿಯಿಂದ ನಡೆದುಕೊಳ್ಳುತ್ತಾನೋ ಮತ್ತು ಯಾರು ತನ್ನ ಒಳಗಿರುವ ಆತ್ಮವನ್ನೇ ಸಮಸ್ತ ಜೀವಜಂತುಗಳಲ್ಲಿಯೂ ಕಾಣುತ್ತ ಅವುಗಳ ಅನುಭವಗಳಲ್ಲಿ ಸಹಭಾಗಿಯಾಗಿರುತ್ತಾನೋ ಅವನಿಗೆ ಶೋಕವಿರದು, ಅವನನ್ನು ಪಾಪವು ಸೋಕದು."

ಏಕೆಂದರೆ, ತನ್ನಿಂದ ಬೇರೆಯಾದವನು ಇನ್ನೊಬ್ಬನ್ಯಾರಾದರೂ ಇದ್ದಾನೆಂದು ಅವನು ತಿಳಿದಿದ್ದರಲ್ಲವೆ ಅವನಿಗೆ ಆ ಇನ್ನೊಬ್ಬನ ಕೂಡ ತಂಟೆ ತಾಪತ್ರಯ? ಜೀವ ಲೋಕದೊಡನೆ ಏಕೀಭವಿಸಿರುವವನಿಗೆ ಶತ್ರುವೇ ಇಲ್ಲ.

ಇಂಥ ಸರ್ವಾತ್ಮತ್ವದ ತತ್ತ್ವವನ್ನು ಬಾಯಿಂದ ವಿಸ್ತಾರಮಾಡಿ ಹೊಗಳಬಹುದು; ಅದನ್ನು ಅನುಭವಕ್ಕೆ ತಂದುಕೊಳ್ಳುವುದು ಕಷ್ಟ. ಆ ಬೆಟ್ಟದ ಶಿಖರಕ್ಕೆ ಮೆಟ್ಟಲುಗಳನ್ನು ಒಂದೊಂದಾಗಿ ಹತ್ತಬೇಕು; ಎಂದರೆ ಬಹುವರ್ಷಗಳ ದಿನಂಪ್ರತಿಯ ಅಭ್ಯಾಸದಿಂದಲೇ ಆ ತತ್ತ್ವದ ಪೂರ್ಣದರ್ಶನ ನಮಗೆ ಲಭ್ಯವಾಗತಕ್ಕದ್ದು. ಆ ಅಭ್ಯಾಸದಲ್ಲಿ ನಮ್ಮ ಮನಸ್ಸೂ ನಮ್ಮ ಬುದ್ಧಿಯೂ ನಮ್ಮ ಎಲ್ಲ ಕರಣಶಕ್ತಿಗಳೂ ಒಟ್ಟುಗೂಡಿ ಆ ಎಲ್ಲಕ್ಕಿಂತ ಸೂಕ್ಷ್ಮವೂ ಎಲ್ಲಕ್ಕಿಂತ ಮೇಲಿನದೂ ಆದ ಆತ್ಮಶಕ್ತಿಯನ್ನು ವಿಕಾಸಗೊಳಿಸಬೇಕು. ಯಾವುದನ್ನು ಮನುಷ್ಯನು "ನಾನು, ನಾನು" ಎಂದು ಹೇಳಿಕೊಳ್ಳುತ್ತಿರುತ್ತಾನೆಯೋ ಅದೇ ಅವನ ಆತ್ಮ.

ನಾವು ಒಂದು ಕೊಳದ ದಡದ ಮೇಲೆ ನಿಂತು ನೀರಿನ ಮಧ್ಯಕ್ಕೆ ಒಂದು ಕಲ್ಲನ್ನೆಸೆದರೆ, ಅಲ್ಲಿ ಅಲೆ ಹುಟ್ಟಿ, ಬಳೆಬಳೆಯಾಗಿ ಹರಡಿ, ದಡವನ್ನು ಮುಟ್ಟುತ್ತದಲ್ಲವೆ? ನಮ್ಮ ಆತ್ಮವೂ ಹಾಗೆ ಕ್ರಮೇಣ ಅಲೆಗಳ ಸುತ್ತುಸುತ್ತುಗಳಾಗಿ ಉತ್ತರೋತ್ತರ ವಿಸ್ತಾರವಾಗಿ ಸಕಲ ಪ್ರಪಂಚವನ್ನೂ ಆವರಿಸಬೇಕು. ಅದೇ ಆತ್ಮವಿಕಾಸ.

ಆ ತರಂಗವಲಯಗಳನ್ನು ನಾವು–ಎಂದರೆ ಕನ್ನಡ ಜನ–ಮುಖ್ಯವಾಗಿ ಆರೆಂದು ಇಟ್ಟುಕೊಳ್ಳೋಣ. ಯಾವುವೆಂದರೆ–

- **ಮನೆ ಅಥವಾ ಕುಟುಂಬ** –ಇದು ಹೃದಯವಿಸ್ತಾರದಲ್ಲಿ ಮೊದಲನೆಯ ಮೆಟ್ಟಲು. "ಅಹಂ" (ನಾನು) ಎಂಬುದು ಕರಗಿ, ಹರಡಿ, "ಮಮತೆ" (ನನ್ನದು) ಎಂಬ ರೂಪದಲ್ಲಿ ತಾಯಿ, ತಂದೆ, ಹೆಂಡತಿ, ಮಕ್ಕಳು, ಬಂಧು, ಬಳಗ, ಇಷ್ಟರು, ಸ್ನೇಹಿತರು–ಎಂಬ ಇತರರನ್ನು ಮಮತೆ ತನ್ನೊಳಕ್ಕೆ ಸೇರಿಸಿಕೊಳ್ಳುತ್ತದೆ. ಸಂಸಾರದಲ್ಲಿ ಆಗುವ ಕಷ್ಟಾನುಭವ ಸುಖಾನುಭವಗಳೂ, ಇತರ ಕ್ಷೇತ್ರಗಳಲ್ಲಿ ಆಗುವ ಜೀವನ ಸಹಭಾಗಿತೆಯ ಅಭ್ಯಾಸವೂ ಮನಸ್ಸಿಗೆ ಒಳ್ಳೆಯ ಸಂಸ್ಕಾರವಾಗುತ್ತದೆ. ಇದು ಮೊದಲ ಅಲೆಯ ಸುತ್ತು.
- **ಉದ್ಯೋಗ ಮಂಡಲಿ** –ಎಂದರೆ ಜೀವನ ಸಂಪಾದನೆಯ ಕಸಬಿನಲ್ಲಿ ತನ್ನ ಜೊತೆಯ ಕೆಲಸಗಾರರ ಗುಂಪು. ರೈತನಿಗೆ ಅವನ ಯಜಮಾನ, ಆಳು ಮೊದಲಾದವರು; ವರ್ತಕನಿಗೆ ಅವನ ಗಿರಾಕಿಗಳು;

ಉಪಾಧ್ಯಾಯನಿಗೆ ಅವನ ಶಿಷ್ಯರು; ವಕೀಲನಿಗೆ ಅವನ ಕಕ್ಷಿಗಾರರು ಮತ್ತು ಜಡ್ಜಿಗಳು–ಹೀಗೆ. ಪ್ರತಿಯೊಬ್ಬ ಮನುಷ್ಯನ ಗುಣಶಕ್ತಿಗಳು ಅವನ ವ್ಯಕ್ತಿಸಂಬಂಧಗಳ ಮೂಲಕ ಬೆಳೆದು, ಬಲಿತು, ಹೊರಕ್ಕೆ ಬರುತ್ತವೆ. ಮತ್ತು ಆ ಸಂಬಂಧ ಅವನ ಮಮತೆಯನ್ನು ಇನ್ನಷ್ಟು ವಿಸ್ತಾರಪಡಿಸಿ ಸ್ವಾರ್ಥರಸದ ಗೊಜ್ಜನ್ನು ತೆಳ್ಳಗಾಗಿಸಿ ಹರಿಯಿಸುತ್ತದೆ. ಇಬ್ಬರು ಮೂವರಿಗೆ ಸಲ್ಲುತ್ತಿದ್ದ ಯೋಗಕ್ಷೇಮಾಸಕ್ತಿಯನ್ನು ಹತ್ತಾರು ಮಂದಿಗೆ ಹಂಚಿ ಜೀವನವನ್ನು ವಿಶಾಲಪಡಿಸುತ್ತದೆ. ಇದು ಎರಡನೆಯ ಅಲೆಯ ಸುತ್ತು.

- **ಊರು** –ಅಲ್ಲಿಂದ ಮಮತೆ ಊರಿಗೆಲ್ಲ ಹರಡಿ, ಹತ್ತು ಮಂದಿಯ ಜೊತೆಗೆ ನೂರಾರು ಮಂದಿಯನ್ನು ನಮ್ಮ ಆದರಣೆ ಹಿತಚಿಂತನೆಗಳಲ್ಲಿ ಪಾಲುದಾರರನ್ನಾಗಿ ಮಾಡುತ್ತದೆ. ಈ ಪೌರವಲಯದಲ್ಲಿ ಗ್ರಾಮವಲಯದಲ್ಲಿ ಕುಲ ಜಾತಿ ಮತಗಳ ಸಂಕುಚಿತ ಭಾವನೆಗಳು ಕರಗಿ ಅಳಿಸಿಹೋಗಲು ಮೊದಲಾಗಬೇಕು. ಇದು ಮೂರನೆಯ ಅಲೆಯ ಸುತ್ತು.
- **ರಾಜ್ಯ** –ಅಲ್ಲಿಂದ ಮುಂದಕ್ಕೆ ಮಮತೆ ಇನ್ನೂ ವಿಸ್ತಾರವಾಗಿ ಮೈಸೂರು ಸಂಸ್ಥಾನಕ್ಕೆಲ್ಲ ವ್ಯಾಪಿಸಬೇಕು. ತನ್ನ ಸಹಪ್ರಜೆಯೆಲ್ಲವೂ ತನ್ನ ಸ್ವಂತ ಕುಟುಂಬವೇ ಎಂಬ ಭಾವನೆ ಮನಸ್ಸಿನಲ್ಲಿ ತುಂಬಬೇಕು. ಈ ವಲಯದಲ್ಲಿ ಮತ ಜಾತಿ ಕುಲಗಳ ಸಣ್ಣ ಸಣ್ಣ ಅಭಿಮಾನಗಳಿಗೆ ಸ್ಥಳವೇ ಇರಬಾರದು. ಎಲ್ಲ ಕನ್ನಡಿಗರೂ ನಮ್ಮವರೇ. ಭಾಷೆ, ಸಾಹಿತ್ಯ, ವಿದ್ಯೆ, ಸಂಸ್ಕೃತಿ, ಮನೋಧರ್ಮ ಈ ನಾನಾ ಅತಿಮುಖ್ಯ ವಿಷಯಗಳಲ್ಲಿ ಕನ್ನಡ ನಾಡೆಲ್ಲ ಒಂದೇ. ಎಲ್ಲ ಕನ್ನಡ ಜನವೂ ನಮ್ಮವರೇ ಎಂದು ಇಲ್ಲಿ ನಾವು ಕಲಿಯಬೇಕು. ಇದು ನಾಲ್ಕನೆಯ ಅಲೆಯ ಸುತ್ತು.
- **ಭಾರತ ದೇಶ** –ಕನ್ನಡ ದೇಶದ ಎಲ್ಲೆಯಲ್ಲೂ ನಮ್ಮ ಮನೋವಿಸ್ತಾರ ನಿಲ್ಲಬಾರದು. ಪ್ರಪಂಚದ ದೃಷ್ಟಿಯಿಂದ ಎಲ್ಲ ಇಂಡಿಯವೂ ಒಂದು ಅಖಂಡ ದೇಶ. ಅದೇ ನಮ್ಮ ಜನ್ಮಭೂಮಿ; ಇಂಡಿಯದಲ್ಲಿ ಯಾವ ಸಂಸ್ಥಾನದ ಯಾವ ಪ್ರಾಂತದ, ಯಾವ ಭಾಷೆಯ, ಯಾವ ಮತದ, ಯಾವ ಜಾತಿಯ, ಯಾವ ಕುಲದ ಜನವೇ ಆಗಲಿ, ನಾವೆಲ್ಲ ಮೊದಲು ಭಾರತೀಯರು; ಅನಂತರ ಹಿಂದುಗಳು, ಕನ್ನಡಿಗರು ಮೊದಲಾದ ಸಣ್ಣ ಸಣ್ಣ ವಿಭಾಗಗಳಿಗೆ ಸೇರಿದವರು. ಭಾರತೀಯತೆಯ ಮಹಾತೀರ್ಥದಲ್ಲಿ ನಮ್ಮ ಎಲ್ಲ ಒಳಭೇದಗಳೂ ಲಯವಾಗಿ ಹೋಗಬೇಕು. ಇದು ಐದನೆಯ ಅಲೆಯ ಸುತ್ತು.
- **ಮಾನವ ವರ್ಗ** –ನಮ್ಮ ಭಾರತಪ್ರೀತಿ ಕೂಡ ಇನ್ನೂ ಮುಂದಕ್ಕೆ ಹರಿದು ಸಮಸ್ತ ಮನುಷ್ಯ ಪ್ರಪಂಚವನ್ನೂ ಆವರಿಸಬೇಕು. ಇತರ ಜನಾಂಗಗಳ ಕ್ಷೇಮಲಾಭಗಳನ್ನು ಬಿಟ್ಟು ಇಂಡಿಯದ ಕ್ಷೇಮಲಾಭಗಳಿಲ್ಲ; ಇಂಡಿಯದ ಹಿತ ಪ್ರಯೋಜನಗಳನ್ನು ಬಿಟ್ಟು ಯಾವ ಒಂದು ಒಳ ಪ್ರಾಂತಕ್ಕೂ ಅಥವಾ ಸಂಸ್ಥಾನಕ್ಕೂ ಹಿತಸಾಧನೆ ಇಲ್ಲ. ಸಂಸ್ಥಾನದ ಹಿತ ಸಿದ್ಧಿ ಬಿಟ್ಟು ಯಾವ ಊರಿಗೂ, ಯಾವ ಪಂಗಡಕ್ಕೂ, ಯಾವ ಕುಟುಂಬಕ್ಕೂ ಹಿತಸಂಪಾದನೆ ಇಲ್ಲ. ಹೀಗೆ ಬಿಡಿಬಿಡಿಯಾಗಿ ನೋಡಿದರೆ ಸಣ್ಣವನೆಂದು ಕಾಣುವ ಮನುಷ್ಯ ವ್ಯಕ್ತಿಯ ಜೀವನಕ್ಕೂ ವಿಶಾಲವಾದ ಮನುಷ್ಯ ಲೋಕದ ಜೀವನಕ್ಕೂ ಸೋಪಾನಕ್ರಮದ, ಅಥವಾ ಸರಪಣಿಯಂಥ ಸಂಬಂಧ ತಪ್ಪದೆ ಇರುತ್ತದೆ. ಮನುಷ್ಯಲೋಕವೇ ಏಕೆ, ಸಕಲ ಜೀವಕೋಟಿಯೂ ನಮ್ಮ ಸ್ನೇಹವಾತ್ಸಲ್ಯಗಳ ಛತ್ರಚ್ಛಾಯೆಯೊಳಕ್ಕೆ ಬರಬೇಕು. ಅದೇ ಭೂತ ದಯೆ, ಪಶ್ಚಾತ್ತಾಪ, ಲೋಕಕಾರುಣ್ಯ. ಅದೇ ವಿಶ್ವಾತ್ಮಭಾವ, ಅದೇ ಪರಮಜ್ಞಾನಿಯ ಲಕ್ಷಣ.

ಇದನ್ನು ಉದ್ದೇಶಿಸಿಯೇ, ನಮ್ಮ ಪೂರ್ವಸೂರಿಗಳು– “ಉದಾರ ಚರಿತಾನಾಂತು ವಸುಧೈವ ಕುಟುಂಬಕಂ” (ದೊಡ್ಡ ಮನಸ್ಸು ದೊಡ್ಡ ನಡತೆಗಳುಳ್ಳವರಿಗೆ ಸಮಸ್ತ ಭೂಮಂಡಲವೂ ಸ್ವಂತ

ಸಂಸಾರವೇ) ಎಂದು ಹೇಳಿದರು. ಇದೇ ಆರನೆಯ ತರಂಗವಲಯ.

ಹೀಗೆ ಏಳುಸುತ್ತಿನ ಮಲ್ಲಿಗೆಯಂತೆ ಅರಳಬೇಕು ಆತ್ಮ. ಅದೇ ಮನುಷ್ಯ ಜೀವದ ಸ್ವರೂಪವಿಸ್ತಾರ, ಅಥವಾ ಆತ್ಮವಿಕಾಸ. ಆದರೆ ನಮ್ಮಲ್ಲಿ ಮಮತೆ ಪ್ರೀತಿ ಅಭಿಮಾನಗಳು ಸಾಮಾನ್ಯವಾಗಿ ನಮ್ಮ ನಮ್ಮ ಮನೆಯ ಗೋಡೆಗಳಿಂದ ಹೊರಕ್ಕೆ ಹರಡುವುದು ಅಪರೂಪ. ಮೊದಲು ಸ್ವಂತ ಕುಟುಂಬ, ಆಮೇಲೆ ಬಂಧುಬಳಗ –ಇಷ್ಟರಲ್ಲಿ ಮುಗಿಯುತ್ತದೆ ನಮ್ಮ ಲೋಕಚರಿತೆ. ನಮ್ಮ ಸ್ವಾರ್ಥತೆ ಇನ್ನೂ ಕರಗಿ ಅಲ್ಲಿಂದ ಮುಂದಕ್ಕೆ ಹರಿಯುವುದಿಲ್ಲ. ನಮ್ಮ ಆತ್ಮ ಅರಳದೆ ಮನೆಯ ಹೊಸ್ತಿಲ ಮೇಲೆ ಕರಡು ಕಟ್ಟುತ್ತದೆ. ನಮ್ಮ ವೇದಾಂತ ಎಷ್ಟು ಉನ್ನತವಾಗಿದ್ದರೆ ತಾನೇ ಏನು? ನಮ್ಮ ಜೀವನವನ್ನು ನಾವು ಕಾರ್ಪಣ್ಯದಲ್ಲಿ ಇರಿಸಿಕೊಂಡಿದ್ದೇವೆ. ಸಮಸ್ತ ಲೋಕದ ಚಿಂತೆ ಹಾಗಿರಲಿ, ನಮ್ಮೂರಿನ ಚಿಂತೆ ಕೂಡ, ನಮ್ಮ ರಾಜ್ಯದ ಚಿಂತೆ ಕೂಡ ನಮಗೆ ಬರುವುದಿಲ್ಲ.

ನಮ್ಮ ದೇಶ ಪರಾಧೀನವಾಗಿ ಹಿಂದೆ ಬಿದ್ದಿರುವುದಕ್ಕೆ ಏನೇನು ಕಾರಣವಿರಬಹುದೆಂದು ಆಗಲೇ ವಿಚಾರಿಸಿ ಅನೇಕ ಉತ್ತರಗಳನ್ನು ನೋಡಿದೆವು. ಅದಕ್ಕೆ ಇನ್ನೊಂದು ಮುಖ್ಯಕಾರಣವೆಂದರೆ–ನಮ್ಮ ಸಂಕುಚಿತ ಮನೋದೃಷ್ಟಿ. ನಮ್ಮ ಜನಕ್ಕೆ ಸಾರ್ವಜನಿಕ ಚಿಂತೆಯ ಅಭ್ಯಾಸವಿಲ್ಲ. ಗುಡಿ ಛತ್ರಗಳನ್ನು ಕಟ್ಟಿಸಿದವರ ಮನಸ್ಸಿನಲ್ಲಿಯೂ, ತೋಪು ಸಾಲುಮರಗಳನ್ನು ನೆಡಿಸಿದವರ ಮನಸ್ಸಿನಲ್ಲಿಯೂ ಇಹಲೋಕ ಚಿಂತೆಗಿಂತ ಪರಲೋಕಪ್ರಾಪ್ತಿಯ ಚಿಂತೆ ಮುಂದಾಗಿದ್ದಂತೆ ತೋರುತ್ತದೆ. ಇಹದ ಬದುಕಿನಲ್ಲಿ ಆಸಕ್ತಿ ಗೌರವ ಇಲ್ಲದಿದ್ದವರು ಅದರ ಚಿಂತೆಗೆ ಹೇಗೆ ಮನಸ್ಸು ಮಾಡಿದ್ದಾರು? ನಮ್ಮ ಪೂರ್ವಿಕರು ಇಹವಿಚಾರವನ್ನು ಅಲ್ಪವೆಂದು ಹಳ್ಳಕ್ಕೆ ತಳ್ಳಿದರು. ಊರು, ದೇಶ, ಜನಾಂಗ–ಇವು ನಮ್ಮ ಯೋಚನೆಗಳಿಂದ ದೂರವಾದುವು. "ಊರ ಚಿಂತೆ ಕಟ್ಟಿಕೊಂಡು ಈರಶೆಟ್ಟಿ ಬಡವಾದ" ಎಂದು ನಮ್ಮವರು ದೇಶಾಭಿಮಾನಿಯನ್ನು ಹೀಯಾಳಿಸಿದರು. ಅದೇ ನಮ್ಮ ಜನದ ಅಧೋಗತಿಗೆ ಮೂಲ. ಊರಿನ ಚಿಂತೆಯನ್ನು ಗೌಡರ ಪಾಲಿಗೆ ಬಿಟ್ಟರು; ರಾಜ್ಯದ ಚಿಂತೆಯನ್ನು ರಾಜನ ಪಾಲಿಗೆ ಬಿಟ್ಟರು. ಗೌಡನೂ ರಾಜನೂ ಸರಿಯಾಗಿದ್ದಷ್ಟು ಮಟ್ಟಿಗೆ ಜನಕ್ಕೆ ಕ್ಷೇಮ ದಕ್ಕಿತು. ಗೌಡನೂ ರಾಜನೂ ಅಯೋಗ್ಯರಾದಾಗ, ಜನದ ಗತಿ ಕೆಟ್ಟಿತು. ಗೌಡ ರಾಜರುಗಳು ತಮ್ಮ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನೆರವೇರಿಸುವಂತೆ ನಿರ್ಬಂಧಪಡಿಸಲು ನಮ್ಮ ಪೂರ್ವಿಕರು ಯಾವ ಏರ್ಪಾಟನ್ನೂ ಯೋಚಿಸಲಿಲ್ಲ. ಆ ಕಾಲದಲ್ಲಿ ಅಧಿಕಾರಿಗಳಿಗೆ ಸಾಮಾನ್ಯವಾಗಿದ್ದ ಧರ್ಮನಿಷ್ಠೆಯನ್ನು ಅವರು ನಂಬಿದರು. ಅಪನಂಬಿಕೆಗೆ ಕಾರಣ ಅವರಿಗೆ ತೋರಿರಲಿಲ್ಲ. ನಮ್ಮ ಕಾಲದಲ್ಲಿ ಅಧಿಕಾರಿಗಳ ಮೇಲೆ ತನಿಖೆ ಕಾವಲು ಅತ್ಯವಶ್ಯವಾಗಿ ಬಂದಿದೆ. ಅದಕ್ಕಾಗಿ ಪ್ರಜಾಭಿಪ್ರಾಯವೆಂಬ ಒಂದು ಮಹಾಶಕ್ತಿ ಈಗ ತಲೆಯೆತ್ತುತ್ತಿದೆ. ಜನಶಕ್ತಿಯೇ ಇನ್ನುಮುಂದೆ ಲೋಕವನ್ನಾಳತಕ್ಕದ್ದು. ಆದದ್ದರಿಂದ ಊರಿನ ಒಟ್ಟು ಜೀವನದಲ್ಲಿಯೂ ಜನಜನಾಂಗಗಳ ಒಟ್ಟು ಜೀವನದಲ್ಲಿಯೂ ಸಹ ವಿವೇಕದಿಂದ ಭಾಗವಹಿಸಿಕೊಳ್ಳುವುದು ಈಗ ನಮಗೆಲ್ಲರಿಗೂ ಮುಖ್ಯ ಕರ್ತವ್ಯವಾಗಿದೆ.

ಸಮನ್ವಯ :

ನಮ್ಮ ಕಾಲದಲ್ಲಿ ಭೂಮಂಡಲದ ವಿಸ್ತಾರ ಕಡಮೆಯಾಗುತ್ತಿದೆ. ಊರಿಂದೂರಿಗೆ, ದೇಶದಿಂದ ದೇಶಕ್ಕೆ ಇದ್ದ ದೂರಗಳು ಸೇದಿಕೊಳ್ಳುತ್ತಿವೆ. ಆರುತಿಂಗಳ ಮಾತೋ ಆರುವರ್ಷದ ಮಾತೋ ಆಗಿದ್ದ ಕಾಶೀಯಾತ್ರೆ ಈಗ ಆರು ದಿನದ ಮಾತಾಗಿದೆ. ಏರೋಪ್ಲೇನಿನಿಂದ ಅದು ಆರು ಘಂಟೆಗಳಿಗೆ ಇಳಿಯಬಹುದು. ತಂತಿಯ

ಮಾತಿಗೆ ಆ ದೂರ ಹತ್ತು ನಿಮಿಷಗಳ ಕೆಲಸ. ಹೀಗೆ ದೂರನಿವಾರಕ ಯಂತ್ರಗಳಿಂದ ಭೂಮಿಯ ಗಾತ್ರ ಕಡಮೆಯಾಗಿ, ಮನುಷ್ಯ ಲೋಕವೆಲ್ಲ ಒಂದೇ ದೇಶವಾಗುತ್ತಿದೆ. ಮುಳಬಾಗಲು ತಾಲ್ಲೂಕಿನ ತಿಪ್ಪದೊಡ್ಡಿ ಹಳ್ಳಿಯಲ್ಲಿ ಇಂಗ್ಲೆಂಡಿನ ಬಟ್ಟೆ, ಜರ್ಮನಿಯ ಚಾಕು, ಅಮೆರಿಕದ ಸನಿಕೆ, ಆಸ್ಟ್ರೇಲಿಯದ ಹತ್ತಿ, ಜಪಾನಿನ ಪಟಾಕಿ, ಚೀನದ ಬೊಂಬೆ–ಎಲ್ಲಾ ಸಂತೆ ಸೇರಿರುತ್ತವೆ. ನಮ್ಮ ಹಳ್ಳಿಹಳ್ಳಿಯೂ ವಿಶ್ವಪ್ರಪಂಚದ ಕೇಂದ್ರಸ್ಥಾನವಾಗುತ್ತಿದೆ. ಇಂಥ ಕಾಲದಲ್ಲಿ ನಾವು ನಮ್ಮ ಗುಡಿಸಲು ಮೊದಲುಗೊಂಡು ಭೂದಿಗಂತದವರೆಗೆ ಯಾವುದನ್ನು ತಾನೆ ಮರೆಯುವುದು ಸರಿ? ಯಾವ ಜೀವನವಲಯವನ್ನೂ ನಾವು ಮರೆಯಲಾಗದು; ಯಾವುದನ್ನೂ ಉದಾಸೀನ ಮಾಡಬಾರದು.

ಆರು ಜೀವನವಲಯಗಳನ್ನು ಮೇಲೆ ಗುರುತುಮಾಡಿಕೊಂಡಿದ್ದೇವೆ. ಅವುಗಳ ವಿಷಯದಲ್ಲಿ ಒಂದು ನೀತಿಯನ್ನು ಜ್ಞಾಪಕವಾಗಿಟ್ಟುಕೊಳ್ಳಬೇಕು. ಚಿಕ್ಕದು ದೊಡ್ಡದಕ್ಕೆ ಅಡ್ಡಿಯಾಗಬಾರದು; ದೊಡ್ಡದು ಚಿಕ್ಕದ್ದನ್ನು ಕುಗ್ಗಿಸಬಾರದು. ಮನೆಯ ಚಿಂತೆಯಲ್ಲಿ ಊರನ್ನು ಮರೆಯಬಾರದು; ಊರಿನ ವಿಚಾರ ಮನೆಯನ್ನು ಮುರಿಯಬಾರದು. ತಾಯಿಯ ಕೋಪಕ್ಕೆ ಹೆದರಿ ಹೆಂಡತಿಯನ್ನು ಉಪವಾಸ ಕೆಡವಬಾರದು. ಹೆಂಡತಿಯ ದೂರಿನಿಂದ ತಾಯಿಗೆ ಮನೆಯಿಲ್ಲದೆ ಹೋಗಬಾರದು. ಜಾತಿಯ ಲಾಭಕ್ಕಾಗಿ ದೇಶವನ್ನೇ ನಷ್ಟಕ್ಕೆ ಗುರಿಮಾಡಬೇಕಾದದ್ದಿಲ್ಲ. ಜಾತಿ ನಶಿಸಿ ಹೋಗುತ್ತಿದ್ದರೆ ದೇಶದ ನೆವದಿಂದ ಸುಮ್ಮನಿರಬೇಕಾದದ್ದಿಲ್ಲ. ನಮ್ಮ ಸ್ವದೇಶಕ್ಕೂ ಸಹ ಲೋಕವಿರೋಧ ಮಾಡಿಕೊಂಡು ಲಾಭ ಗಳಿಸತಕ್ಕದ್ದಲ್ಲ; ವಿಶ್ವಲೋಕದ ಆರಾಧನೆಯಲ್ಲಿ ನಮ್ಮ ದೇಶವನ್ನೇ ಬಡವು ಮಾಡತಕ್ಕದ್ದೂ ಅಲ್ಲ.

ನಮ್ಮ ಪ್ರೀತಿನಿಷ್ಠೆಯನ್ನು ಮೇಲಣ ಆರು ಅಂತಸ್ತುಗಳಲ್ಲಿಯೂ ತಾರತಮ್ಯ ವಿವೇಕದಿಂದ ಹೊಂದಿಸಿ ಸಲ್ಲಿಸುವುದೇ ಧರ್ಮಪ್ರಶ್ನೆ. ಜೀವನ ಶಿಖರವನ್ನು ಮುಟ್ಟಲು ಆ ಆರರಲ್ಲಿ ಯಾವ ಒಂದು ಮೆಟ್ಟಲನ್ನೂ ಅನವಶ್ಯವೆಂದು ಬಿಡಲಾಗದು; ಯಾವ ಒಂದರಲ್ಲಿಯೂ ಅದೊಂದೇ ಸಾಕೆಂದು ನಿಂತುಬಿಡಲಾಗದು. ಅವುಗಳನ್ನೆಲ್ಲ ತಕ್ಕಂತೆ ಜೋಡಿಸಿಕೊಳ್ಳುವುದೇ ನ್ಯಾಯವಿವೇಚನೆ. ಅದಕ್ಕೆ ಸಮನ್ವಯವೆಂದು ಹೆಸರು.

ನಮ್ಮ ಊಟದಲ್ಲಿ ನಾನಾ ರುಚಿಗಳು ಸೇರಿರಬೇಕು. ಆಗಲೇ ಅದು ಇಷ್ಟವೂ ಪುಷ್ಟಿಕರವೂ ಆಗುವುದು. ಆದರೆ ಉಪ್ಪಿಗೆ ಹುಳಿ ವಿರೋಧ; ಮೆಣಸಿನಕಾಯಿಗೆ ಬೆಲ್ಲ ವಿರೋಧ. ಈ ವಿರೋಧಗಳೆಲ್ಲ ಸಾರಿನಲ್ಲಿ ಸ್ನೇಹಕ್ಕೆ ಬಂದಿರುತ್ತವೆ. ಆ ಪದಾರ್ಥಗಳನ್ನೆಲ್ಲ ಒಂದು ಸಮ ಹದಕ್ಕೆ ತಂದಿರುವುದು ಅಡಿಗೆಯ ರಸ ಸಮನ್ವಯ. ಪ್ರಪಂಚದ ಎಲ್ಲ ವ್ಯಾಪಾರಗಳಲ್ಲಿಯೂ ಅತ್ಯಂತ ಅವಶ್ಯವಾದದ್ದು. ಈ ಸಮನ್ವಯ ಚಾತುರ್ಯ.

ಆ ಸಮನ್ವಯಕ್ಕೆ ಅವಶ್ಯವಾದದ್ದು ನೀತಿಸೂಕ್ಷ್ಮಜ್ಞಾನ. ಅದೇ ನಿಜವಾದ ತಿಳಿವು. ನಮಗೆ ಬೇಕಾದ ವಸ್ತುಗಳು ನೂರಾರು ಇರುತ್ತವೆ. ಆದರೆ ಅವುಗಳಲ್ಲಿ ಯಾವಯಾವುದರ ಬೆಲೆ ಎಷ್ಟೆಷ್ಟು? ಯಾವಯಾವುದು ಎಷ್ಟೆಷ್ಟು ಮುಖ್ಯ? ಯಾವುದು ಮೊದಲು ಬರಬೇಕಾದದ್ದು, ಯಾವುದು ಎರಡನೆಯದು? –ಈ ತಾರತಮ್ಯವಿವೇಕವೇ ಪುರುಷಬುದ್ಧಿಯ ಪರಮಶ್ರೇಷ್ಠವಾದ ಉಪಯೋಗ, ವಿಜ್ಞಾನದ ಮಹಿಮೆಯನ್ನು ಆಗಲೇ ನೋಡಿದ್ದೇವೆ. ಆ ನಾನಾ ವಿಜ್ಞಾನ ಶಾಸ್ತ್ರಗಳ ಮೇಲೆ ಪ್ರಭುತ್ವ ಮಾಡಬೇಕಾದದ್ದು ಈ ತಾರತಮ್ಯ ವಿವೇಕ.

ಆತ್ಮಸಂಸ್ಕಾರಗಳು :

ಅಂಥಾ ತಾರತಮ್ಯ ವಿವೇಚನೆ ಲೋಕಾನುಭವದಿಂದಲೂ ಲೋಕ ಚರಿತ್ರೆಯ ಪರಿಶೀಲನೆಯಿಂದಲೂ ಉಂಟಾಗತಕ್ಕದ್ದು. ಅದೇ ಸಂಸ್ಕಾರ ಅಥವಾ ಸಂಸ್ಕೃತಿ. ಸಂಸ್ಕೃತಿಯ ಉದ್ದೇಶಗಳು ಎರಡು: (೧) ಹೃದಯ ರಸಗಳನ್ನು ಸಡಿಲಿಸಿ ವಿಸ್ತಾರವಾಗಿ ಹರಡಿಸುವುದು, (೨) ಲೋಕದ ನಾನಾ ಪದಾರ್ಥಗಳ ಮೌಲ್ಯ ತಾರತಮ್ಯವನ್ನು ತೋರಿಸಿಕೊಡುವುದು. ಇಂಥ ಜೀವನ ಪರಿಷ್ಕಾರಕ್ಕೆ ಇರುವ ಸಾಧನೆಗಳಲ್ಲಿ ಮುಖ್ಯವಾದ ಕೆಲವು ಈ ಐದು:

- **ಸಂಸಾರ** – "ಅಹಂ" (ನಾನು) ಎಂಬ ಸ್ವಾರ್ಥದ ಕಲ್ಲನ್ನು ಬೇಯಿಸಿ ಮೆತುಮಾಡಬಲ್ಲ ಬಿಸಿ ಈ ಸಂಸಾರವೆಂಬ ಒಲೆಯದು. ಅದು ತಂದೆ ತಾಯಿ ಸೋದರ ಸೋದರಿ ಮಡದಿ ಮಕ್ಕಳೆಂಬ ಅಭಿಮಾನಗಳ ಕಾವಿನಿಂದ ಮನಸ್ಸಿನ ಗಂಟುಗಂತಿಗಳನ್ನು ಕರಗಿಸಿ, ಮನಸ್ಸಿನ ಬಿರುಕು ಬುರುಡೆಗಳಿಗೆ ಬೆಸುಗೆ ಹಾಕಿ ಭದ್ರಪಡಿಸಿ ನಮ್ಮನ್ನು ಅಳಿಸಿ, ನಗಿಸಿ, ನಮ್ಮಿಂದ ಚಿಂತೆ ಮಾಡಿಸಿ, ಬಾಯಿಬಾಯಿ ಬಿಡಿಸಿ, ಹಾಯಾಗಿಸಿ, ಉಸ್ಸೆನ್ನಿಸಿ ನಮ್ಮನ್ನು ಪಕ್ವಮಾಡುತ್ತದೆ. ಆದದ್ದರಿಂದಲೇ ತಾಪತ್ರಯವೆಂಬ ಮೂರು ಬೆಂಕಿಗಳಲ್ಲಿ ಸಂಸಾರವೊಂದೆಂದು ಸೇರಿಸುವುದು. ಮನೆಯೇ ನಮಗಿರುವ ಮೊದಲನೆಯ ನೀತಿಪಾಠಶಾಲೆ.
- **ಉದ್ಯೋಗ** –ಇದು ಮಮತಾ ಸಂಬಂಧವಿಲ್ಲದ ಪರಕೀಯ ಜನದ ನಡುವೆ ನಮ್ಮನ್ನು ಸಿಕ್ಕಿಸಿ, ನಾನಾ ಪರೀಕ್ಷೆಗಳಿಗೆ ಗುರಿಮಾಡುತ್ತದೆ. ನಮ್ಮ ಅಂತಶ್ಶಕ್ತಿಗಳು ವೃದ್ಧಿಯಾಗುವುದು ಇಲ್ಲಿಯ ಕಸರತ್ತಿನಿಂದ. ಸ್ವಭಾವ ಪ್ರಕಾಶಕ್ಕೂ ಅನುಭವ ವಿಸ್ತಾರಕ್ಕೂ ಸಾಧಕವಾದದ್ದು ಈ ಎರಡನೆಯ ನೀತಿಪಾಠಶಾಲೆ. ಸರಿಯಾಗಿ ಬದುಕಬೇಕೆನ್ನುವವನು ಮೊದಲು ಯಾವುದಾದರೊಂದು ಕಸಬನ್ನೋ ಉದ್ಯೋಗವನ್ನೋ ಕಲಿತು, ಅದೇ ತನ್ನನ್ನು ಬದುಕಿಸುವ ತಾರಕವ್ರತವೆಂದು ನಂಬಿ, ಅದರಲ್ಲಿ ತನ್ನ ಯೋಗ್ಯತೆಯನ್ನು ಪ್ರಕಾಶಪಡಿಸಬೇಕು. ಮನುಷ್ಯನ ಹಿರಿಮೆಯಾಗಲಿ ಕೀಳ್ಮೆಯಾಗಲಿ ಅವನ ಪದವಿ ಸಂಪತ್ತುಗಳಿಂದ ಉಂಟಾಗತಕ್ಕದ್ದಲ್ಲ; ಅವನು ಕೆಲಸ ಮಾಡುವ "ರೀತಿ" ಯಿಂದ ಉಂಟಾಗತಕ್ಕದ್ದು. ಮುಖ್ಯವಾದದ್ದು ಕೆಲಸದ ಅಂತಸ್ತಲ್ಲ, ಕೆಲಸದ ಅಚ್ಚುಕಟ್ಟು–ಅದರಲ್ಲಿ ತೋರಿಸುವ ಜಾಣತನ, ಶ್ರದ್ಧೆ, ಸಾಮರ್ಥ್ಯ.

  ಮಹಾಭಾರತದಲ್ಲಿ ಧರ್ಮರಾಯನನ್ನು ಯಕ್ಷನು ಒಂದು ಪ್ರಶ್ನೆ ಕೇಳಿದನಂತೆ: "ಧರ್ಮಕ್ಕೆ ನೆಲೆಮನೆಯೆಲ್ಲಿ?" ಎಂದು. ಅದಕ್ಕೆ ಧರ್ಮರಾಯನು–

  > "ದಾಕ್ಷ್ಯಮೇಕಪದಂ ಧರ್ಮಂ" [2]

  ("ಮಾಡುವ ಕೆಲಸದಲ್ಲಿ ದಕ್ಷತೆ–ವಿಚಕ್ಷಣೆ–ನಿಪುಣತೆ, ಅದೊಂದೇ ಧರ್ಮಕ್ಕೆ ನೆಲೆಮನೆ") ಎಂದು ಉತ್ತರ ಹೇಳಿದನಂತೆ. ನಮ್ಮ ಜನದಲ್ಲಿ ಈ ಕಾರ್ಯ ಶ್ರದ್ಧೆ ಈಚೀಚೆಗೆ ಕಡಮೆಯಾಗುತ್ತಿದೆ. ಬೇಕೋಬಿಟ್ಟಿಯಾಗಿ, ನೋಟಗಾರಿಕೆಗಾಗಿ ಕೆಲಸಮಾಡುವ ಅಭ್ಯಾಸ ಬೆಳೆಯುತ್ತಿದೆ. ಅದೇ ಆತ್ಮವಿನಾಶ. ಪ್ರಕೃತಿ ತನ್ನ ಕೆಲಸವನ್ನು ಯಾರು ನೋಡಲಿ, ನೋಡದಿರಲಿ, ಆದಷ್ಟು ಚೆನ್ನಾಗಿ ಮಾಡುತ್ತಾಳೆ. ನಿರ್ಜನವಾದ ಕಾಡಿನಲ್ಲಿ ಸೊಗಸಾದ ಹೂವುಗಳನ್ನು ಬೆಳೆಯುತ್ತಾಳೆ. ಏತಕ್ಕೋಸ್ಕರ? ತನ್ನ ಸ್ವಂತ ಧರ್ಮಕ್ಕೋಸ್ಕರ. ಹಾಗೆ ನಾವು ನಮ್ಮ ಕೈಗೆ ದೊರೆತ ಉದ್ಯೋಗವನ್ನು ವಿಚಕ್ಷಣೆಯಿಂದ ನಡಸಲು ಶ್ರಮಪಟ್ಟರೆ ನಮ್ಮ ಯೋಗ್ಯತೆಯೇ ದೊಡ್ಡದಾಗುತ್ತದೆ.

- **ಸಾಹಿತ್ಯ, ಕಲೆ** –ಇದು ಇನ್ನೂ ದೊಡ್ಡ ಪಾಠಶಾಲೆ. ಮೊದಲನೆಯದಾದ ಸಂಸಾರ ಕ್ಷೇತ್ರದಲ್ಲಿಯೂ ಇನ್ನುಳಿದ ಎಲ್ಲ ಕ್ಷೇತ್ರಗಳಲ್ಲಿಯೂ ಸಹ ನಮ್ಮ ಜೀವನ ಯಥೋಚಿತವಾಗಿರಬೇಕಾದರೆ ಈ ಸಾಹಿತ್ಯಕಲೆಗಳ ಶಿಕ್ಷಣ ಬಹಳ ಆವಶ್ಯಕವಾದದ್ದು. ಈ ಶಾಲೆಯಲ್ಲಿ ಮೂರು ವಿಭಾಗಗಳು:
  - ಕಾವ್ಯ –ಇದು ಪದ್ಯ, ಹಾಡು, ನಾಟಕ, ಕಾದಂಬರಿ, ಕಥೆ, ಪ್ರಬಂಧ, ಉಪನ್ಯಾಸ–ಇಂಥಾ ಗ್ರಂಥಗಳು. ನಮ್ಮ ಮನಸ್ಸಿನಲ್ಲಿ ಅಡಗಿಕೊಂಡಿರುವ ನಾನಾ ಸುಖದುಃಖಗಳನ್ನೂ ಪ್ರೀತಿ ರೋಷಗಳನ್ನೂ ಕೆರಳಿಸಿ ಮೇಲಕ್ಕೆ ತಂದು, ಇತರರ ಅನುಭವಗಳನ್ನು ನಮ್ಮ ಮನಸ್ಸು ಅರಿತುಕೊಂಡು ಅವರೊಡನೆ ಬೆರೆಯುವಂತೆ ಮಾಡುತ್ತದೆ ಈ ಕಾವ್ಯ ಸಾಹಿತ್ಯ. ಅಷ್ಟೇ ಅಲ್ಲದೆ ಅದು ನಮ್ಮ ಮುಂದೆ ನಾನಾ ಸೌಂದರ್ಯಗಳನ್ನೂ ನಾನಾ ವಿಕಾರಗಳನ್ನೂ ತಂದು ತೋರಿಸಿ ಜೀವನಕ್ಕೆ ನಿಜವಾದ ಭೂಷಣವೇನೆಂಬುದನ್ನು ನಮ್ಮಿಂದ ವಿವೇಚನೆ ಮಾಡಿಸುತ್ತದೆ. ಸೌಂದರ್ಯಗಳಲ್ಲಿ ಹತ್ತಾರು ಅಂತಸ್ತುಗಳಿರುತ್ತವೆ. ಅವುಗಳ ತಾರತಮ್ಯಜ್ಞಾನ ನಮ್ಮಲ್ಲಿ ಉದಿಸುವಂತೆ ಪ್ರೇರೇಪಣೆ ಮಾಡಿಸುವುದು ಮಹಾಕಾವ್ಯ.
  - ಚರಿತ್ರೆ –ಪ್ರಪಂಚದ ನಾನಾ ದೇಶಗಳ ಜನ ಹೇಗೆ ಹೇಗೆ ಬದುಕಿದರು; ಅವರು ಏನೇನು ಕಷ್ಟಗಳನ್ನು ಎದುರಿಸಿದರು; ಎಂಥೆಂಥ ಸಂದರ್ಭಗಳಲ್ಲಿ ಹೇಗೆ ನಡೆದುಕೊಂಡರು; ಆಪತ್ಕಾಲದಲ್ಲಿಯೂ ಸಂಪತ್ತಿನಲ್ಲಿಯೂ ಜನದ ತಲೆ ಹೇಗೆ ತಿರುಗಿಹೋಗುತ್ತದೆ; ವಿವೇಕದ ಮಾತಿಗೆ ಮಂದಿ ಹೇಗೆ ಕಿವುಡಾಗುತ್ತದೆ; ಆವೇಶದ ಕೂಗಿಗೆ ಹೇಗೆ ಚುರುಕಾಗುತ್ತದೆ; ಮಹಾಪುರುಷರ ವ್ಯಕ್ತಿಪ್ರಭಾವ ಹೇಗೆ ಹೇಗೆ ಜನವನ್ನು ತಿದ್ದುತ್ತದೆ; ಒಟ್ಟಿನಮೇಲೆ ಜನಜನಾಂಗಗಳ ಗತಿ ಹೇಗೆ ಅದೃಷ್ಟಾಧೀನವಾಗುತ್ತದೆ. ಎಷ್ಟು ಮಾತ್ರ ಅದು ಪುರುಷಪ್ರಯತ್ನಕ್ಕೆ ಸಿಕ್ಕುತ್ತದೆ–ಇದನ್ನೆಲ್ಲ ವಿಶದವಾಗಿ ತೋರಿಸಿ ಯುಕ್ತಾಯುಕ್ತ ವಿವೇಕಕ್ಕೆ ಸಾಧಕವಾಗುವುದು ಚರಿತ್ರೆ.
  - ಲಲಿತಕಲೆ –ಎಂದರೆ ಸಂಗೀತ, ಚಿತ್ರ, ಶಿಲ್ಪ, ನೃತ್ಯ ಮೊದಲಾದ ಮನೋರಂಜಕ ಕೃತಿಗಳು. ಇವು ಕಾವ್ಯಕ್ಕೆ ಸಹಕಾರಿಗಳಾದವು. ಇವೂ ನಮ್ಮ ಹೃದಯದ ಮೇಲೆ ಕೆಲಸಮಾಡಿ, ಮನುಷ್ಯಸ್ವಭಾವದ ಆಳದಲ್ಲಿರುವ ಆಶೆ ಕೊರಗು ಸಂತೋಷಗಳನ್ನು ನಮ್ಮ ಅನುಭವಕ್ಕೆ ತಂದುಕೊಟ್ಟು, ಲೋಕಜೀವನದಲ್ಲಿ ನಮಗೆ ಸಹಾನುಭೂತಿಯನ್ನು ಉಂಟು ಮಾಡುತ್ತವೆ.
- **ಮತಧರ್ಮ** –ಇದು ಸಮಸ್ತರಿಗೂ ಪರಮಗುರು ಸ್ಥಾನದಲ್ಲಿರತಕ್ಕದ್ದು. ಮತ ಎಂದರೆ ದೇವರನ್ನು ಕುರಿತ ನಂಬಿಕೆ ಮತ್ತು ಆ ನಂಬಿಕೆಗೆ ಅನುಸಾರವಾದ ನಡವಳಿಕೆ. ಈ ಮತವೆಂಬ ಮನೋಭಾವ ಇಲ್ಲದಿರುವ ಜನವೇ ಲೋಕದಲಿಲ್ಲ. ಕಾಡುಜನರಲ್ಲಿ ಸಹ ಅದು ಕಾಣಬರುತ್ತದೆ. ಅದರ ಆಧಾರದ ಮೇಲೆ ನಿಂತಿರುವುದೇ ಸ್ವರ್ಗ–ನರಕಗಳ ಭಾವನೆ. ಸಾಮಾನ್ಯವಾಗಿ ದೇವರ ಕೋಪದ ಹೆದರಿಕೆಯಿಂದಲೇ ಮನುಷ್ಯರ ನೀತಿ. ಹೀಗೆ ಪುಣ್ಯಪಾಪವಿವೇಕವನ್ನು ಜನರಲ್ಲಿ ಉತ್ಪತ್ತಿ ಮಾಡಿ, ಮತಾಚಾರಗಳು ನೂರಾರು ರೀತಿಗಳಲ್ಲಿ ಮನುಷ್ಯಸ್ವಭಾವವನ್ನೂ, ಸಮಾಜದ ಗತಿಯನ್ನೂ ತಿದ್ದಿವೆ. ಪ್ರಪಂಚದ ಚರಿತ್ರೆಯಲ್ಲಿ ಮತದ ಪರಿಣಾಮ ಅಷ್ಟಿಷ್ಟೆಂದು ಅಳೆಯುವ ಹಾಗಿಲ್ಲ. ಒಟ್ಟಿನ ಮೇಲೆ ಮತ ನಮ್ಮನ್ನು ಬಿಡತಕ್ಕದ್ದಲ್ಲ; ನಾವು ಅದನ್ನು ಬಿಡಬೇಕಾದದ್ದೂ ಇಲ್ಲ. ಉತ್ತಮವಾದ ದೈವಭಕ್ತಿ ಹಸುಮಕ್ಕಳ ಪ್ರೀತಿಯಂತೆ ನಿರ್ಮಲವಾದದ್ದಾಗಿ, ಪ್ರತಿಫಲವನ್ನು ಯಾಚಿಸದ್ದಾಗಿ, ಆನಂದಪರಿಪೂರ್ಣವಾಗಿರಬೇಕು ಮತ್ತು ಅದರಲ್ಲಿ ಸ್ವಮತನಿಷ್ಠೆಯ ಜೊತೆಗೆ ಅನ್ಯಮತದ್ವೇಷವಿಲ್ಲದೆ, ನಮ್ಮ ಕಣ್ಣಿಗೆ ಒಂದು ರೂಪದಲ್ಲಿ ಕಾಣಬಂದ ಸತ್ಯ ಇನ್ನೊಬ್ಬರ ಕಣ್ಣಿಗೆ ಬೇರೊಂದು ರೂಪದಲ್ಲಿ ದೊರೆತಿದ್ದರೂ ಇರಬಹುದೆಂಬ ಸದ್ಭಾವವೂ, ಸಹನೆಯೂ ಕೂಡಿರಬೇಕು.

ಮೂರನೆಯದಾಗಿ, ದೇವರು ಎಲ್ಲರಿಗೂ ತಂದೆಯಾದದ್ದರಿಂದ ಜಗತ್ತೆಲ್ಲ ನಮ್ಮ ಅಣ್ಣ ತಮ್ಮಂದಿರು ಎಂಬ ಪ್ರೀತಿ ವಾತ್ಸಲ್ಯಗಳ ಊಟೆಯಾಗಿರಬೇಕಾದದ್ದು ಮತ. ಒಬ್ಬ ಭಕ್ತರು ಹೀಗೆ ಹೇಳಿದ್ದಾರೆ:

> ಮಾತಾ ಚ ಕಮಲಾದೇವೀ । [3]
> ಪಿತಾ ದೇವೋ ಜನಾರ್ದನಃ ॥
> ಬಾಂಧವಾ ವಿಷ್ಣುಭಕ್ತಾಶ್ಚ ।
> ಸ್ವದೇಶೋ ಭುವನತ್ರಯಂ ॥

(ನನ್ನ ತಾಯಿ ಜಗಜ್ಜನನಿಯಾದ ಮಹಾಲಕ್ಷ್ಮಿ; ತಂದೆ ಜಗಜ್ಜನಕನಾದ ಮಹಾವಿಷ್ಣು; ಬಂಧುಬಳಗ ಭಗವದ್ಭಕ್ತರು; ಮೂರು ಲೋಕವೂ ನನ್ನ ದೇಶವೇ.) ಎಂದರೆ ಭೂತದಯೆ, ಪರೋಪಕಾರ, ಲೋಕಸೇವೆ–ಇದೇ ಮತ ಧರ್ಮದ ಪ್ರತ್ಯಕ್ಷ ರೂಪ.

ಹಾಗಾದರೆ ಗುಡಿ, ಭಜನಮಂದಿರ, ವಿಗ್ರಹ, ಪಟ, ಪೂಜೆ, ಪಾರಾಯಣ, ಧ್ಯಾನ, ಜಪ–ಇವು ಒಂದೂ ಬೇಡವೆ? ಇರಲಿ; ಎಲ್ಲ ಇರಲಿ. ಇವೆಲ್ಲ ನಮ್ಮ ಜ್ಞಾಪಕಕ್ಕೂ ಮನಸ್ಸನ್ನು ಒಂದು ಕಡೆ ನಿಲ್ಲಿಸಿ ದೃಢಪಡಿಸುವುದಕ್ಕೂ ಸಹಾಯಗಳು. ಪೂಜೆ ಧ್ಯಾನಗಳಿಂದ ಮನಸ್ಸಿಗೆ ಒಂದು ನಿರ್ಮಲಭಾವವೂ ಸಮಾಧಾನವೂ ಬಲವೂ ಸಹ ಬರುತ್ತದೆ. ಆದದ್ದರಿಂದ ಪ್ರತಿಯೊಬ್ಬರೂ ಅವರವರ ಮನೋಧರ್ಮಕ್ಕೆ ಒಪ್ಪುವಂತೆ ಬೇಕಾದ ಅನುಷ್ಠಾನಗಳನ್ನು ಇಟ್ಟುಕೊಳ್ಳಲಿ. ಅದು ಒಳ್ಳೆಯದೇ. ಅದರ ಜೊತೆಗೆ ಮತಧರ್ಮದ ವಿಶಾಲ ಮೂಲ ತತ್ತ್ವಗಳನ್ನೂ, ಲೋಕಮೈತ್ರಿಯನ್ನೂ ಪರಿಪಾಲಿಸಲಿ.

ಮತಧರ್ಮದ ಸಾರಾಂಶವನ್ನು ಮಹನೀಯರಾದ ಪುರಂದರದಾಸರು ಒಂದು ಸಣ್ಣ ಹಾಡಿನಲ್ಲಿ ತಿಳಿಸಿಕೊಟ್ಟಿದ್ದಾರೆ:

> ಮನವ ಶೋಧಿಸಬೇಕೋ ನಿಚ್ಚ
> ದಿನದಿನವು ಮಾಡುವ ಪಾಪಪುಣ್ಯದ ವೆಚ್ಚ ॥ ಪ ॥
>
> ಧರ್ಮ–ಅಧರ್ಮ ವಿಂಗಡಿಸಿ–ನೀ ।
> ಅಧರ್ಮದ ನರಗಳ ಬೇರ ಕತ್ತರಿಸಿ ।
> ನಿರ್ಮಲಾಚಾರವ ಚರಿಸಿ–ಪರ ।
> ಬ್ರಹ್ಮಮೂರುತಿ ಪಾದಕಮಲವ ಭಜಿಸಿ ॥ ೧
>
> ತನುವ ಖಂಡಿಸಿ ಒಮ್ಮೆ ಮಾಣೋ ನಿನ್ನ ।
> ಮನವ ದಂಡಿಸಿ ಪರಮಾತ್ಮನ್ನ ಕಾಣೋ ।
> ಕೊನೆಗೆ ನಿನ್ನೊಳು ನೀನೇ ಜಾಣೋ–ಮುಕ್ತಿ ।
> ನಿನಗೆ ದೂರಿಲ್ಲವೋ ಅದು ಒಂದೇ ಗೇಣೋ ॥ ೨
>
> ಆತನ್ನ ನಂಬಿ ಕೇಡಿಲ್ಲ–ಅವ ।
> ಪಾತಕ ಪತಿತ ಸಂಗವ ಮಾಳ್ಪನಲ್ಲ ।
> ನೀತಿವಂತರೆ, ಕೇಳಿರೆಲ್ಲ–ನಮ ।
> ಗಾತನೆ ಗತಿಯೀವ ಪುರಂದರ ವಿಠಲ ॥ ೩

ಪ್ರತಿ ದಿವಸದ ಆತ್ಮಪರೀಕ್ಷೆ, ಪ್ರತಿ ದಿವಸದ ಮನಶ್ಶೋಧನೆ, ಪ್ರತಿ ಕ್ಷಣದ ಧರ್ಮಚಿಂತನೆ, ಪ್ರತಿಕ್ಷಣದ ಲೋಕಹಿತ ಸೇವನೆ–ಇವು ದೈವನಿಷ್ಠೆಯ ಲಕ್ಷಣಗಳು.

ವಿಜ್ಞಾನವಿದ್ಯೆಯ ಮಹಿಮೆ ಎಷ್ಟಿದ್ದರೂ ಅದಕ್ಕೂ ಒಂದು ಮಿತಿಯುಂಟೆಂದೂ, ಅದು ಅಧ್ಯಾತ್ಮಲೋಕವನ್ನು ಹೋಗಲಾರದ್ದೆಂದೂ ಆಗಲೇ ಹೇಳಿದೆವು. ಅಧ್ಯಾತ್ಮದ ಚಿಂತೆಯಲ್ಲಿ ವಿಜ್ಞಾನವನ್ನು ಮರೆತದ್ದು ಇಂಡಿಯ ಮಾಡಿದ ಪ್ರಮಾದವಾದರೆ, ವಿಜ್ಞಾನದ ಬೆರಗಿನಲ್ಲಿ ಅಧ್ಯಾತ್ಮವನ್ನು ಮರೆತದ್ದು, ಯೂರೋಪಿನ ಪ್ರಮಾದ. ಅದರಿಂದಲೇ ಯೂರೋಪಿನವರಿಗೆ ಇಹದ ಬೆಲೆ ಪರಮಾರ್ಥಕ್ಕಿಂತ ದೊಡ್ಡದಾಗಿ ಕಾಣಿಸಿ. ಇಹವಿಭವಕ್ಕೋಸ್ಕರ ಭಯಂಕರ ಯುದ್ಧಸಿದ್ಧತೆ ಒದಗಿಬಂದಿದೆ. ಲೋಕದಲ್ಲಿ ಈ ಭಯಕ್ಷೋಭೆ ತೊಲಗಿ ಶಾಂತಿ ನೆಲಸಬೇಕಾದರೆ ವಿಜ್ಞಾನ ನಿಷ್ಠೆಯನ್ನು ಆಳಲು ಅಧ್ಯಾತ್ಮವಿವೇಕ ತಲೆಯೆತ್ತಬೇಕು.

ಹಳೆಯ ಮಣ್ಣು, ಹೊಸ ಮಡಕೆ :

ವಿಜ್ಞಾನ ಸಾಮ್ರಾಜ್ಯವು ಎಲ್ಲೆಯಿಲ್ಲದ್ದಲ್ಲವೆಂದು ಹಿಂದೆ ಹೇಳಿದೆ. ವಿಜ್ಞಾನವು ಇಂದ್ರಿಯಗ್ರಾಹ್ಯವಾದ ಲೋಕವನ್ನು ಮಾತ್ರ ಹಿಡಿಯಬಲ್ಲದ್ದು. ಪಾಂಚಭೌತಿಕ ವಸ್ತುಗಳು, ಅವುಗಳ ಕ್ರಿಯೆಗಳು–ಇಷ್ಟನ್ನು ಭೌತ ವಿಜ್ಞಾನ (Physics), ಜೈವವಿಜ್ಞಾನ (Biology) ಗಳು ಅಷ್ಟಿಷ್ಟು ಮುಟ್ಟಿಯಾವು. ಭೌತಕ್ಕೂ ತತ್ಕಾರ್ಯಗಳಿಗೂ ಹಿಂದೆ ಇರುವ ಮಹಾ ಚೈತನ್ಯವನ್ನು ಯಾವ (ಸೈಯನ್ಸ್) ವಿಜ್ಞಾನವೂ ಸೋಕಲಾರದು. ಈ ಕಾರಣದಿಂದ ವಿಜ್ಞಾನದ ಸಾಮರ್ಥ್ಯಕ್ಕೆ ಗಡಿ ಮೇರೆಗಳುಂಟೆಂಬುದನ್ನು ನಾವು ನೆನಪಿನಲ್ಲಿರಿಸಿಕೊಳ್ಳಬೇಕು. ಏಕೆಂದರೆ ವಿಜ್ಞಾನದ ಅದ್ಭುತಗಳನ್ನು ನೋಡಿ ಬುದ್ಧಿ ಬೆರಗಾಗಿ, ವೈಜ್ಞಾನಿಕರಿಗೆ ಸಾಧ್ಯವಲ್ಲದ್ದು ಯಾವುದೂ ಇರದೆಂದು ನಮಗೆ ಅನ್ನಿಸುವುದುಂಟು. ಕಳೆದ ಮೂರು ನಾಲ್ಕು ವರ್ಷಗಳಲ್ಲಿ ವಿಜ್ಞಾನದ ಅಬ್ಬರ ಜೋರಾಗಿ ಸಾಗಿದೆ. ಅಣುಬಾಂಬುಗಳು, ಸ್ಪುಟ್ನಿಕ್ಕುಗಳು, ಚಂದ್ರಗ್ರಹವನ್ನು ಪ್ರದಕ್ಷಿಣೆಮಾಡುವ ಸಾಹಸ, ವಾಯುಮಂಡಲದಿಂದ ಮೇಲಕ್ಕೆ ಹಾರುವ ಸಾಹಸ–ಇವೆಲ್ಲ ನಡೆದಿದೆ; ಇನ್ನೂ ಇಂಥವು ನಡೆಯಲಿವೆ. ಆದರೆ ಒಂದು ತತ್ತ್ವವನ್ನು ನೆನಪಿನಿಂದ ಬಿಡಬಾರದು. ವಿಜ್ಞಾನವು ವಿಶ್ವಪ್ರಕೃತಿಗೆ ಒಳಪಟ್ಟದ್ದು; ಪ್ರಕೃತಿಯನ್ನು ಮೀರಿದ್ದಲ್ಲ; ಅದು ಪ್ರಕೃತಿಯ ಕೂಸೇ. ಪ್ರಕೃತಿ ಒದಗಿಸಿರುವ ಸಾಮಗ್ರಿಗೆ, ಪ್ರಕೃತಿ ತಾನಿರಿಸಿಕೊಂಡಿರುವ ಕಾರ್ಯಸೂತ್ರಗಳನ್ನೇ ಅನ್ವಯಿಸಿ, ಈ ಎಲ್ಲ ಅದ್ಭುತಗಳ ರಚನೆಯೂ ಸಾಧ್ಯವಾಗಿದೆ. ಮಣ್ಣು ಹಳೆಯದು; ಮಡಕೆಯ ನಮೂನೆ ಹೊಸದು. ಕೈ ಹಳೆಯ ಕುಂಬಾರನಿಗಿದ್ದದ್ದೇ; ಚಕ್ರ ಹೊಸದು. ಇಷ್ಟೇ ಈಗ ಆಗಿರುವುದು. ವಿಜ್ಞಾನವು ಹೊಸ ಇಂದ್ರಿಯವನ್ನೇನೂ ಕಂಡುಹಿಡಿದಿಲ್ಲ; ಹೊಸ ಅಂಗವನ್ನು ನಿರ್ಮಾಣ ಮಾಡಿಲ್ಲ. ಒಂದು ವೇಳೆ ಹೊಸದು ತಯಾರಾದರೂ ಅದರ ಮೂಲ ದ್ರವ್ಯ ಹಳೆಯ ಮಣ್ಣೇ; ಜೇಡಿಮಣ್ಣಿನ ಬಂಧನ ನಿಯಮ ಅದಕ್ಕೆ ಅಂತರ್ಗತವಾದದ್ದೇ. ಇದರಿಂದ ತೋರುವ ಸಿದ್ಧಾಂತ ಇಷ್ಟು: ವಿಜ್ಞಾನವು ಪುರಾತನ ಪ್ರಕೃತಿಯ ಒಳಗಡೆ ಅಡಗಿರುವ ಗುಣ ಶಕ್ತಿಗಳನ್ನು ಹೊರಗಡೆಗೆ ತರುವ ಪ್ರಯತ್ನ; ಬೇರೆ ಪ್ರಕೃತಿಯನ್ನು ಸೃಷ್ಟಿಮಾಡುವುದಲ್ಲ. ವಿಶ್ವಾಮಿತ್ರ ಮಹರ್ಷಿಯಂತೆ ಹಿಂದೆಲ್ಲಿಯೂ ಇಲ್ಲದಿದ್ದ ಒಂದು ಕೇವಲ ನವೀನ ಸೃಷ್ಟಿಯನ್ನು ನಾನು ಮಾಡಬಲ್ಲೆನೆಂದು ವಿಜ್ಞಾನಿ ಹೊರಟಿಲ್ಲ. ವಿಶ್ವಾಮಿತ್ರನೂ ಸಹ ಚತುರ್ಮುಖ ಬ್ರಹ್ಮನನ್ನು ನಕಲು (ಕಾಪಿ) ಮಾಡಹೊರಟ. ಅದು ಅನುಕರಣಕಾರ್ಯವೇ ಹೊರತು ಸ್ವತಂತ್ರ ಕೃತಿಯಲ್ಲ. ವಿಜ್ಞಾನದ ಇತಿಮಿತಿಗಳು ಹೀಗಿರುವುದರಿಂದ, ನೂತನ ವಿಜ್ಞಾನ ಸಂಧಾನಗಳಿಗೆ ನಾವು ಬುದ್ಧಿಸೋತು, ಸನಾತನವಾದ

ಅಧ್ಯಾತ್ಮವಿದ್ಯೆಯನ್ನು ತೊರೆಯತಕ್ಕದ್ದಲ್ಲ. ಅಧ್ಯಾತ್ಮಕ್ಕೂ ವಿಜ್ಞಾನಕ್ಕೂ ಪರಸ್ಪರ ವಿರೋಧದ ಕಾರಣವೂ ಇಲ್ಲ. ಅಧ್ಯಾತ್ಮನಿಷ್ಠನು ವಿಜ್ಞಾನಿಯನ್ನು ದೂರವಿರಿಸಬೇಕಾದದ್ದಿಲ್ಲ; ತನ್ನ ಪಕ್ಕದಲ್ಲಿಯೇ ಕುಳ್ಳಿರಿಸಿಕೊಳ್ಳುತ್ತಾನೆ. ಪರಮಾರ್ಥದಲ್ಲಿ ಅಧ್ಯಾತ್ಮ; ವ್ಯವಹಾರದಲ್ಲಿ ವಿಜ್ಞಾನ ಹೀಗೆ ಎರಡೂ ಸಮ್ಮಿಳಿತವಾದಾಗ ಜೀವನದ ಸೊಬಗು ಮನುಷ್ಯನಿಗೆ ಸಾಧ್ಯವಿರುವಷ್ಟುಮಟ್ಟಿಗೆ ಪರಿಪೂರ್ಣವೆನಿಸುತ್ತದೆ.

ಯೂರೋಪಿನಿಂದ ಎಚ್ಚರಿಕೆ :

ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ನಮಗೆ ಹುಷಾರಿ ಕೊಡುವ ಸಂಗತಿಯೊಂದು ನಡೆದಿದೆ: ಪಾಶ್ಚಾತ್ಯ ನಾಗರಿಕತೆಯ ಮೇಲಣ ಗಿಲೀಟು ತೇದು ಹೋಗಲು ಮೊದಲಾಗಿದೆ. ಹಿಂದೆ ನಾವು ಅದರ ಮೋಹಕ್ಕೆ ಸಿಕ್ಕಿದ್ದೆವಲ್ಲವೆ? ಯೂರೋಪಿಯನ್ನರ ಆಹಾರ ವಿಹಾರಗಳ ಯಥೇಷ್ಟತೆ, ಅವರ ಸಾಮಾನುಗಳ ಥಳಥಳಕೆ, ಆ ಉಡಿಗೆ ತೊಡಿಗೆಗಳ ನುಣುಪು ನಾಜೂಕು, ಆ ಕೂಡುವ ಏಳುವ ಠೀವಿ–ಇದೆಲ್ಲ ನಮ್ಮನ್ನು ಆಕರ್ಷಿಸಿತ್ತು. ಈಗ ಆ ಥಳಥಳಿಕೆಯ ಲೇಪ ಹೆಳಕೆ ಹೆಳಕೆಯಾಗಿ ಎದ್ದುಹೋಗಿ, ಜಬ್ಬಲು ತೊಗಲು ಕಾಣಿಸುತ್ತಿದೆ. ಕೆಂದುಟಿಯ ಹಿಂದೆ ತೊಳೆಯದ ಹಲ್ಲು, ಸೆಂಟು ಹಚ್ಚಿದ ಬಟ್ಟೆಯೊಳಗಿನಿಂದ ನೀರುಕಾಣದ ಮೈಯನಾತ–ಇವು ಕಾಣಬರಲು ಮೊದಲಾಗಿದೆ. ಮತ್ತಿನ ಊಟ, ಮೃತ್ಯುವಿನ ಆಯುಧ–ಇವು ವಿಜ್ಞಾನದ ಚಮತ್ಕಾರವಾಗುತ್ತಿದೆ. ಕೊಲ್ಲು, ತಿನ್ನು; ಕೊಳ್ಳೆಹೊಡಿ, ಕೊಬ್ಬೇರು–ಇದು ದೇಶವಿದೇಶ ನೀತಿಯಾಗುತ್ತಿದೆ. ನಾಗರಿಕತೆಯ ಲೇಪನವನ್ನು ಕೆರೆದರೆ ಕಾಡುಮೃಗದ ಸ್ವಭಾವ ಕಾಣುತ್ತಿದೆ. ಸಭ್ಯತೆಯ ಮುಖ, ರಾಕ್ಷಸತೆಯ ಮನಸ್ಸು–ಇದು ಪಾಶ್ಚಾತ್ಯ ಪ್ರಗತಿ ಎನ್ನುವಂತಿದೆ. ಅದಲ್ಲ ಆತ್ಮಸಂಪತ್ತಿಗೆ ದಾರಿ.

ಹೀಗೆಂದರೆ ಪಾಶ್ಚಾತ್ಯ ನಾಗರಿಕತೆ ಸಂಪೂರ್ಣವಾಗಿ ದುಷ್ಟವೆಂದಂತೆ ಯಾರೂ ಭಾವಿಸಬಾರದು. ಅದರಲ್ಲಿ ವೀರ್ಯವತ್ತಾದ ಅಂಶಗಳು ನೂರಿವೆ. ನಮ್ಮ ಇಂದಿನ ಭಾರತೀಯ ಪದ್ಧತಿಗಳಲ್ಲಿ ಶುಷ್ಕವೂ ಅನರ್ಥಕಾರಿಯೂ ಆದ ಅಂಶಗಳು ನೂರಿವೆ. ಎರಡು ನಾಗರಿಕತೆಗಳಿಗೂ ಪುಟಶೋಧನೆ ಮಾಡಿಸಿ, ಅವುಗಳ ಸಾರಭಾಗಗಳನ್ನು ಆಯ್ದು ಹದವರಿತು ಬಳಸಿಕೊಳ್ಳುವುದು ಈಗ ನಮಗಿರುವ ಕೆಲಸ. ಮನುಷ್ಯಕೃತಿಯಲ್ಲೆಲ್ಲಿ–ಅದು ಪೂರ್ವದ್ದಾಗಲಿ, ಪಶ್ಚಿಮದ್ದಾಗಲಿ–ಮಾನವಸಹಜವಾದ ಲೋಪ ದುರ್ಬಲತೆಗಳು ಅಷ್ಟೋ ಇಷ್ಟೋ ಅಡಗಿಕೊಂಡು ಇರಲೇ ಇರುತ್ತವೆ. ಆದದ್ದರಿಂದ ಯಾವ ಜನಾಂಗವೂ ಯಾವ ಜನಾಂಗವನ್ನೂ ಪರಮಾದರ್ಶವೆಂದು ಗ್ರಹಿಸತಕ್ಕದ್ದಲ್ಲ. ಪ್ರತಿಯೊಂದು ಮಾನವ ರಚನೆಯೂ ಸ್ವತಂತ್ರ ಪರೀಕ್ಷೆ ಪರಿಶೋಧನೆಗಳಿಗೆ ಒಳಪಡಬೇಕಾದದ್ದೇ. ಆ ಸ್ವತಂತ್ರ ವಿವೇಕವೇ ನಮಗಿರುವ ಕರ್ತವ್ಯ.

ಅಧ್ಯಾತ್ಮಲೋಕವು ಪ್ರತ್ಯಕ್ಷವಾದದ್ದಲ್ಲವೆಂಬ ಕಾರಣದಿಂದ ಅದು ಸುಳ್ಳೆಂದು ಯಾರೂ ವಾದಿಸಲಾರರು. ನಮ್ಮ ಇಂದ್ರಿಯಗಳ ಅಧಿಕಾರ ಬಹು ಮಿತವಾದದ್ದೆಂಬುದು ಎಲ್ಲರಿಗೂ ತಿಳಿದ ಸಂಗತಿ. ಕಣ್ಣು ವಾಸನೆಯನ್ನು ಮೂಸಬಾರದು; ಕಿವಿ ರೂಪವನ್ನು ಕಾಣಲಾರದು; ಮೂಗು ಶಬ್ದವನ್ನು ಕೇಳಲಾರದು. ಒಂದೊಂದು ಇಂದ್ರಿಯಕ್ಕೆ ಒಂದೊಂದೇ ಶಕ್ತಿ. ಕಣ್ಣಿನ ಪಾಲಿಗೆ ಇಲ್ಲದ್ದು ಮೂಗಿಗೆ ಇರುತ್ತದೆ. ಮೂಗಿಗೆ ಸುಳ್ಳೆನಿಸಿದ್ದು ಕಿವಿಗೆ ದಿಟವಾಗುತ್ತದೆ; ಕಿವಿ ಕಾಣೆನೆನ್ನುವುದನ್ನು ಕಣ್ಣು ನೋಡುತ್ತದೆ. ಒಂದು ಇಂದ್ರಿಯಕ್ಕೆ ಅಪ್ರತ್ಯಕ್ಷವಾದದ್ದು ಇನ್ನೊಂದಕ್ಕೆ ಪ್ರತ್ಯಕ್ಷ. ಇಂದ್ರಿಯಗಳ ಶಕ್ತಿಯ ವ್ಯಾಪನೆಯೂ ಕೊಂಚಮಾತ್ರದ್ದೇ. ಒಬ್ಬನ ಕಣ್ಣು ಎರಡು ಫರ್ಲಾಂಗಿನಾಚೆ ಇರುವುದನ್ನು ಗುರುತಿಸೀತು; ಇನ್ನೊಬ್ಬನದು ಎರಡು ಗಜದಿಂದಾಚೆಗೆ ಹೋಗಲಾರದು. ಒಂದು ಮೈಲಿಯಾಚೆಗೆ ಯಾವ ಮನುಷ್ಯನ ಬರಿಯ ಕಣ್ಣೂ ಓಡಲಾರದು. ಕಿವಿಯ

ಶಕ್ತಿಯೂ ಹಾಗೆಯೇ. ಒಬ್ಬನಿಗೆ ಆನಂದಾವೇಶವನ್ನುಂಟುಮಾಡುವ ಸಂಗೀತ ಇನ್ನೊಬ್ಬನಿಗೆ ಬೇಸರದ ಗೊಂಯ್ ಗೊಂಯ್ ಆಗುತ್ತದೆ; ಯಾರ ಬರಿ ಕಿವಿಯೂ ನಾಲ್ಕಾರು ಮೈಲಿಯಾಚಿನ ಸದ್ದನ್ನು ಹಿಡಿಯಲಾರದು. ಹೀಗೆ ಒಬ್ಬನ ಇಂದ್ರಿಯಕ್ಕೆ ನಿಜವಾದದ್ದು ಇನ್ನೊಬ್ಬನ ಇಂದ್ರಿಯಕ್ಕೆ ಸುಳ್ಳೆಂದು ತೋರುತ್ತದೆ. ಒಬ್ಬನ ಸಿಹಿ ಇನ್ನೊಬ್ಬನಿಗೆ ಕಹಿ. ನಮ್ಮ ಇಂದ್ರಿಯಗಳ ಅಧಿಕಾರ ಹೀಗೆ ಪರಿಮಿತವೂ ವ್ಯಷ್ಟಿಗತವೂ ಆಗಿರುವಾಗ, ಅದು ಹಿಡಿಯಲಾಗದ ವಸ್ತು ಒಂದೂ ಇಲ್ಲವೆಂದು–ಇರಲಾರವೆಂದು–ಯಾರು ತಾನೆ ವಾದಿಸಬಹುದು? ಈ ಕಾರಣದಿಂದಲೇ ನಮ್ಮ ಪೂರ್ವಿಕರು ದೇವರೆಂಬುದೂ ಆತ್ಮವೆಂಬುದೂ ಅತೀಂದ್ರಿಯ ವಸ್ತುವೆಂದೂ ಹಾಗೆ ಅದು ನಮ್ಮ ಪರೀಕ್ಷೆಗೂ ರುಜುವಾತಿಗೂ ಸಿಕ್ಕಲಾರದ್ದಾದ ಕಾರಣ ವೇದಗಳೇ ಅಲ್ಲಿ ನಮಗೆ ಪ್ರಮಾಣವೆಂದು ನಂಬಿದ್ದದ್ದು. ನಮ್ಮ ಇಂದ್ರಿಯಗಳಿಗಿಂತ ಮೇಲಾದ ಒಂದು ಅಂತರ್ದೃಷ್ಟಿಯನ್ನು ಪಡೆದಿದ್ದ ಮಹರ್ಷಿಗಳೆಂಬ ಮಹಾಪುರುಷರ ಅನುಭವ ವಾಕ್ಯಗಳೇ ವೇದ.

ಸಾರ್ವಜನಿಕ ಸೇವೆ :

ದೇವಸ್ವರೂಪವೂ ಆತ್ಮಸ್ವರೂಪವೂ ಅನುಭವದಿಂದಲೇ ರುಜುವಾತಾಗತಕ್ಕದ್ದು. ಈ ಅನುಭವವಾದರೋ, ಅಂತರ್ದೃಷ್ಟಿಯಿಂದಲೇ ಲಭಿಸತಕ್ಕದ್ದು. ಆ ಅಂತರ್ದೃಷ್ಟಿಯಾದರೋ, ಬುದ್ಧಿಮನಸ್ಸುಗಳ ಪರಿಪಾಕದಿಂದಲೇ ಸಿದ್ಧಿಸತಕ್ಕದ್ದು. ಬುದ್ಧಿಯ ವಿಚಾರದ ಬೆಳಕೂ, ಹೃದಯದ ರಸರಾಗದ ಬೆಳಕೂ ಸೇರಿದಾಗ ಮೂರನೆಯ ಬೆಳಕೊಂದು ಹುಟ್ಟುತ್ತದೆ. ಈ ಜ್ಯೋತಿಯೇ ದಿವ್ಯ ತತ್ತ್ವದರ್ಶನಕ್ಕೆ ಸಾಧಕವಾದ ಅಂತರ್ದೃಷ್ಟಿ. ಕೇವಲ ಬುದ್ಧಿಯ ಬೆಳಕನ್ನು ಶಾಸ್ತ್ರವ್ಯಾಸಂಗದಿಂದ ಸಂಪಾದಿಸಲಾದೀತು. ಹೃದಯದ ಬೆಳಕನ್ನು ಲೋಕಜೀವನ ಸಂಪರ್ಕದಿಂದ ಸಂಪಾದಿಸಬೇಕೇ ಹೊರತು ಮೂಗು ಹಿಡಿದು ಕೂಡುವುದರಿಂದಲ್ಲ. ಲೋಕಕಷ್ಟದಲ್ಲಿ ಸಹಾನುಭೂತಿಯನ್ನು ಅಭ್ಯಾಸ ಮಾಡಬೇಕು. ಅದರ ಭಾರಗಳನ್ನು ಹೊರುವುದರಲ್ಲಿ ಭಾಗವಹಿಸಬೇಕು. ಅದಕ್ಕಾಗಿ ದುಡಿಯುವುದರಲ್ಲಿ ತನ್ನ ಸಣ್ಣತನವನ್ನು ಸವೆಯಿಸಿ, ತನ್ನ ಆತ್ಮವನ್ನು ವಿಸ್ತಾರಪಡಿಸಿಕೊಳ್ಳಬೇಕು. ಲೋಕಸಂಪರ್ಕದಿಂದಲೇ ಅಂತರ್ದೃಷ್ಟಿಗೆ ಸಾಧಕವಾದ ಅಂತರಂಗ ಸಂಸ್ಕಾರ.

> "ದೇವರೇ ನಮ್ಮ ತಂದೆ;
> ನಾವೆಲ್ಲ ಒಂದೆ."

–ಎಂದು ಹಾಡುವುದುಸುಲಭ. ಅದರ ಅರ್ಥ ನಮ್ಮ ಬದುಕಿನಲ್ಲಿ ಕಾಣಬರಬೇಕಾದರೆ, ಬಂಧುಬಳಗದ ಸಣ್ಣಪುಟ್ಟ ಮಮತೆಗಳಿಗೂ ಸ್ವಾರ್ಥಲಾಭದ ಆಶೆಗೂ ಅವಕಾಶ ಕೊಡದಿರುವ ಯಾವುದಾದರೊಂದು ಸಾರ್ವಜನಿಕ ಕಾರ್ಯದಲ್ಲಿ ನಾವು ಸೇರಿ ಭಾಗವಹಿಸಿಕೊಳ್ಳಬೇಕು.ಆ ಕಾರ್ಯಕ್ಕೆ ನಮ್ಮನ್ನು ಇನ್ನಾರಾದರೂ ಕರೆಯಲಿ ಎಂದು ಕಾದಿರಬಾರದು; ನಾವಾಗಿ ಅಂಥಾ ಕೆಲಸವನ್ನು ಹುಡುಕಿಕೊಂಡು ಹೋಗಿ ಆದಷ್ಟುಮಟ್ಟಿಗೆ ಮಾಡಬೇಕು. ಅದೇ ಆತ್ಮ ದೊಡ್ಡದಾಗುವ ದಾರಿ. ನಾವು ಸಣ್ಣ ಸಣ್ಣ ತಾಪತ್ರಯಗಳ ಸೆರೆಗೆ ಬಂದಿಯಾಗದೆ, ಅವುಗಳ ಹಿಡಿತದಿಂದ ಅಷ್ಟಿಷ್ಟಾದರೂ ತಪ್ಪಿಸಿಕೊಳ್ಳುವುದಕ್ಕೂ ಅದೇ ದಾರಿ.

ನಮ್ಮ ದೇಶದಲ್ಲಿ ಸಾರ್ವಜನಿಕ ಕಾರ್ಯಕ್ಕೆ ಮುಖ್ಯವಾಗಿ ಎರಡು ಬಗೆಯ ಅವಕಾಶಗಳಿವೆ:(೧) ರಾಜಕೀಯ, (೨) ಸಾಮಾಜಿಕ.

- ರಾಜಕೀಯವೆಂದರೆ, ನಮ್ಮ ರಾಷ್ಟ್ರದ ಹಿತಕ್ಕಾಗಿ ಆಗಬೇಕಾದ ಸಾವಿರಾರು ಕೆಲಸಗಳು. ಹಾಗೆಂದರೆ, ನಮ್ಮ ಕೂಡ ಬಾಳುವ ಪ್ರಜೆಗಳ ಕ್ಷೇಮ ಸೌಖ್ಯಗಳ ವಿಚಾರ. ಈ ವಿಷಯದಲ್ಲಿ ಪ್ರತಿಯೊಬ್ಬ ಪ್ರಬುದ್ಧ ಮನುಷ್ಯನಿಗೂ ಒಂದಿಷ್ಟು ಜವಾಬ್ದಾರಿಯಿರುತ್ತದೆ. ಅದೇ ರಾಷ್ಟ್ರಕ ಪ್ರಜಾ ಧರ್ಮ. ರಾಷ್ಟ್ರಕ ಎಂದರೆ ರಾಷ್ಟ್ರಜೀವನದಲ್ಲಿ–ತನ್ನ ದೇಶದ ಸರಕಾರಕ್ಕೆ ಸಂಬಂಧಪಟ್ಟ ಕಾರ್ಯಗಳಲ್ಲಿ–ಭಾಗವಹಿಸುವ ಜವಾಬ್ದಾರಿಗೆ ಅರ್ಹನಾಗಿರುವ ಪ್ರಜೆ. ಅಂಥವನನ್ನು ಇಂಗ್ಲಿಷಿನಲ್ಲಿ "ಸಿಟಿಸೆನ್" (Citizen) ಎನ್ನುತ್ತಾರೆ.
  ರಾಷ್ಟ್ರಕನ ಕರ್ತವ್ಯಗಳು ಮುಖ್ಯವಾಗಿ ಎರಡು ತೆರದುವು: (೧) ರಾಜ್ಯದ ಕಾನೂನು ಕಟ್ಟುಪಾಡುಗಳಿಗೆ ವಿಧೇಯನಾಗಿ ನಡೆದುಕೊಳ್ಳುವುದು, (೨) ಆ ಕಾನೂನು ಕಟ್ಟುಪಾಡುಗಳೂ ಸರಕಾರದ ಆಡಳಿತಗಳೂ ದಾರಿತಪ್ಪದೆ ಸರಿಯಾಗಿ, ದೇಶೋಪಕಾರಕವಾಗಿ ನಡೆಯುವಂತೆ ಅವುಗಳನ್ನು ಪದೇಪದೇ ಪರೀಕ್ಷಿಸುತ್ತ, ವಿಮರ್ಶೆ ಮಾಡುತ್ತ, ತನ್ನ ಅಭಿಪ್ರಾಯವನ್ನು ಪ್ರಕಟಪಡಿಸುತ್ತಿರುವುದು. ಪ್ರಾಮಾಣಿಕ ವಿಧೇಯತೆ, ಸ್ವತಂತ್ರ ವಿಮರ್ಶನೆ–ಇವೆರಡು ರಾಷ್ಟ್ರಕ ಪ್ರಜಾಧರ್ಮದ ಮುಖ್ಯಾಂಗಗಳು.
  ವಿಧೇಯತೆಯನ್ನೇನೋ ನಮ್ಮ ಜನ ಬಹುಮಟ್ಟಿಗೆ ಸಲ್ಲಿಸುತ್ತಾರೆ. ಆದರೆ, ಇದು ಬಹುಕಾಲದ ಅಭ್ಯಾಸದ್ದು, ಬುದ್ಧಿಪೂರ್ವಕವಾದದ್ದಲ್ಲ. ಅದು ಕುರುಡು ವಿಧೇಯತೆಯೇ ಹೊರತು ಸ್ವಂತ ಆಲೋಚನೆಯ ಫಲಿತಾಂಶವಲ್ಲ. ನಮ್ಮ ವಿಧೇಯತೆಯು ನಮ್ಮ ವಿವೇಕದಿಂದ ಬಂದದ್ದಾಗಿರಬೇಕು. ಸರಕಾರವೂ ಶಾಸನ ಸಭೆಯೂ ರಚಿಸುವ ಕಾನೂನು ಕಟ್ಟಲೆಗಳ ಅಭಿಪ್ರಾಯವೇನು, ಕಾರಣವೇನು–ಎಂಬುದನ್ನು ನಾವು ಚೆನ್ನಾಗಿ ವಿಚಾರಿಸಿ, ತಿಳಿದುಕೊಂಡು, ಅರ್ಥಜ್ಞಾನಸಹಿತನಾಗಿ ಆ ಶಾಸನ ವಿಧಿಗಳನ್ನು ಅನುಸರಿಸಿದರೆ ಅದು ಪ್ರಯೋಜನಕರವಾದ ವಿಧೇಯತೆ.
  ರಾಜಕೀಯದ ವಿಮರ್ಶೆಯ ಕರ್ತವ್ಯಭಾಗದಲ್ಲಿ ನಾವು ಇನ್ನೂ ಬಹು ಹಿಂದೆ ಇದ್ದೇವೆ. ವಿಮರ್ಶನವೆಂದರೆ ಕೋಪದ ಕೂಗಾಟವಲ್ಲ. ಅದಕ್ಕೆ ಜ್ಞಾನದ ಆಧಾರವಿರಬೇಕು; ಮತ್ತು ಅದರಲ್ಲಿ ಪಕ್ಷ ಕಕ್ಷಿಗಳ ರೋಷಗಳೂ ಅಸೂಯೆಗಳೂ ಇರಬಾರದು. ಇಂದಿನ ಸುಸಂಸ್ಕೃತ ರಾಜ್ಯಗಳಲ್ಲಿ ಶಾಸನ (ಕಾನೂನು ಕಾಯಿದೆ) ರಚನೆಯ ಕಾರ್ಯವು ಸಾಮಾನ್ಯವಾಗಿ ಪ್ರಜಾಪ್ರತಿನಿಧಿ ಸಭೆಗಳ ಮೂಲಕ ನಡೆಯುತ್ತದೆ. ಪ್ರಜಾಪ್ರತಿನಿಧಿಗಳನ್ನು ಆರಿಸುವ ಕೆಲಸವೂ, ಅವರು ತಮ್ಮ ಕರ್ತವ್ಯಗಳನ್ನು ತೃಪ್ತಿಕರವಾಗಿ ನಡೆಸುವಂತೆ ಉಸ್ತುವಾರಿ ನೋಡುವ ಕೆಲಸವೂ ಅತಿ ಮುಖ್ಯವಾದವು. ಗ್ರಾಮ ಪಂಚಾಯತಿ, ಮ್ಯುನಿಸಿಪಾಲಿಟಿ, ರಾಜ್ಯ ಶಾಸನಸಭೆ ಮುಂತಾದ ಸಂಸ್ಥೆಗಳಿಗೆ ಯೋಗ್ಯರೂ ಸಮರ್ಥರೂ ಆದ ಜನರನ್ನು ಚುನಾವಣೆ ಮಾಡುವುದು ದೊಡ್ಡ ಜವಾಬ್ದಾರಿ. ಅದಕ್ಕೆ ಆಳವಾದ ತಿಳಿವಳಿಕೆಯೂ ಪಕ್ಷಪಾತವಿಲ್ಲದ ನ್ಯಾಯ ದೃಷ್ಟಿಯೂ ಅವಶ್ಯ. ಇಂಥಾ ತಿಳಿವಳಿಕೆಯನ್ನು ಸಂಪಾದಿಸುವುದೂ, ನಿರ್ದಾಕ್ಷಿಣ್ಯವಾಗಿ ವಿಚಾರಮಾಡುವುದೂ ಪ್ರತಿಯೊಬ್ಬ ರಾಷ್ಟ್ರಕನಿಗೂ ಧರ್ಮವಾಗಿರುತ್ತದೆ. ಈ ವಿಷಯದಲ್ಲಿ ಈಗ ನಮ್ಮ ಜನದ ಪದ್ಧತಿ ಸರಿಯಾಗಿದೆಯೆಂದು ಹೇಳುವಹಾಗಿಲ್ಲ. ಚುನಾವಣೆ ಮುಗಿದ ಮೇಲಂತೂ ಜನರಿಗೆ ತಮ್ಮ ಪ್ರತಿನಿಧಿಗಳ ಮೇಲೆ ಉಸ್ತುವಾರಿ ಎಷ್ಟು ಮಾತ್ರವೂ ಇಲ್ಲ. ಪ್ರತಿನಿಧಿಗಳ ನಡವಳಿಕೆಗಳನ್ನೂ, ಪ್ರಜಾಪ್ರಮುಖರ ಮತ್ತು ವೃತ್ತಪತ್ರಿಕೆಗಳ ಟೀಕೆ ತರ್ಕಗಳನ್ನೂ ಆಗಿಂದಾಗ್ಗೆ ವಿಮರ್ಶೆ ಮಾಡುವುದೂ, ಅವರಿಗೆ ಸಲಹೆ ಕೊಡುವುದೂ ಪ್ರಜಾಧರ್ಮದ ಮೂಲಾಂಶಗಳು. ಈ ಮೂಲ ಕಾರ್ಯಗಳು ಸರಿಯಾಗಿ

ನಡೆಯದಿದ್ದರೆ ಪ್ರಜಾವಾಕ್ಯವೆಂಬುದು ಬಲವಿಲ್ಲದೆ ಹೋಗುತ್ತದೆ. ನಮ್ಮ ದೇಶದಲ್ಲಿ ಈಗ ಹೊಸ ಶಕ್ತಿಯಾಗಬೇಕಾಗಿರುವ ಜನಾಭಿಪ್ರಾಯವೆಂಬುದು ಬರಿಯ ಹೆಸರಾಗಿ, ಸಾರ್ಥಕವಾಗದೆ ಹೋಗುತ್ತಿದೆ. ಆದದ್ದರಿಂದ ಪ್ರತಿಯೊಬ್ಬ ಪ್ರಜೆಯೂ ಜಾಗರೂಕತೆಯಿಂದ ರಾಜಕೀಯಕ್ಕೆ ಗಮನಕೊಡಬೇಕು.

- ಸಾಮಾಜಿಕ ಕ್ಷೇತ್ರದಲ್ಲಿಯೂ ಬೇಕಾದಷ್ಟು ಕೆಲಸವಿದೆ. ಪ್ರತಿಯೊಂದು ಊರಿನಲ್ಲಿಯೂ ಸಾಮಾನ್ಯವಾಗಿ ಒಂದೆರಡು ಸಾರ್ವಜನಿಕ ಸಂಸ್ಥೆಗಳು ಇರುತ್ತವೆ. ಮ್ಯುನಿಸಿಪಾಲಿಟಿ ಪಂಚಾಯತಿಗಳ ಜೊತೆಗೆ ದೇವಾಲಯ, ವಾಚನಾಲಯ, ಪುಸ್ತಕ ಭಂಡಾರ, ವ್ಯಾಯಾಮಶಾಲೆ, ಪೌರಸಂಘ, ವಿದ್ಯಾಪ್ರಚಾರ ಸಂಘ, ಕರ್ಣಾಟಕ ಸಂಘ, ನಾಟಕ ಸಂಘ, ಹರಿಜನೋದ್ಧಾರ ಸಂಘ, ಅಶಕ್ತಪೋಷಕ ಸಂಘ, ಸಹಕಾರ ಸಂಘ, ಗ್ರಾಮ ಶುದ್ಧಿ ಸಂಘ, –ಇಂಥ ಸಂಸ್ಥೆಗಳು ಎಲ್ಲ ಊರುಗಳಲ್ಲಿಯೂ ಇರಬಹುದಾದವು, ಅವನ್ನು ಕಟ್ಟುವುದೂ ಸದಸ್ಯನಾಗಿ ಸೇರಿ ಬೆಳೆಸುವುದೂ ಪ್ರತಿಯೊಬ್ಬನ ಕರ್ತವ್ಯ. ಅದರಿಂದ ಊರಿನ ಕಳೆಯೇರುತ್ತದೆ. ಅವನ ಬದುಕು ವಿಶಾಲವಾಗುತ್ತದೆ. ಹಾಗೆ ತನ್ನ ಊರಿನ ಜನದ ಜೊತೆಯಲ್ಲಿ ಮಿಳಿತನಾಗಿ, ನಾನಾ ಮನುಷ್ಯ ಸ್ವಭಾವಗಳನ್ನು ಮನದಟ್ಟುಮಾಡಿಕೊಂಡು, ತನ್ನ ಸ್ವಂತ ತತ್ತ್ವಧ್ಯೇಯಗಳನ್ನು ಬಿಡದೆ, ತನ್ನ ಸ್ವಭಾವವನ್ನು ಸಂಘಕ್ಕೆ ಒಗ್ಗಿಸಿಕೊಳ್ಳುತ್ತ, ತನ್ನನ್ನು ತಾನೇ ತಿದ್ದಿಕೊಳ್ಳುತ್ತ, ತನ್ನ ಮನಸ್ಸನ್ನು ತಾನೇ ವಿಸ್ತಾರಪಡಿಸಿಕೊಳ್ಳುತ್ತ ಇದ್ದರಲ್ಲವೆ ಆತ್ಮ ಬೆಳೆಯುವುದು? ಸಾರ್ವಜನಿಕ ಕಾರ್ಯವೇ, –ಅನುದಿನದ ಲೋಕಕ್ಷೇಮಕ್ಕೆ ಸೇರಿದ ಕಾರ್ಯವೇ, –ಹೃದಯವಿಕಾಸಕ್ಕೆ ಉತ್ತಮೋತ್ತಮ ಪಾಠಶಾಲೆ, ಅಲ್ಲಿರುವ ಆತ್ಮಶೋಧನೆಯ ಪ್ರೇರಣೆಯೂ ಅಲ್ಲಿಯ ಆತ್ಮವಿಸ್ತಾರದ ಅವಕಾಶವೂ ಮತ್ತೆಲ್ಲಿಯೂ ದೊರೆಯವು. ಇಂಡಿಯಾದೇಶಕ್ಕೆ ಈಗ ಆಗಬೇಕಾಗಿರುವ ಹೊಸ ಮತಾಚಾರವೆಂದರೆ–ಈ ಸಾರ್ವಜನಿಕ ಕಾರ್ಯಾಭ್ಯಾಸ.

ಗ್ರಾಮೋಧ್ಧಾರ–ಭೂವ್ಯವಸಾಯ :

ನಮ್ಮ ಹಳ್ಳಿಗಳು ಹೇಗೆ ಹಾಳಾಗುತ್ತಿವೆಯೆಂಬುದನ್ನು ಕುರಿತು ಹಿಂದೆ ಹೇಳಿದ್ದಾಗಿದೆ. ಪಟ್ಟಣದ ಆಕರ್ಷಣೆಯಿಂದ ಹಳ್ಳಿ ಬಡವಾಗುತ್ತಿದೆ. ಹೊಸ ರಾಜಕೀಯದಿಂದ ಗ್ರಾಮದ ಕಟ್ಟು ಒಡೆಯುತ್ತಿದೆ. ಕೈಗಂಟು ಸಂಬಳದ ಆಶೆಯಿಂದ ಕಾರ್ಖಾನೆಯ ಕೂಲಿಗೂ ಕಛೇರಿಯ ಚಾಕರಿಗೂ ಹಳ್ಳಿಗಳಿಂದ ಜನ ಮುನ್ನುಗ್ಗಿ ಬರುತ್ತಿದ್ದಾರೆ. ಚುನಾವಣೆಯ ಪೈಪೋಟಿಯಿಂದ ಹಳ್ಳಿಗಳಲ್ಲಿ ಕಕ್ಷಿಗಳೂ ಕೃತ್ರಿಮಗಳೂ ಹರಡುತ್ತಿವೆ. ಜಮೀನಿನ ಕಡೆಗೆ ಗಮನ ಕಡಮೆಯಾಗುತ್ತಿದೆ. ನಾವು ಅಕ್ಕಿಯನ್ನೂ ಗೋಧಿಯನ್ನೂ ರಷ್ಯ ಅಮೆರಿಕಗಳಿಂದ ಬೇಡಿ ತಂದುಕೊಳ್ಳಬೇಕಾದ ಕಾಲ ಬಂದಿದೆ. ನಮ್ಮ ಹಳ್ಳಿಗಳಲ್ಲಿ ರಾಜಕೀಯವನ್ನು ಇಷ್ಟು ಅತಿಯಾಗಿ ತುಂಬುವುದು ಅವಶ್ಯವೆ? ಅದು ಜನತೆಗೆ ಒಳ್ಳೆಯದೆ? ಚುನಾವಣೆಗಳ ಗೊಂದಲವನ್ನೂ ಒಂದು ಹದ್ದಿನಲ್ಲಿರಿಸಲಿಕ್ಕಾಗದೆ? ಇವು ಮೂಲ ಪ್ರಶ್ನೆಗಳು. ಅಷ್ಟಿಷ್ಟು ರಾಜಕೀಯ ಅನಿವಾರ್ಯವೆಂದಿಟ್ಟುಕೊಂಡರೂ, ಅದರ ವಿಷವನ್ನು ಪರಿಹಾರಮಾಡಲು ಪ್ರತಿಕ್ರಿಯೆಗಳನ್ನಾದರೂ ಕಂಡುಹಿಡಿಯಬೇಡವೆ? ಭೂವ್ಯವಸಾಯವು ಜನತೆಗೆ ಒಗ್ಗಟ್ಟನ್ನು ಕಲಿಸುವ ವೃತ್ತಿ. ಜನರಲ್ಲಿ ಸ್ನೇಹ ಸಹಕಾರವಿಲ್ಲದೆ ಭೂವ್ಯವಸಾಯ ಒಂದು ದಿವಸವೂ ಸಾಗಲಾರದು. ಉಳುಮೆಗೆ, ಬಿತ್ತನೆಗೆ, ಕಳೆ ಕೀಳುವುದಕ್ಕೆ, ಕಾವಲಿರುವುದಕ್ಕೆ –ಈ ಎಲ್ಲ ಕೆಲಸಗಳಿಗೂ ನಾಲ್ಕು ಮಂದಿ ಸೇರಬೇಕು. ಬೇಸಾಯ

ಒಬ್ಬಂಟಿಯ ಕೆಲಸವಲ್ಲ. ನೇಗಿಲು, ಗುಂಟೆ, ಜಲ್ಲಡಿ, ಹಗ್ಗ, ಹುರಿ, ಈ ಬಗೆಬಗೆಯ ಸಾಮಾನುಗಳು ಎರವಲಾಗುತ್ತಲೇ ಇರಬೇಕು. ದನಕರು ಕೂಡ ಹಾಗೆಯೇ. ಹೀಗೆ ಕೃಷಿ ಎಂದರೆ ನಾಲ್ಕಾರು ಮನೆಗಳ ಒಟ್ಟು ಬದುಕು. ಅದೇ ಅದರ ಸೊಗಸು. ಅದರಿಂದಲೇ ಮನುಷ್ಯತ್ವ. ಯಂತ್ರ ಕಾರ್ಖಾನೆ ಈ ಮನುಷ್ಯತ್ವವನ್ನು ಹೋಗಲಾಡಿಸುತ್ತದೆ. ರಾಜಕೀಯದ ಕಾನೂನೂ ಚುನಾವಣೆಯೂ ಮಾನವ ಬಾಂಧವ್ಯವನ್ನು ತೊಡೆದುಹಾಕುತ್ತವೆ. ನಾವು ಯಾವ ಯಾವ ದೇಶವನ್ನೋ ಅನುಕರಣೆ ಮಾಡಿಕೊಂಡು ನಮ್ಮ ನೆಮ್ಮದಿಯನ್ನು ನೀಗಿಕೊಳ್ಳುತ್ತಿದ್ದೇವೆ. ಇದು ನಿಲ್ಲಬೇಕು. ಅದಕ್ಕಾಗಿ ನಮ್ಮ ವಿದ್ಯಾವಂತ ಜನರು ಮಾಡಬೇಕಾದ ಕಾರ್ಯ ದೊಡ್ಡದಾಗಿ ಕಾದಿದೆ. ಅದರಲ್ಲಿಯೂ ಪಿಂಛನ್‌ದಾರರೂ ಪ್ರಾಯಸ್ತರೂ ಈ ಕರ್ತವ್ಯವನ್ನು ಅಂಗೀಕರಿಸಿಕೊಳ್ಳುವುದು ಬಹುಮುಖ್ಯವಾಗಿದೆ. ಅಂಥವರಲ್ಲಿ ಯಾರ್ಯಾರಿಗೆ ಮನೆ ಹೊಲ ತೋಟಗಳ ಅನುಕೂಲತೆ ತಕ್ಕಮಟ್ಟಿಗಾದರೂ ಉಂಟೋ ಅವರು ಹಳ್ಳಿಗಳಲ್ಲಿಯೇ ನೆಲಸಲು ಮನಸ್ಸು ಮಾಡಬೇಕು. ಅವರು ತಮ್ಮ ಒಳ್ಳೆಯ ಜೀವನ ಕ್ರಮದಿಂದ ಹಳ್ಳಿಗರ ಮನಸ್ಸುಗಳನ್ನು ತಿರುಗಿಸಿಕೊಳ್ಳಲಾಗುತ್ತದೆ. ಒಂದು ದೊಡ್ಡ ಸಾಮೂಹಿಕ ಪ್ರಯತ್ನ, ಒಂದು ಉತ್ಸವ, ಒಂದು ಸಮಾಜ ಕೇಂದ್ರ–ಇವು ಜನದಲ್ಲಿ ಸಣ್ಣ ಸಣ್ಣ ಚಿಂತೆಗಳನ್ನೂ ಸಣ್ಣತನಗಳನ್ನೂ ಮರೆಯಿಸಿ ಮನಸ್ಸನ್ನು ಮೇಲ್ಮಟ್ಟಕ್ಕೆತ್ತುತ್ತವೆ. ಸಾಮಾನ್ಯವಾಗಿ ಹಳ್ಳಿಹಳ್ಳಿಯಲ್ಲಿಯೂ ಒಂದು ಗುಡಿಯಿರುತ್ತದೆ. ಅದನ್ನು ಸುಲಭವಾಗಿ ಕೇಂದ್ರಸ್ಥಾನವನ್ನಾಗಿ ಮಾಡಿ ಅದರ ಸುತ್ತಮುತ್ತ ಪುರಾಣ, ಹರಿಕಥೆ, ಉಪನ್ಯಾಸ ಮುಂತಾದ ಉತ್ಸವ ಕಾರ್ಯಗಳನ್ನೇರ್ಪಡಿಸಿ, ಊರಿನ ಉತ್ಸಾಹವನ್ನು ಬೆಳಗಿಸಬಹುದು: ಅಂಥಾದ್ದರಲ್ಲಿ ಸೇರಲು ಗ್ರಾಮಸ್ಥರು ತಾವಾಗಿ ಮುಂದೆ ಬರುತ್ತಾರೆ. ಇದರಿಂದ ಹಳ್ಳಿಗಾಡಿನ ಬೇಸರ ಕಳೆದುಹೋಗುತ್ತದೆ. ಹಳ್ಳಿಯಲ್ಲಿ ಒಂದು ಕಾಂತಿಯೂ ಒಂದು ಆಕರ್ಷಣೆಯೂ ಉಂಟಾಗುತ್ತದೆ. ಈಗ ರೈಲು, ಮೋಟಾರು, ಬಸ್ಸು ಮುಂತಾದ ವಾಹನ ಸೌಕರ್ಯಗಳು ಹೆಚ್ಚುತ್ತಿರುವುದರಿಂದ ಪಟ್ಟಣದಲ್ಲಿರುವ ಸೊಗಸು ಸೌಲಭ್ಯಗಳನ್ನು ಹಳ್ಳಿಗಳಿಗೆ ತಂದುಕೊಳ್ಳುವುದು ಕಷ್ಟವಲ್ಲ. ಅದಕ್ಕೆ ಬೇಕಾದದ್ದು ಮೊದಲು ವಿದ್ಯಾವಂತರ ಪ್ರಯತ್ನ, ಸರಕಾರ ಮಾಡಬೇಕಾದದ್ದೂ ಅಪಾರವಾಗಿದೆ. ಅದನ್ನು ಸರಕಾರದಿಂದ ಮಾಡಿಸುವುದಕ್ಕೆ ಕೂಡ ಶ್ರಮಪಡಬೇಕಾದವರು ವಿದ್ಯಾವಂತರು. ನಮ್ಮ ದೇಶಕ್ಕೆ ಈಗ ಆಗಬೇಕಾಗಿರುವ ಸೇವೆಗಳಲ್ಲೆಲ್ಲ ಮೊಟ್ಟಮೊದಲನೆಯದೆಂದರೆ ಗ್ರಾಮಾಭಿವೃದ್ಧಿ. ಗ್ರಾಮಾಭಿವೃದ್ಧಿಯೆಂದರೆ ಹಳ್ಳಿಯಲ್ಲಿ ವಾಸವಿರುವ ಜನದ ಸಂಖ್ಯೆ, ಅವರ ಆರೋಗ್ಯ, ಅವರ ದೇಹಪುಷ್ಟಿ, ಅವರ ಮನೆ ಬೀದಿಗಳ ಚೊಕ್ಕಟ, ಅವರ ದನಕರುಗಳ ಬೆಳವಣಿಗೆ, ಅವರ ಕೆರೆ ಕುಂಟೆಗಳ ದುರಸ್ತು, ಅವರ ಮಕ್ಕಳಿಗೆ ಪಾಠಶಾಲೆ, ಅವರಿಗೆ ವೈದ್ಯಸಹಾಯ, ಎಲ್ಲಕ್ಕಿಂತ ಮೇಲಾಗಿ ಅವರ ಜಮೀನುಗಳು ಉಳುಮೆ, ಬೆಳೆ ಹುಲುಸು. ಹಳ್ಳಿಗಳಿಂದ ಪಟ್ಟಣಗಳಿಗೆ ಆಗುತ್ತಿರುವ ಜನದ ವರ್ಗಾವಣೆ ನಿಲ್ಲಬೇಕು. ದೇಹದಾರ್ಢ್ಯವುಳ್ಳವರೂ ಸಮರ್ಥರೂ ಹಳ್ಳಿಗಳಲ್ಲಿ ನೆಲಸಿ ನಿಂತು, ತಮ್ಮ ಬಲವನ್ನೂ ಜಾಣ್ಮೆಯನ್ನೂ ಹೊಸ ಗದ್ದೆ ತೋಟಗಳಿಗೆ ವಿನಿಯೋಗಿಸಬೇಕು. ಅದು ಹಾಗಾಗುವಂತೆ ಮಾಡಲು ಹಳ್ಳಿಗಳಲ್ಲಿ ಉತ್ಸಾಹ ಸಂಭ್ರಮಗಳನ್ನು ತುಂಬಬೇಕು. ಒಳ್ಳೆಯ ಸಾಮಾಜಿಕವೇ ಕೆಟ್ಟ ರಾಜಕೀಯಕ್ಕೆ ಮದ್ದು. ಗ್ರಾಮಯೋಗಕ್ಷೇಮವು ಸಮಾಜ ಸೇವೆಯಲ್ಲಿ ಮುಖ್ಯಾಂಶವಾಗಬೇಕು.

ದೇಶಋಣ :

ಇಂಗ್ಲೆಂಡಿನ ಒಬ್ಬ ಸಾಮಾನ್ಯ ಮನುಷ್ಯನಿಗೂ ನಮ್ಮ ದೇಶದವನಿಗೂ ಇರುವ ವ್ಯತ್ಯಾಸಗಳಲ್ಲಿ ಒಂದು ಮುಖ್ಯವಾದ ಅಂಶ ಅವನವನ ದೇಶ ಋಣ ಸ್ಮರಣೆಗೆ ಸಂಬಂಧಪಟ್ಟದ್ದು. ಇಂಗ್ಲೆಂಡಿನವನು ತನ್ನ

ದೇಶದಿಂದ ತನಗೆ ಅನೇಕ ಉಪಕಾರಗಳು ಆಗಿಯೂ ಇನ್ನೂ ಆಗತಕ್ಕವಾಗಿಯೂ ಇವೆಯೆಂಬುದನ್ನು ಮನಸಾರ ಅಂಗೀಕರಿಸಿ, ಅದಕ್ಕೆ ಪ್ರತಿಯಾಗಿ ತನ್ನಿಂದ ದೇಶಕ್ಕೆ ಸಲ್ಲಬೇಕಾದ ಕರ್ತವ್ಯಗಳು ಕೆಲವು ಉಂಟೆಂಬುದನ್ನು ಸರ್ವದಾ ಜ್ಞಾಪಕದಲ್ಲಿರಿಸಿಕೊಂಡು ನಡಸುತ್ತಾನೆ. ನಮ್ಮವನಿಗಾದರೋ, ದೇಶಕ್ಕೆ ತಾನು ಋಣಿ ಎಂಬ ಜ್ಞಾಪಕವೇ ಅಷ್ಟು ಸಂತತವಾಗಿರುವುದಿಲ್ಲ. ನಮ್ಮ ಧರ್ಮಬುದ್ಧಿಯೇನಿದ್ದರೂ ನಮ್ಮ ಮನೆಯ ಹೊಸ್ತಿಲಿನ ಒಳಗಡೆಯೇ. ಚೆನ್ನಾಗಿ ಸಂಪಾದನೆ ಮಾಡಬೇಕು; ಮಡದಿ ಮಕ್ಕಳಿಗೆ ಆಸ್ತಿ ಬಿಡಬೇಕು; ಮನೆಯೊಳಗೆ ತಮ್ಮಷ್ಟಕ್ಕೆ ತಾವು ಹಾಯಾಗಿರಬೇಕು. ಗುಡಿಗೆ ಹೋಗುವುದೂ ಗುರುದರ್ಶನ ಮಾಡುವುದೂ ತಿರುಪತಿ ಯಾತ್ರೆ ಮಾಡುವುದೂ ಸಹ ಮನೆಯ ಜನಕ್ಕೆ ಸೌಖ್ಯವೂ ಐಶ್ವರ್ಯವೂ ಬರಲೆಂದು. ದೇಶದ ಚಿಂತೆ ನಮ್ಮಗಳ ಮನಸ್ಸಿಗೆ ಬರುವುದು ಅಪರೂಪ. ಇದು ಸಂಕುಚಿತವಾದ ಧರ್ಮಭಾವನೆ. ಗೃಹಸ್ಥ ಧರ್ಮವು ಬಹು ದೊಡ್ಡದು. ಅದೇ ಎಲ್ಲಕ್ಕೂ ಮೊದಲು. ಆದರೆ ಅದೊಂದೇ ಧರ್ಮದ ಸಂಪೂರ್ಣ ರೂಪವಲ್ಲ. ಸಹಪ್ರಜೆಯ ಹಿತಾರ್ಥಕ್ಕಾಗಿ ಸ್ವಲ್ಪವಾದರೂ ಕೆಲಸಮಾಡದವನು ಧರ್ಮ ತಪ್ಪಿದವನೇ ಸರಿ.

ಧರ್ಮನಿಷ್ಠೆಯುಳ್ಳವನೂ ಆತ್ಮವಿಕಾಸದಲ್ಲಿ ಶ್ರದ್ಧೆಯುಳ್ಳವನೂ ಯಾವುದಾದರೊಂದು ಬಗೆಯ ಸಾರ್ವಜನಿಕ ಕಾರ್ಯದಲ್ಲಿ ಸಾಧ್ಯವಿರುವಷ್ಟುಮಟ್ಟಿಗೆ ಸೇರಲೇಬೇಕು. ನಮ್ಮ ಧರ್ಮಾಭಿಮಾನವು ಗೃಹಾವರಣದಿಂದ ಆಚೆಗೂ ಹರಿಯಬೇಕು. ನಮ್ಮ ಮನೆಯ ಗೋಡೆಗಳು ನಮ್ಮ ಬಾಳಿಗೆ ಬಂದೀಖಾನೆಯಾಗಬಾರದು. ನಮ್ಮ ಸ್ವಂತವಲ್ಲದ ಯಾವುದಾದರೊಂದು ಸೇವಾದೀಕ್ಷೆಯಿಂದಲೇ ನಮ್ಮ ಬಾಳು ಸಾರ್ಥಕವಾಗತಕ್ಕದ್ದು.

ಹೀಗೆ ನಾನಾ ತೆರನಾಗಿದೆ ಆತ್ಮೋದ್ಧಾರದ ದಾರಿ. ಅದೇ ದೇಶೋದ್ಧಾರದ ದಾರಿಯೂ ಹೌದು. ನಮ್ಮ ವೇದವೇದಾಂತಗಳು ಉಪದೇಶ ಮಾಡುವ ತತ್ತ್ವಗಳ ಮಾರ್ಗಕ್ಕೂ ನಮ್ಮ ಜನದ ಸೌಖ್ಯ ಸಂಪತ್ತು ಗೌರವಗಳ ಮಾರ್ಗಕ್ಕೂ ಅನ್ಯೋನ್ಯ ವಿರೋಧವಿಲ್ಲ. ಅವೆರಡೂ ಒಂದೇ ರಸ್ತೆಯ ಎರಡು ಅಂಚುಗಳು.

ಸಂಘಸೇವೆ–ಆತ್ಮಶಿಕ್ಷಣ :

ಮೇಲೆ ಹೇಳಿರುವ ಐದು ಆತ್ಮ ಸಂಸ್ಕಾರ ಕ್ರಮಗಳಲ್ಲಿ ಮೂರನ್ನು ಸಾಮಾನ್ಯವಾಗಿ ಎಲ್ಲರೂ ಅನುಸರಿಸುತ್ತಾರೆ: (೧) ಸಂಸಾರ ನಿರ್ವಾಹ, (೨) ಜೀವನ ಸಂಪಾದನೆ, (೩) ಮತಾಚಾರ. ಅನಾದಿಕಾಲದಿಂದ ಈ ಮೂರೂ ಮಾಮೂಲಾಗಿ ಬಂದಿವೆ. ಅವನ್ನು ವಿವೇಕದಿಂದಲ್ಲದಿದ್ದರೆ ಮೂಢಶ್ರದ್ಧೆಯಿಂದಲಾದರೂ ಜನ ನಡಸುತ್ತಾರೆ. ಅಷ್ಟು ರೂಢಿಯಲ್ಲಿಲ್ಲದವು, ಮಿಕ್ಕೆರಡು: (೧) ಸಾಹಿತ್ಯ ವ್ಯಾಸಂಗ ಅಥವಾ ಗ್ರಂಥಕಾಲಕ್ಷೇಪ, (೨) ಸಾರ್ವಜನಿಕ ಕಾರ್ಯ ಅಥವಾ ಸಂಘಸೇವೆ.

ಈಚೆಗೆ ಜನಸಾಮಾನ್ಯದಲ್ಲಿ ಅಕ್ಷರಪ್ರಚಾರ ಹೆಚ್ಚಾಗಿ ನಡೆಯುತ್ತಿರುವುದರಿಂದ ಜನರು ತಿಳಿವಳಿಕೆ ಸಂಪಾದಿಸುವುದಕ್ಕೋಸ್ಕರವಲ್ಲದಿದ್ದರೆ, ವಿನೋದಕ್ಕೋಸ್ಕರವಾಗಿಯಾದರೂ ಒಂದಿಷ್ಟು ಪುಸ್ತಕವನ್ನೋದಿಯಾರು–ಎಂಬ ಆಶೆಗೆ ಆಧಾರ ಕಾಣುತ್ತಿದೆ.

ಆದರೆ ಸಾರ್ವಜನಿಕ ವಿಚಾರ ಇನ್ನೂ ಹಿಂದೆಯೇ ಇದೆ. ಈ ಸಾಂಘಿಕ ಕ್ಷೇತ್ರವೇ ಅತ್ಯಂತ ಮುಖ್ಯವಾದ ನೀತಿ ಶಿಕ್ಷಣ ಶಾಲೆ. ಅಲ್ಲಿ ನಡೆಯುವ ಆತ್ಮ ಶೋಧನೆಯೂ ಆತ್ಮ ಪರಿಪಾಕವೂ ಪ್ರತಿಯೊಬ್ಬನಿಗೂ ಉದ್ಧಾರಕವಾದದ್ದು; ನಮ್ಮ ದೇಹದ ಉನ್ನತಿಗೂ ಅದು ಅತ್ಯಂತ ಅವಶ್ಯವಾದದ್ದು. ಅದೇ ಪ್ರಜಾರಾಜ್ಯಕ್ಕೆ ತಳಹದಿ.

ಹಳದು ಹೊಸದುಗಳ ಹೊಂದಾವಣೆ :

ಪ್ರಗತಿಯನ್ನು ಕುರಿತು ಮೇಲೆ ಪ್ರಸ್ತಾವಿಸಿದ್ದೇವಲ್ಲವೆ? ಅದಕ್ಕೆ ದಾರಿ ಯಾವುದು? ಸಾಧನಗಳು ಯಾವುದು?- ಎಂದುದನ್ನು ನಿಷ್ಕರ್ಷೆಯಾಗಿ ತಿಳಿದುಕೊಳ್ಳುವುದು ಬಹು ಕಷ್ಟವಾಗಿದೆ. ಈ ಹೊತ್ತು ಪ್ರಪಂಚದಲ್ಲಿ ಹಿಂದೆಂದೂ ಇಲ್ಲದೆ ಇದ್ದಂಥ ತೊಡಕಿನ ಪ್ರಸಂಗಗಳು ಹುಟ್ಟಿಕೊಂಡಿವೆ. ಮನುಷ್ಯನ ಚರಿತ್ರೆಯಲ್ಲಿ ನಮ್ಮ ಇಂದಿನ ಕಾಲ ಸಂಧಿಕಾಲವಾಗಿದೆ. ಅದರಲ್ಲಿಯೂ ಈಗ ನಮ್ಮ ಭರತಖಂಡಕ್ಕೆ ಒದಗಿರುವಷ್ಟು ಮನಸ್ಸಿನ ತೊಡಕು ಮತ್ತಾವ ದೇಶಕ್ಕೂ ಒದಗಿಲ್ಲ. ಅದಕ್ಕೆ ಕಾರಣ ನಮ್ಮ ಪೂರ್ವಸಂಪ್ರದಾಯಗಳಿಗೂ ಯೂರೋಪಿನ ಪ್ರಭಾವದಿಂದ ಬಂದಿರುವ ನವನಾಗರಿಕತೆಗೂ ಇರುವ ತಾರತಮ್ಯ.

ಕಳೆದ ೨೦೦ ವರ್ಷಗಳಲ್ಲಿ ಈ ದೇಶ ಪಾಶ್ಚಾತ್ಯ ಸಂಸರ್ಗಕ್ಕೆ ಒಳಗಾಗಿ, ನಮ್ಮ ಜೀವನಕ್ರಮವೆಲ್ಲ ಕಲಬೆರಕೆಯಾಗಿಹೋಗಿದೆ. ಯೂರೋಪಿಯನ್ ಜನರು ಈ ದೇಶಕ್ಕೆ ತಂದ ನಾನಾ ಯಂತ್ರಸಾಧನಗಳೂ ಉಪಭೋಗ ಸಾಮಗ್ರಿಗಳೂ ಕಾರ್ಯ ಚಮತ್ಕಾರಗಳೂ ನಮಗೆ ಮೋಹಕವಾಗಿದ್ದವು. ಅವರ ಮದ್ದುಗುಂಡುಗಳೂ ಸೈನ್ಯವಿಚಕ್ಷಣೆಯೂ ರಾಜ್ಯೋಪಾಯ ಚತುರತೆಯೂ ನಮ್ಮ ರಾಜ್ಯಗಳನ್ನು ಗೆದ್ದವು. ಅವರ ಶಕ್ತಿಯ ಮೆರುಗಿಗೆ ನಾವು ಬೆರಗಾಗಿ ಮನಸೋತೆವು. ಪಾಶ್ಚಾತ್ಯ ನಾಗರಿಕತೆ ನಮ್ಮದಕ್ಕಿಂತ ದೊಡ್ಡದೆಂದೂ ಅವರ ಜೀವನಕ್ರಮ ನಮ್ಮದಕ್ಕಿಂತ ಉತ್ಕೃಷ್ಟವಾದದ್ದೆಂದೂ ಭ್ರಾಂತಿಪಟ್ಟೆವು. ಅವರ ಉಡುಪು ತೊಡಿಗೆಗಳು, ಅವರ ಆಹಾರ ವಿಹಾರ ಪದ್ಧತಿಗಳು, ಅವರ ಆಟಪಾಟಗಳು, ಅವರ ಮರ್ಯಾದೆ-ಇದನ್ನೆಲ್ಲ ಉತ್ತಮವೆಂದು ನಮ್ಮ ಜನ ಭ್ರಮಿಸಿ ತಮ್ಮ ಹಿಂದಿನ ಸಂಪ್ರದಾಯಗಳನ್ನೂ ನಂಬಿಕೆಗಳನ್ನೂ ಕೈಬಿಟ್ಟರು. ಈ ಹೊತ್ತಾಗಿರುವುದೇನು? ಪಾಶ್ಚಾತ್ಯ ದೇಶಗಳಂತೆಯೇ ನಮ್ಮ ದೇಶವೂ ಆಗಬೇಕೆಂದು ಆಶೆಪಡಲು ಈಗ ನಮಗೆ ಮನಸ್ಸು ಬರುತ್ತದೆಯೆ? ಯೂರೋಪಿನಲ್ಲಿ ನೋಡಿರಿ; ಅಮೆರಿಕದಲ್ಲಿ ನೋಡಿರಿ; ಪ್ರಪಂಚದ ಯಾವ ಭಾಗದಲ್ಲಿಯಾದರೂ ನೋಡಿರಿ; -ಪಾಶ್ಚಾತ್ಯರ ಜೀವನ ಏನಾಗಿದೆ? ಎಲ್ಲಿ ನೋಡಿದರೂ ಅಶಾಂತಿ; ಮನೆಯೆಂಬುದು ಮುಸಾಫರಿಯಾಯಿತು; ಮದುವೆ ಕಂಟ್ರಾಕ್ಟು ಒಪ್ಪಂದವಾಯಿತು; ಇಷ್ಟವೆನಿಸಿದ್ದೇ ಧರ್ಮವೆಂದಾಯಿತು; ಗಂಡ ಹೆಂಡಿರೆಂಬ-ತಂದೆ ಮಕ್ಕಳೆಂಬ- ನಿಯತ ಹೋಯಿತು. ಬದುಕು ಛಿದ್ರಛಿದ್ರವಾಯಿತು. ರಾಷ್ಟ್ರರಾಷ್ಟ್ರಗಳಿಗೆ ವೈಷಮ್ಯ; ಬಂಡವಾಳಸ್ತರು- ಜೀತಗಾರರು ಎಂಬ ವೈಷಮ್ಯ; ದೇಹವರ್ಣದ ಕಾರಣದಿಂದ ವೈಷಮ್ಯ. ಎಲ್ಲೆಲ್ಲಿಯೂ ಯುದ್ಧಭಯ. ಎಲ್ಲೆಲ್ಲಿಯೂ ಸಾಮಾನ್ಯ ಜನಕ್ಕೆ ಹೊಟ್ಟೆಗೆ ಇಲ್ಲವೆಂಬ ಚಿಂತೆ, ಅಸೂಯೆ, ಕಳವಳ, ಮುಂದೇನು ಗತಿಯೆಂಬ ತಲ್ಲಣ-ಇವು ಯೂರೋಪಿನಲ್ಲಿ ದೇಶದೇಶದಲ್ಲಿಯೂ ಎದ್ದು ಕಾಣುತ್ತಿರುವ ಲಕ್ಷಣಗಳು, ಇಂಥಾದ್ದನ್ನು ಒಳ್ಳೆಯ ನಾಗರಿಕತೆ ಎನ್ನಬಹುದೆ? ನೆಮ್ಮದಿ ನಾಶವಾಗಿರುವುದೇ ನಾಗರಿಕತೆಯ ಲಕ್ಷಣವೆ?

ಹೀಗೆ ಕೇಳುವುದರಿಂದ ಪಾಶ್ಚತ್ಯ ನಾಗರಿಕತೆಯೆಲ್ಲವೂ ಕೆಟ್ಟದ್ದೆಂದು ಹೇಳಿದಂತಲ್ಲ. ಪಾಶ್ಚಾತ್ಯಪ್ರಗತಿಯಲ್ಲಿ ಎಷ್ಟೋ ಗುಣಾಂಶಗಳಿವೆ. ಮನುಷ್ಯ ಜೀವನಕ್ಕೆ ಪುಷ್ಟಿಯನ್ನೂ ಬಲವನ್ನೂ ಕೊಡತಕ್ಕ ಎಷ್ಟೋ ಸಂಗತಿಗಳನ್ನು ಪಾಶ್ಚಾತ್ಯರು ಸಂಪಾದಿಸಿದ್ದಾರೆ. ಅವರು ಅಷ್ಟೆಲ್ಲ ಸಂಪಾದಿಸಿದ್ದರೂ ಉತ್ತಮ ಜೀವನಕ್ಕೆ ಅವಶ್ಯವಾದ ಸಂಗತಿಗಳು ಇನ್ನೂ ಎಷ್ಟೋ ಅವರ ಕೈಗೆ ದೊರಕದೆ ಇವೆ–ಎಂಬುದನ್ನು ಮಾತ್ರ ನಾವು ಲಕ್ಷ್ಯದಲ್ಲಿರಿಸಿಕೊಳ್ಳಬೇಕು.

ಇದೇ ತೆರದ ಟೀಕೆಯನ್ನು ನಮ್ಮ ಭಾರತೀಯ ಸಂಸ್ಕೃತಿಯ ವಿಷಯದಲ್ಲಿಯೂ ಮಾಡಬಹುದಾಗಿದೆ. ಉತ್ತಮ ಜೀವನದ ತತ್ತ್ವಗಳನ್ನು ನಮ್ಮ ಪೂರ್ವಿಕರು ಎಷ್ಟೇ ಕಂಡುಕೊಂಡಿದ್ದರೂ ಅವು ಸಾಕಾಗದೆಹೋಗಿವೆ. ನಾವು ಈ ಕೊರತೆಯನ್ನು ಹೋಗಲಾಡಿಸಿಕೊಳ್ಳಲು ಪಾಶ್ಚಾತ್ಯ ಸಂಸ್ಕೃತಿಯಿಂದ ಎಷ್ಟೋ ಅಂಶಗಳನ್ನು ತೆಗೆದು ಕೊಳ್ಳಬೇಕಾಗಿದೆ. ಪಾಶ್ಚಾತ್ಯರು ಇಂಡಿಯರಿಂದ ಕಲಿಯಬೇಕು; ಭಾರತೀಯರು ಪಾಶ್ಚಾತ್ಯರಿಂದ ಕಲಿಯಬೇಕು. ಇಂಥ ಅನ್ಯೋನ್ಯ ಶಿಕ್ಷಣೆಯೊಂದೇ ಮನುಷ್ಯ ಲೋಕಕ್ಕೆ ಶುಭ ಸಂಪಾದನೆಯ ಮಾರ್ಗ.

ನಮ್ಮ ಇಂಡಿಯಾದೇಶದ ವಿಚಾರದಲ್ಲಿ ಈಗ ಇರತಕ್ಕ ಮೂಲಭೂತ ಪ್ರಶ್ನೆಯೆಂದರೆ ನಮ್ಮ ಪ್ರಾಚೀನ ಸಂಸ್ಕೃತಿಯನ್ನೂ ಯೂರೋಪಿನ ನವೀನ ಸಂಸ್ಕೃತಿಯನ್ನೂ ಪರಸ್ಪರ ಸಮನ್ವಯ ಮಾಡಿ ಅನುಗೂಡಿಸುವುದು ಹೇಗೆ? –ಎಂಬುದು. ನಮ್ಮ ಹಿಂದಿನ ಚರಿತ್ರೆಗೂ ಇಂದಿನ ಲೋಕಪರಿಸ್ಥಿತಿಗೂ ಒಪ್ಪುವಂಥ ಪ್ರಗತಿಮಾರ್ಗವನ್ನು ಕಂಡುಹಿಡಿಯುವುದು ಹೇಗೆ? ನಾವು ಸ್ವತಂತ್ರವಿಚಾರವಿಲ್ಲದೆ ಯೂರೋಪನ್ನು ಅನುಸರಿಸಹೋಗುವುದು ಶುಭಸಾಧನೆಯ ಮಾರ್ಗವೇನೂ ಅಲ್ಲ. ಆ ದಾರಿ ಸಮಾಧಾನಕಾರಿಯಾಗಲಾರದೆಂಬುದು ಪಾಶ್ಚಾತ್ಯ ಪ್ರಪಂಚದ ಈ ಹೊತ್ತಿನ ಸ್ಥಿತಿಯಿಂದ ಎಲ್ಲರಿಗೂ ಸ್ಪಷ್ಟವಾಗಿದೆ. ಆದರೆ ಪಾಶ್ಚಾತ್ಯ ಸಂಸ್ಕೃತಿಯನ್ನು ನಾವು ಸಂಪೂರ್ಣವಾಗಿ ತ್ಯಜಿಸುವುದೂ ಸಾಧ್ಯವಿಲ್ಲ; ಮತ್ತು ಉಚಿತವೂ ಅಲ್ಲ; ಏಕೆಂದರೆ ನಾವೂ ಅವರೂ ಈ ಹೊತ್ತು ಒಂದೇ ಪ್ರಪಂಚದ ಭಾಗವಾಗಿದ್ದೇವೆ. ಇಂಡಿಯಕ್ಕೂ ಮಿಕ್ಕ ಭೂಮಂಡಲಕ್ಕೂ ಪ್ರತಿನಿತ್ಯದ ಸಂಪರ್ಕ ಇಂದು ತಪ್ಪಿದ್ದಲ್ಲ. ಇಂಡಿಯಾದೇಶವು ಇತರರನ್ನು ಮುಟ್ಟದ ಮಡಿಬ್ರಾಹ್ಮಣನಂತೆ ಬೇರೆಯಾಗಿದ್ದ ಕಾಲ ಮುಗಿದು ಹೋಯಿತು. ಅಂಥ ಕಾಲ ಪುನಃ ಹಿಂತಿರುಗುವಂತಿಲ್ಲ. ಇಂದಿನ ಪ್ರಪಂಚ ಒಂದು ಸಂತೆ. ಅಲ್ಲಿ ಎಲ್ಲರಿಗೂ ಎಲ್ಲರೊಡನೆಯೂ ಸಂಪರ್ಕ. ಭರತಖಂಡವು ಈಗ ಇತರ ದೇಶಗಳ ಜೊತೆಯಲ್ಲಿ ಬೆರೆತು ಬಾಳಿತೀರಬೇಕಾಗಿದೆ ಮತ್ತು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ನಮಗೆ ಪರಿಗ್ರಾಹ್ಯವಾದ ಅಂಶಗಳು ಯಥೇಷ್ಟವಾಗಿವೆಯೆಂಬುದನ್ನೂ ನಾವು ಕಂಡುಕೊಂಡಿದ್ದೇವೆ. ಅವರ ವಿಜ್ಞಾನ ಶಾಸ್ತ್ರಗಳು, ಅವರ ಯಂತ್ರಸಂಧಾನಗಳು, ಅವರ ರಾಜಕೀಯ ಸಾಮಾಜಿಕ ಧ್ಯೇಯಗಳು ಮತ್ತು ಅವರ ಸ್ವತಂತ್ರ ಬುದ್ಧಿ ಪ್ರವೃತ್ತಿ–ಇವು ನಾವು ಆವಶ್ಯವಾಗಿ ಸಂಗ್ರಹಿಸಬೇಕಾದ ಸಂಗತಿಗಳು.

ಆದರೆ ಈ ಹೊಸ ಸಂಗತಿಗಳನ್ನು ನಮ್ಮ ಹಳೆಯ ಪದ್ಧತಿಗಳೊಳಕ್ಕೆ ಬೆರಸಿಕೊಳ್ಳುವುದು ಹೇಗೆ? ಯೂರೋಪಿನ ಯಂತ್ರಶಾಲೆಯ ಪದ್ಧತಿಗಳನ್ನು ನಾವು ಅಂಗೀಕರಿಸುವುದರಲ್ಲಿ ಅಲ್ಲಿಯ ಸಮಾಜ ಸಂಕ್ಷೋಭೆ ಮಾತ್ರ ಇಲ್ಲಿಗೆ ಬಾರದಂತೆ ತಡೆಯುವುದು ಹೇಗೆ? ಅಲ್ಲಿಯ ಐಹಿಕ ಭೋಗಪ್ರಧಾನ ದೃಷ್ಟಿ ನಮ್ಮ ಅಂತರಾತ್ಮ ದೃಷ್ಟಿಯನ್ನು ಮರೆಯಿಸದಂತೆ ಮಾಡುವುದು ಹೇಗೆ? –ಇವು, ಇಂಥವು, ದೊಡ್ಡ ಪ್ರಶ್ನೆಗಳು. ಅವುಗಳನ್ನೆಲ್ಲ ಚರ್ಚಿಸಿ ಉತ್ತರಕೊಡುವ ಪ್ರಯತ್ನ ಈ ಪುಸ್ತಕಕ್ಕೆ ಸೇರಿದ್ದಲ್ಲ. ಇರುವ ತೊಡಕನ್ನು ಸೂಚಿಸುವುದು ಇಲ್ಲಿ ನಮ್ಮ ಉದ್ದೇಶ.

ಮುಖ್ಯವಾಗಿ ಯೂರೋಪ್ ಅಮೇರಿಕಗಳ ಸಮಾಜವ್ಯವಸ್ಥೆ ಭೋಗದ ಆಧಾರದ ಮೇಲೆ ಕಟ್ಟಿದ್ದು. ಅಲ್ಲಿ ಸಾಧುಸಂತರುಗಳು ಇರಲಿಲ್ಲವೆಂದಲ್ಲ. ವಿರಕ್ತರೂ ಭಕ್ತರೂ ಅಲ್ಲಿಯೂ ಇದ್ದಾರೆ. ಆದರೆ ಅಲ್ಲಿಯ ರಾಜ್ಯಪದ್ಧತಿ ಅರ್ಥಪದ್ಧತಿಗಳಲ್ಲಿ ಪ್ರಬಲರಾಗಿರುವ ಜನರು ಭೋಗದೃಷ್ಟಿಯವರು, ಐಹಿಕ ಲಾಭ ದೃಷ್ಟಿಯವರು.

ಅಂಥವರು ನಮ್ಮಲ್ಲಿಯೂ ಅಪರೂಪವಲ್ಲ. ಇಂಡಿಯವೆಲ್ಲ ತ್ಯಾಗಿಯೋಗಿ ಜನಾಂಗವೆಂದು ಯಾರೂ ಹೇಳಿಕೊಳ್ಳಲಾರರು. ಐಹಿಕ ಸುಖಪ್ರಧಾನಿಗಳೂ ಲಾಭಲೋಭಿಗಳೂ ನಮ್ಮಲ್ಲಿ ಈಗ ಹೆಚ್ಚಿಕೊಂಡಿದ್ದರೂ, ನಮಗೆ ಹಿಂದಿನಿಂದ ಬಂದಿರುವ ಸಂಸ್ಕೃತಿಯನ್ನೂ ಸಂಪ್ರದಾಯವನ್ನೂ ನೋಡುವುದಾದರೆ, ನಮ್ಮ ಜೀವದ ನೀತಿಯ ಮೂಲಾಧಾರವು ಯೂರೋಪಿನದಕ್ಕಿಂತ ಬೇರೆಯೆಂಬುದು ಚೆನ್ನಾಗಿ ತೋರಿಬರುತ್ತದೆ. ನಮ್ಮಲ್ಲಿ ಎಲ್ಲ ವ್ಯವಸ್ಥೆಗಳಿಗೂ ಎಲ್ಲ ಪದ್ಧತಿಗಳಿಗೂ ತಳಹದಿಯಾಗಿರುವುದು ಮನುಷ್ಯನ ಆತ್ಮವಸ್ತುವಿನ ಬೆಲೆ. ದೇಹಕ್ಕಿಂತ ಆತ್ಮ ದೊಡ್ಡದು. ದೇಹಭೋಗಕ್ಕಿಂತ ಆತ್ಮಸಮಾಧಾನ ದೊಡ್ಡದು. ಮಮತೆಗಿಂತ ನಿರ್ಮಮತೆ ದೊಡ್ಡದು. ಸಂಪಾದನೆಗಿಂತ ದಾನ ದೊಡ್ಡದು. ಬಲಕ್ಕಿಂತ ಧರ್ಮ ದೊಡ್ಡದು. ಇಂಥ ತಾರತಮ್ಯದ ಮೇಲೆ ನಿಂತಿರುವುದು ಭಾರತೀಯ ಸಂಸ್ಕೃತಿ.

ಮನುಷ್ಯ ಜೀವನಕ್ಕೆ ದೇಹ, ಆತ್ಮ–ಈ ಎರಡೂ ಮುಖ್ಯವಾದುವೇ; ಆದರೆ ಆ ಎರಡರಲ್ಲಿ ಮೇಲಿನದು ಯಾವುದು? "ಆತ್ಮ ಮೊದಲನೆಯದು, ದೇಹ ಎರಡನೆಯದು" ಎನ್ನುವುದು–ಆರ್ಯಮತ. "ಆತ್ಮವೆಂಬುದುಂಟೋ, ಇಲ್ಲವೋ! ದೇಹವಂತೂ ಗಟ್ಟಿಯಾಗಿದೆ, ಮೊದಲು ಅದನ್ನು ನೋಡಿಕೊಳ್ಳೋಣ" –ಎನ್ನುವುದು ಪಾಶ್ಚಾತ್ಯಮತ. ಯಾರು "ಆತ್ಮವೇ ಪರಮವಸ್ತು; ಆತ್ಮಕ್ಕೋಸ್ಕರ ದೇಹ; ದೇಹವು ಸಾಧನಮಾತ್ರವಾದದ್ದು" ಎಂದು ನಂಬಿದ್ದಾರೋ ಅವರು ದೇಹದ ಸಂಪತ್ತಿಗೆ ಕಟ್ಟುವ ಬೆಲೆ ಮಿತವಾದದ್ದು. ಅಂಥವರು ದೇಹಪ್ರಾಧಾನ್ಯ ಭಾವನೆಯಿಂದ ಹುಟ್ಟಿದ ಅರ್ಥಪದ್ಧತಿ ಸಮಾಜಪದ್ಧತಿಗಳನ್ನು ತಮ್ಮ ಜೀವನಕ್ಕೆ ಎಷ್ಟು ಮಾತ್ರ ಸ್ವೀಕರಿಸಿಕೊಳ್ಳಬಹುದು? ಹೇಗೆ ಅನ್ವಯಿಸಿಕೊಳ್ಳಬಹುದು? ಇದು ಈಗ ನಮ್ಮ ಮುಂದಿರುವ ಪ್ರಶ್ನೆ. ಇದನ್ನು ಸಮರ್ಪಕವಾಗಿ ತೀರ್ಮಾನಪಡಿಸಲು ಸ್ವತಂತ್ರ ವಿಚಾರ ಆವಶ್ಯಕ.

ಪಾಶ್ಚಾತ್ಯ ಜೀವನನೀತಿಯಲ್ಲಿ ಸಾಮಾನ್ಯವಾಗಿ ಒಬ್ಬ ಮನುಷ್ಯನ ವಿಚಾರ ಆಯಾ ಪ್ರತ್ಯೇಕವ್ಯಕ್ತಿಯದು. ನಮ್ಮಲ್ಲಿಯ ವ್ಯಕ್ತಿಜೀವನ ವಿಶೇಷವಾಗಿ ಸಮಾಜದ್ದು. ಪಾಶ್ಚಾತ್ಯ ವಿವಾಹ ಆ ಗಂಡು ಹೆಣ್ಣಿಗೆ ಮಾತ್ರ ಸೇರಿದ ವಿಚಾರ. ಭಾರತೀಯ ವಿವಾಹ ಆ ದಂಪತಿಗಳ ಉಭಯ ಕುಲಹಿತದ ವಿಚಾರ. ಯೂರೋಪಿನವನ ಮನೆ ಬೇರೆಬೇರೆ ಭಾಗವಾದ ವಿಭಕ್ತ ಕುಟುಂಬ–ವ್ಯಕ್ತಿಸಂಪನ್ಮೂಲವಾದದ್ದು. ನಮ್ಮದು ಅವಿಭಕ್ತಕುಟುಂಬ, ಸಮಾಜಾನುಕೂಲ್ಯದ (ಸೋಷಲಿಸಂ) ಭಾವನೆಗೆ ಸಹಕಾರಿಯಾದದ್ದು. ಹೀಗೆ ಸಮಾಜ ರಚನೆಯ ಮೂಲಧ್ಯೇಯಗಳಲ್ಲಿಯೇ ಪಾಶ್ಚಾತ್ಯರ ದಾರಿಯೂ ಭಾರತೀಯರ ದಾರಿಯೂ ಬೇರೆಬೇರೆಯಾಗಿವೆ. ಇತರ ಸಾಮಾಜಿಕ ಸಂದರ್ಭ ಪರಿಣಾಮಗಳಲ್ಲಿಯೂ ಹಾಗೆಯೇ ನಮಗೂ ಅವರಿಗೂ ಹೆಚ್ಚಿನ ವ್ಯತ್ಯಾಸಗಳು ಕಾಣಬರುತ್ತವೆ. ಆರ್ಥಿಕ ವಿಚಾರಗಳಲ್ಲಿಯೂ ಹಾಗೆಯೇ. ಸಂಪದ್ವ್ಯವಸ್ಥೆಯು ಅವರಲ್ಲಿ ಯಂತ್ರಪರಿಶ್ರಮವನ್ನೂ ವಿದೇಶ ವ್ಯಾಪಾರವನ್ನೂ ಅವಲಂಬಿಸಿಕೊಂಡು ಬೆಳೆದದ್ದು. ನಮ್ಮದಾದರೋ ಭೂವ್ಯವಸಾಯಮೂಲವಾದದ್ದು ಮತ್ತು ಸ್ವದೇಶ ಮಾತ್ರೋಪಯುಕ್ತವಾದದ್ದು. ಭೂವ್ಯವಸಾಯವನ್ನು ಪಾಶ್ಚಾತ್ಯ ದೇಶಗಳು ಅಲಕ್ಷ್ಯಮಾಡಿ ಕಾರಖಾನೆ ಕೈಗಾರಿಕೆಗಳಿಗೂ ವಿದೇಶ ವ್ಯಾಪಾರದಿಂದ ದೊರೆಯುವ ಧನಲಾಭಕ್ಕೂ ಹೆಚ್ಚು ಮನಸ್ಸು ಕೊಟ್ಟದ್ದರಿಂದ, ಅವರ ಪಾಡು ಕಾಳು ಹುಡುಕಿ ರತ್ನವನ್ನು ಕಂಡ ಕೋಳಿಯ

ಪಾಡಾಗಿದೆ. ಹಣ ಯಥೇಷ್ಟವಾಗಿದೆ, ಅನ್ನ ದುರ್ಲಭವಾಗಿದೆ–ಅನೇಕ ಯೂರೋಪಿಯನ್ ದೇಶಗಳಲ್ಲಿ. ಅವು ಆಹಾರವನ್ನು ವಿದೇಶಗಳಿಂದ ಆಮದು ತರಿಸಿಕೊಳ್ಳುತ್ತವೆ. ನಾವು ಹಾಗಾದರೆ ಭೂವ್ಯವಸಾಯಕ್ಕೆ ಬಾಧೆಯುಂಟಾಗದಂತೆ ಯಂತ್ರಪರಿಕರ್ಮಗಳನ್ನು ತಂದುಕೊಳ್ಳುವುದು ಸಾಧ್ಯವೇ?

ಹೀಗೆ ನಾವು ಪಾಶ್ಚಾತ್ಯರನ್ನು ಅನುಕರಿಸುವ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕಾಗಿದೆ. ಅವರಿಂದ ನಾವು ತೆಗೆದುಕೊಳ್ಳಬೇಕಾದ ಅಂಶಗಳು ಹತ್ತಿದ್ದರೆ ತೆಗೆದುಕೊಳ್ಳತಕ್ಕದ್ದಲ್ಲದ ಅಂಶಗಳು ಹತ್ತಕ್ಕೆ ಕಡಮೆಯಿಲ್ಲದಷ್ಟು ಇವೆ.

ನಾನಾ ತೆರದ ಅಭಿಪ್ರಾಯ ಪ್ರಚಾರಗಳೂ ನಾನಾ ಮತವಾದಗಳೂ ನಾನಾ ಕಕ್ಷಿಪಕ್ಷಗಳೂ ಎದ್ದು, ಗದ್ದಲವೆಬ್ಬಿಸಿ, ಜನರ ಮನಸ್ಸನ್ನು ನಾಲ್ಕಾರು ಕಡೆ ಸೆಳೆದು, ದಿಗ್ಭ್ರಾಂತಿಯುಂಟುಮಾಡಿರುವ ಕಾಲ ಇದು. ಇಂಥ ಕಾಲದಲ್ಲಿ ಜನಕ್ಕೆ ಬುದ್ಧಿಯ ಜಾಗರೂಕತೆ ಹೆಚ್ಚಾಗಿರಬೇಕು. ಗಟ್ಟಿಯಾಗಿ ಕೂಗುವವರಿಗೆಲ್ಲ ನಾವು ಕಿವಿಯನ್ನು ಬಿಟ್ಟುಕೊಡುವುದಾದರೆ ನಮ್ಮ ನಾಡು ಎಂದೆಂದಿಗೂ ಕಳವಳಪಡುತ್ತಿರುವುದೇ ಆದೀತು. ಮುಖ್ಯವಾಗಿ ಪ್ರಚಾರಕರ ಮಾತಿಗೆ ನಾವು ಮರುಳಾಗದೆ, ನಮ್ಮ ಸಮಾಜದ ಪ್ರಶ್ನೆಗಳನ್ನು ನಾವು ಸ್ವತಂತ್ರದೃಷ್ಟಿಯಿಂದ ವಿಮರ್ಶಿಸಿದ ಹೊರತು ನಮಗೆ ನಿಜವಾದ ಧರ್ಮದ ದಾರಿ ಕಾಣಬರಲಾರದು.

ಒಂದು ದೊಡ್ಡ ತತ್ತ್ವ :

ಕ್ಷುದ್ರದೇವತೆಗಳು ತೊಲಗಿದರೆ ಮಹಾದೇವನು ಪ್ರತ್ಯಕ್ಷನಾಗುತ್ತಾನೆ. ಅಬದ್ಧ ನಂಬಿಕೆಗಳನ್ನು ನಾವು ತೊಲಗಿಸಿದರೆ ಕ್ಷೇಮಕರವಾದ ತಿಳಿವಳಿಕೆ ನಮಗೆ ಬರುತ್ತದೆ. ಆದದ್ದರಿಂದ ನಾವು ಮೊದಲು ನಮ್ಮ ನಮ್ಮ ಮನಸ್ಸುಗಳನ್ನು ಪರೀಕ್ಷಿಸಿ ಅಲ್ಲಿರುವ ಕಸ ಕೊಳೆಗಳನ್ನು ತೆಗೆದುಹಾಕಬೇಕು. ನಿರಾಧಾರವಾದ ಭಯಗಳನ್ನು ನೀಗಿ ಕಳೆಯಬೇಕು. ಪ್ರಾಚೀನ ಕರ್ಮ, ದೈವ, ವಿಧಿ, ಅದೃಷ್ಟ–ಇಂಥಾ ಮಾತುಗಳನ್ನು ಕೊಂಚ ಮರೆತು, ಜಗತ್ತೇ ಪ್ರತ್ಯಕ್ಷ ದೈವ, ಪೌರುಷವೇ ದೇವರು ನಮಗೆ ನಿಯಮಿಸಿರುವ ಕರ್ತವ್ಯ, ಆತ್ಮವಿಸ್ತಾರವೇ ಪರಮ ವಿಜಯ–ಇಂಥಾ ವಾಕ್ಯಗಳನ್ನು ನಾವು ಸ್ಮರಣೆ ಮಾಡಬೇಕು.

ಈಗ್ಗೆ ಸುಮಾರು ೧೭೫೦ ವರ್ಷಗಳ ಹಿಂದೆ ಗ್ರೀಸ್‌ದೇಶದಲ್ಲಿ ಮಂತ್ರ, ಮಾಟ, ಭೂತ, ಶಾಪ–ಇಂಥಾ ದುರ್ಭಯಗಳಿಂದ ಅದಿರುತ್ತಿದ್ದ ಗ್ರೀಕ್ ಜನರನ್ನು ಉದ್ದೇಶ ಮಾಡಿ, ಡಯೋಜೆನೀಸ್ ಎಂಬ ವೃದ್ಧ ತತ್ತ್ವಜ್ಞಾನಿಯು ಸಮಸ್ತ ಜನರಿಗೂ ಕಾಣಿಸುವಂತೆ ಒಂದು ಗೋಡೆಯ ಮೇಲೆ ಒಂದು ಶಾಸನವನ್ನು ಬರೆಯಿಸಿದನಂತೆ. ಅದನ್ನು ಸ್ವಲ್ಪ ಮಾತ್ರ ವಿಸ್ತರಿಸಿ ಹೀಗೆ ಕನ್ನಡಿಸಬಹುದು:

> ದೈವ ಕಥೆಗಳ ನೆನೆದು ಮನಕೆ ಕಳವಳ ಬೇಡ;
> ಸಾವೇನು ನವಕವಚ; ಜೀವಕಳಬೇಡ;
> ಪೌರುಷದ ಯತ್ನದಿಂದೊಳಿತ ಸಾಧಿಸಲಹುದು;
> ಮೀರಿ ಬಹ ಕೆಡುಕ ಧೈರ್ಯದೆ ಸಹಿಸಲಹುದು.

ಇಂಥ ವಿವೇಕ ಧೈರ್ಯ, ಲೋಕಸ್ನೇಹ–ಇವೇ ನಮ್ಮ ಮಾನುಷ ವ್ಯಾಧಿಗಳಿಗೆ ತಕ್ಕ ಮದ್ದು.

ಪೌರುಷವನ್ನು ಕುರಿತು ಮಾತನಾಡುವಾಗ ಒಂದು ಮುನ್ನೆಚ್ಚರಿಕೆಯ ಮಾತನ್ನು ಒತ್ತೊತ್ತಿ ಹೇಳದಿದ್ದರೆ ತಪ್ಪಾದೀತು. ಪುರುಷಪ್ರಯತ್ನದಿಂದ ಭೂಲೋಕವು ಶಾಶ್ವತ ಸ್ವರ್ಗವಾದೀತೆಂದು ಯಾರೂ ಸೂಚನೆ ಮಾಡಿಲ್ಲ. ವಿಜ್ಞಾನವೂ ವಿವೇಕವೂ ಆರಿಸಿ ತೀರಿಸಲಾಗದ ಕಷ್ಟನಿಷ್ಠುರಗಳು ನಮ್ಮ ಜೀವನದಲ್ಲಿ ಎಷ್ಟೋ ಇರುತ್ತವೆ. ಲೋಭ ಮೋಹಗಳು, ಮಾತ್ಸರ್ಯ ಕಾರ್ಪಣ್ಯಗಳೂ ಮನುಷ್ಯ ಸ್ವಭಾವದಿಂದ ಎಂದಿಗಾದರೂ ನಿರ್ಮಲವಾದೀತೆಂಬ ಆಶೆಗೆ ಇನ್ನೂ ಕಾರಣ ತೋರಿಲ್ಲ. ಅವು ತಲೆಯೆತ್ತಿದಾಗ ಅವು ಮಿತಿಮೀರಿ ಬೆಳೆಯದಂತೆ ತಲೆಯನ್ನು ಮೊಟ್ಟುವುದು ನೀತಿಶಾಸ್ತ್ರದಿಂದಲೂ ರಾಜ್ಯಶಾಸನದಿಂದಲೂ ಆಗಬಹುದೇ ಹೊರತು, ಅವುಗಳ ಬೀಜವನ್ನೇ ಧ್ವಂಸಮಾಡುವುದು ಮನುಷ್ಯನಿಗೆ ಸಾಧ್ಯವಿಲ್ಲ. ಏಕೆಂದರೆ ಆ ಬೀಜಗಳು ವಾಸ್ತವವಾಗಿ ಪ್ರಕೃತಿ ಮಾಡಿದ ಕೃತ್ರಿಮ. ಹಾಗೆಯೇ ರೋಗವನ್ನೂ, ಮುಪ್ಪನ್ನೂ, ಮರಣವನ್ನೂ ನಿರ್ಮೂಲಮಾಡಬಲ್ಲ ವಿಜ್ಞಾನಶಾಸ್ತ್ರವಿಲ್ಲ. ಅವುಗಳಿಗೂ ಸೃಷ್ಟಿಕ್ರಮದಲ್ಲಿ ಪ್ರಕೃತಿಯು ಅವನ ಅಪಗತಿಗೆ ಸಂಚು ನಡಸುತ್ತಿರುತ್ತಾಳೆ. ಮಾನವಲೋಕದ ಹಣೆಯಬರಹವನ್ನು ಈಗ ಯಾರೂ ಹೊಸದಾಗಿ ಬರೆಯುವಹಾಗಿಲ್ಲ. ನಮ್ಮ ಸ್ಲೇಟು ಹಲಗೆಯ ಮೇಲೆ ಹಿಂದಿನವರ ಬಳಪದ ಗುರುತುಗಳೂ ಕಲ್ಲುಗೀಚುಗಳೂ ಇದ್ದೇ ಇರುತ್ತವೆ. ಕೆಲವನ್ನು ನಾವು ಅಳಿಸಲಾದೀತು; ಇನ್ನು ಕೆಲವು ಎದ್ದು ಕಾಣದೆ, ಹಲಗೆಯಲ್ಲಿ ಹಳ್ಳ ಕಾಲುವೆಗಳಾಗಿ ಉಳಿದುಕೊಂಡಿರುತ್ತವೆ. ನಮ್ಮ ಈ ಹೊತ್ತಿನ ಸ್ಥಿತಿ ಈ ಹೊತ್ತಾದದ್ದಲ್ಲ; ಇದು ಹಿಂದಿನ ಸಾವಿರ ವರ್ಷಗಳ ಚರಿತ್ರೆಯ ಫಲಿತಾಂಶ. ಹೀಗಿರುವುದರಿಂದಲೇ ತಿದ್ದುಪಾಟುಗಳೂ ಸಂಸ್ಕರಣಗಳೂ ನಾವು ಆಶೆ ಪಡುವಷ್ಟು ಬೇಗಬೇಗ ನಮ್ಮಲ್ಲಿ ಬೇರೂರುವುದಿಲ್ಲ. ಪ್ರಗತಿ ನಮ್ಮ ಧ್ಯೇಯವಾಗಿದ್ದರೂ, ಅದು ಬರಿಯ ಆತುರದಿಂದ ಸಾಧಿಸಲಾಗತಕ್ಕದ್ದಲ್ಲ. ಪ್ರಗತಿ ನಿಜವಾದದ್ದೂ ಮತ್ತು ಶಾಶ್ವತವಾಗಿ ನಿಲ್ಲತಕ್ಕದ್ದೂ ಆಗಬೇಕಾದರೆ ಅದು ಕ್ರಮಕ್ರಮವಾದ ಪ್ರಜಾ ಜನದ ವಿದ್ಯಾಭ್ಯಾಸದಿಂದ–ಜನಬಾಹುಳ್ಯದ ಒಡಂಬಡಿಕೆಯ ಮೂಲಕ–ಬಂದದ್ದಾಗಬೇಕು. ಸಾವಧಾನ ವಿಚಾರ, ಪೂರ್ವಾಪರ ಪರಿಜ್ಞಾನ, ಯುಕ್ತಾಯುಕ್ತ ಪರೀಕ್ಷೆ, ಸಹನೆ, ತಾಳ್ಮೆ, ನಿರುದ್ವೇಗ–ಈ ಗುಣಗಳಿಂದ ಸಾಧಿಸಿದ ಪ್ರಗತಿಯೇ ಸಫಲವಾಗತಕ್ಕದ್ದು.

ತಾಳ್ಮೆ–ಕ್ರಮ :

ಈಗಣ ಪ್ರಪಂಚ ಬಹು ಆತುರದ್ದು. ಅದಕ್ಕೆ ಒಳ್ಳೆಯದೆಂದು ತೋರಿದ್ದೆಲ್ಲ ನೆನೆದ ಕೂಡಲೆ ಬಂದುಬಿಡಬೇಕು. ಅದರಲ್ಲಿ ತಡವಾದರೆ ಒಂದೇ ಪ್ರತಿಕ್ರಿಯೆ; ಕ್ರಾಂತಿ. ಕ್ರಾಂತಿ ಎಂದರೆ ಅವಿಧೇಯತೆ, ದಂಗೆ, ಬಂಡಾಯ, ಪುಂಡಾಟ. ಇರುವ ಏರ್ಪಾಟನ್ನು ಮೊದಲು ತಲೆಕೆಳಗುಮಾಡಿಬಿಡತಕ್ಕದ್ದು; ಹೊಸದೊಂದನ್ನು ಕಟ್ಟುವ ವಿಚಾರ ಆಮೇಲೆ. ಮೊದಲು ಯಾರನ್ನೋ ಒಬ್ಬರನ್ನು ಹಿಡಿದು ನಮ್ಮ ಅಸಮಾಧಾನಕ್ಕೆ ಆಹುತಿ ಮಾಡತಕ್ಕದ್ದು. ಬಡವರ ಬಡತನಕ್ಕೆ ಸಿರಿವಂತರ ಸಿರಿತನವೇ ಕಾರಣ; ಹಾಕು ಸಿರಿವಂತರನ್ನು ಗಾಣಕ್ಕೆ. ಕೊಳಕನ್ನು ಕೊಳಕಾಗಿರುವುದಕ್ಕೆ ಚೊಕ್ಕಟವಂತನ ಚೊಕ್ಕಟವೇ ಕಾರಣ. ತಳ್ಳು ಚೊಕ್ಕಟವಂತನನ್ನು ಹಳ್ಳಕ್ಕೆ–ಹೀಗೆ ಸುಲಭವೂ ಸರಳವೂ ಆದದ್ದು ಕೆಲಮಂದಿ ಪ್ರಗತಿಯ ಆತುರಗಾರರ ತರ್ಕ. ಈ ಹೊತ್ತು ಸಿರಿವಂತರಾಗಿರುವವರು ಹಿಂದೆ ಬಡವರಾಗಿದ್ದವರಲ್ಲವೆ? ಆ ಬಡವರು ಸಿರಿಗಳಿಸಿದ್ದು ಹೇಗೆ? ಈ ರೀತಿ ಮೂಲವನ್ನು ವಿಚಾರಿಸಿಕೊಂಡು ಹೋಗಲು ಅವರಿಗೆ ತಾಳ್ಮೆಯಿಲ್ಲ. ದೇಶದಲ್ಲಿ ಇಷ್ಟು ಮಂದಿ ವ್ಯಾಧಿಗ್ರಸ್ತರಾಗಿರಲು ಏನು ಕಾರಣ? ಇನ್ನಷ್ಟು ಮಂದಿ ಆರೋಗ್ಯಪುಷ್ಟರಾಗಿರುವುದೇ ಕಾರಣವೆ? ಸಿರಿವಂತರೆಲ್ಲ ನ್ಯಾಯವಾಗಿಯೇ ಸಿರಿ ಗಳಿಸಿದವರೆಂದು ಯಾರೂ ಸಾಧಿಸಲಾರರು. ವ್ಯಕ್ತಿಗಳ ಸಿರಿ

ಸಂಪತ್ತಿಗೆ ರಾಜ್ಯಶಾಸನದಿಂದ ಒಂದು ಮಿತಿಯನ್ನು ಗೊತ್ತುಮಾಡಿಸುವುದು ನ್ಯಾಯವೆಂದು ಹೇಳಿದರೆ, ಅದು ಹಾಗಲ್ಲವೆಂದು ಯಾರೂ ವಾದಿಸಲಾರರು. ಆದರೆ ಯಾವ ಬದಲಾವಣೆಯೂ ರೋಷವೇಶ ಮಾತ್ರದಿಂದಲೇ ಬಂದದ್ದಾಗಬಾರದು. ಸಮಾಜ ಚರಿತ್ರೆಯ ದೀರ್ಘ ಕಾಲಾವಧಿಯ ವಿಮರ್ಶೆ; ಒಂದು ದೇಶಕ್ಕೂ ಇನ್ನೊಂದಕ್ಕೂ ಇರುವ ಸಂದರ್ಭಾಂಶ ವ್ಯತ್ಯಾಸ; ಮನುಷ್ಯ ಸ್ವಭಾವದ ಆಳವಾದ ವಾಸನೆಗಳ ಶೋಧನೆ; ಪ್ರತ್ಯಕ್ಷ ಬೆಲೆಗಳನ್ನು ಗುಣಿಸುವಲ್ಲಿ ಅಪ್ರತ್ಯಕ್ಷ ಬೆಲೆಗಳ ಜ್ಞಾಪಕ–ನಾನಾ ವಿಚಾರಗಳ ಆಧಾರವಿಲ್ಲದೆ ಮಾಡುವ ಬದಲಾವಣೆಯು, ಅಥವಾ ಸಾಮಾಜಿಕ ವ್ಯತ್ಯಾಸವು, ರೋಗಕ್ಕಿಂತ ಭಯಂಕರವಾದ ಚಿಕಿತ್ಸೆಯಾಗಿ ಪರಿಣಮಿಸಬಹುದು. ಮನುಷ್ಯ ಸಮಾಜವೆಂಬುದು ಬಹು ಪುರಾತನವಾದ ಕಟ್ಟಡ. ಅದನ್ನು ದುರಸ್ತು ಮಾಡಹೊರಡುವವನು ಬಹು ಜಾಗರೂಕನಾಗಿರಬೇಕು. ಹಾಗಿಲ್ಲದಿದ್ದರೆ ಪೂರ್ವದ ಗೋಡೆಯ ಬಿರುಕಿಗೆ ಹಾರೆ ತಗುಲಿಸಿದಾಗ ಪಶ್ಚಿಮದ ಕಡೆಯ ಗೋಡೆ ಕುಸಿದು ಬೀಳಬಹುದು.

ನಮ್ಮ ನಡವಳಿಕೆಯಲ್ಲಿ ಯಾವುದಾದರೂ ಒಂದು ತಿದ್ದುಪಾಟು, ಅಥವಾ ಸುಧಾರಣೆ, ಅಥವಾ ಸಂಸ್ಕರಣೆ ಉಂಟಾಗತಕ್ಕದ್ದು ಒಂದು ಹೊಸದಾದ ಅಭಿಪ್ರಾಯದಿಂದ. ಆ ಹೊಸ ಅಭಿಪ್ರಾಯ, ಅಥವಾ ಭಾವನೆ, ಜನದ ಮನಸ್ಸಿನೊಳಕ್ಕೆ ಇಳಿದು, ಅವರ ಸ್ವಭಾವದಲ್ಲಿ ಕಲೆತು ಒಂದಾದ ಹೊರತು, ಅವರ ಜೀವನದೊಳಕ್ಕೆ ನಾವು ಬಯಸುವ ತಿದ್ದುಪಾಟು ಬಂದು ನೆಲೆಗೊಳ್ಳಲಾರದು. ಹಾಗೆ ಒಂದು ನವೀನ ಭಾವನೆ ನಮ್ಮ ಮನಸ್ಸನ್ನು ಹಿಡಿದು ಕೆಲಸ ಮಾಡಲು ಕಾಲ ಬೇಕಾಗುತ್ತದೆ. ನೆಲದಲ್ಲಿ ನೆಟ್ಟ ಬೀಜ ಮೊಳೆತು ಮರವಾಗಲು ಹೇಗೆ ಕಾಲಾವಕಾಶ ಬೇಕೋ, ಹಾಗೆಯೇ ಒಂದು ಹೊಸ ಅಭಿಪ್ರಾಯ ಜನದ ಮನಸ್ಸಿನಲ್ಲಿ ಬೇರು ಬಿಟ್ಟು ಅವರ ಬದುಕಿನಲ್ಲಿ ಹಬ್ಬುವುದಕ್ಕೂ ಕಾಲಾವಕಾಶ ಬೇಕು. ಆದಕಾರಣ ನಾವು ಸೂಚಿಸಿದ ಸಂಸ್ಕರಣೆಗಳನ್ನು ಜನರು ಕೂಡಲೆ ಅಂಗೀಕರಿಸಲಿಲ್ಲವೆಂದು ಅಸಮಾಧಾನಪಡುವುದು ನ್ಯಾಯವಲ್ಲ. ನಮ್ಮ ಅಭಿಪ್ರಾಯದ ಸಾಧುತ್ವ ಅವರ ಮನಸ್ಸಿಗೆ ರುಜುವಾತಾದಾಗ ನಮ್ಮ ಸೂಚನೆಯನ್ನು ಅವರು ತಾವಾಗಿಯೇ ಅಂಗೀಕರಿಸಿಕೊಳ್ಳುವುದು ಖಂಡಿತ.

ಪ್ರಗತಿ–ದೀರ್ಘಕೃತಿ :

ಪ್ರಗತಿಸಾಧನೆ ಒಂದು ಜೀವಮಾನದಲ್ಲಿ ಒಂದು ದಿವಸ ಮಾತ್ರದ ಕೆಲಸವಲ್ಲ. ಅದು ಪ್ರತಿದಿವಸವೂ, ಪ್ರತಿಕ್ಷಣವೂ, ಕೃಷಿಯಾಗುತ್ತಿರಬೇಕಾದದ್ದು. ನಮಗೆ ಬೇಕಾದ ಯಾವ ಒಳ್ಳೆಯದೂ ಒಂದು ದಿನದಲ್ಲಿ ಸಂಪಾದಿಸಿ ಯಾವಜ್ಜೀವವೂ ಅನುಭವಿಸಲಾಗುವಂಥಾದ್ದಲ್ಲ. ದೇಹಶುದ್ಧಿ, ಆರೋಗ್ಯ, ಸಂಪತ್ತು, ಸ್ನೇಹ, ಬಂಧು ಪ್ರೀತಿ –ಇವುಗಳಲ್ಲಿ ಪ್ರತಿಯೊಂದಕ್ಕಾಗಿಯೂ ನಾವು ಪ್ರತಿದಿನವೂ ಶ್ರಮ ಪಡಬೇಕು. ಸ್ನಾನಮಾಡಿದ ಕೆಲವು ಘಂಟೆಗಳ ಮೇಲೆ ಪುನಃ ಕೊಳೆ; ಊಟಮಾಡಿದ ಸ್ವಲ್ಪಹೊತ್ತಿನ ಮೇಲೆ ಮತ್ತೆ ಹಸಿವು; ವರಮಾನ ಬಂದ ಮಾರನೆಯ ದಿನ ತಿರುಗಿ ಬರಿಗೈ. ಆದದ್ದರಿಂದ ಪುನಃ ಸ್ನಾನ, ಮತ್ತೆ ಊಟ, ತಿರುಗಿ ವರಮಾನದ ಚಿಂತೆ. ಇದು ನಮ್ಮ ನಿತ್ಯದ ಪಾಡು. ಅದರಂತೆಯೇ ಪ್ರಗತಿಯ ಹಿಂದುಗೂಡಿ ಅಪಗತಿ; ಅದನ್ನು ನಿವಾರಿಸಲು ಪುನಃ ಪ್ರಗತಿ ಪ್ರಯತ್ನ, ಇದೇ ಮಾನವ ವಿಧಿ. ಸಂತತ ಪೌರುಷ, ಸಂತತ ಸಂಸ್ಕಾರಗಳೇ ನಮ್ಮ ನಿತ್ಯದ ಕರ್ತವ್ಯ.

ಏನಾದರಾಗಲಿ, ಮನುಷ್ಯನ ಕೈಯ ಯೋಜನೆ ಮಂಗನಕೈಯ ಹೂಮಾಲೆ. ಎಂಥ ಒಳ್ಳೆಯ ರಾಜ್ಯವ್ಯವಸ್ಥೆಯನ್ನೂ ಸಂಪದಭಿವೃದ್ಧಿಯನ್ನೂ ನಾವು ಕಲ್ಪಿಸಿಕೊಂಡರೂ, ಮನುಷ್ಯಸ್ವಭಾವದಲ್ಲಿಯ

ಯಾವುದೋ ಒಂದು ಗುಣ, ಅಥವಾ ದುರ್ಗುಣ, ಎದ್ದುಬಂದು, ಆ ನಮ್ಮ ಒಳ್ಳೆಯ ಏರ್ಪಾಟಿಗೆ ವಿಷಬೆರಸುತ್ತದೆ. ಮರದ ಮೇಲೆ ನಮ್ಮ ಕಣ್ಣು ಗುರಿಯಿಟ್ಟ ಕಾಯನ್ನೇ ನಮ್ಮ ಕೈಯಿಂದ ಹೊರಟ ಕಲ್ಲು ತಾಕುವುದೆಂಬ ಖಂಡಿತವಿಲ್ಲ. ನಾವು ಎಷ್ಟು ವಿವೇಕ, ಎಷ್ಟು ಹುಷಾರಿಗಳಿಂದ ಜೀವನ ಕಾರ್ಯವನ್ನು ನಿಭಾಯಿಸಿದರೂ, ಅಷ್ಟೋ ಇಷ್ಟೋ ಕಷ್ಟಶೇಷ ನಮ್ಮ ಪಾಲಿಗೆ ಉಳಿದೇ ಇರುತ್ತದೆ. ಇದು ಪ್ರಕೃತಿ ನಿಯಮ. ಎಂಥ ಒಳ್ಳೆಯ ಮೋಟಾರ್ ಗಾಡಿಯಾದರೂ ಅದನ್ನು ಉಪಯೋಗಿಸಿದಂತೆಲ್ಲ ಅದರ ಯಂತ್ರದ ಅಂಗಾಂಗಗಳು ಸವೆದು ಸಡಿಲವಾಗುವುದು ಸ್ವಾಭಾವಿಕ. ಸೂರ್ಯಗ್ರಹ ಚಂದ್ರಗ್ರಹ ಭೂಗ್ರಹಗಳೇ ಸುತ್ತಿ ಸುತ್ತಿ ಸ್ವಶಕ್ತಿಯನ್ನು ಕಳೆದುಕೊಳ್ಳುತ್ತಿವೆಯೆಂದು ಕೆಲವರು ವೈಜ್ಞಾನಿಕರು ಹೇಳುತ್ತಾರೆ. ಹಾಗೆ ನಮ್ಮ ಸಮಾಜ ವ್ಯವಸ್ಥೆಗಳೂ, ಸಂಪ್ರದಾಯಗಳೂ, ನೀತಿ ನಿಯಮಗಳೂ ಕಾಲಕ್ರಮದಲ್ಲಿ ಶಿಥಿಲವಾಗುವುದನ್ನು ಯಾರೂ ತಪ್ಪಿಸಲಾರರು. ಆದದ್ದರಿಂದ ನಾವು ಯಾವಾಗಲೂ ಕೊಂಚಮಟ್ಟಿಗಾದರೂ ಕಷ್ಟವನ್ನು ಎದುರಿಸಿ ಸಹಿಸಲು ಸಿದ್ಧರಾಗಿರಬೇಕು. ಸಂತತವಾದ ಕಷ್ಟನಿವಾರಣೆಯ ಪ್ರಯತ್ನ ಹೇಗೆ ನಮಗೆ ಕರ್ತವ್ಯವೋ, ಧೈರ್ಯಪರಿಪೂರ್ಣವಾದ ಕಷ್ಟ ಸಹನೆಯೂ ಹಾಗೆ ನಮಗೆ ನಿತ್ಯ ಕರ್ತವ್ಯವಾಗಿರುತ್ತದೆ. ಸಹನೆಯೂ ಪ್ರಯತ್ನವೂ ಬೇರೆ ಬೇರೆ ಎರಡು ಸ್ಥಿತಿಗಳಲ್ಲ. ಅವೆರಡೂ ಬೆರೆತು ಒಂದಾಗಬೇಕು. ಸಹನೆಯೆಂದರೆ ಕೈಕಟ್ಟಿಕೊಂಡು ಕೂಡುವುದಲ್ಲ; ಪ್ರಯತ್ನವೆಂದರೆ ಆವೇಶದ ಬಡಿದಾಟವಲ್ಲ. ಮನಸ್ಸಿನೊಳಗಡೆ ದ್ವೇಷ ಉದ್ವೇಗಗಳಿಲ್ಲದಿರುವುದೇ ಸಹನೆ; ಬುದ್ಧಿಯ ಒಳಗಡೆ ಉದಾಸೀನತೆ ಜಡತೆಗಳು ಸೇರದೆ ವಿವೇಚನೆ ಪ್ರೇರಣೆಗಳು ನಡೆಯುತ್ತ, ಹೊರಗಡೆ ಕಾರ್ಯಪರಂಪರೆಯಾಗುವುದೇ ಪ್ರಯತ್ನ, ಹೀಗೆ ಪುರುಷಪ್ರಯತ್ನವೆಂಬುದು ಒಂದು ಬಗೆಯ ಆತ್ಮಶಿಕ್ಷಣ.

ನಮ್ಮ ಬಾಳು ಒಂದು ಅಶ್ವತ್ಥ :

ನಮ್ಮ ಪುರಾತನರು ಜಗತ್ತನ್ನು ಅಶ್ವತ್ಥಕ್ಕೆ ಹೋಲಿಸಿದ್ದಾರೆ. ಅಶ್ವತ್ಥವು ಬಹುಕಾಲ ಬಾಳುವ ವೃಕ್ಷ. ನೂರಾರು ವರ್ಷ ಅದು ಬದುಕಿದರೂ ಅದು ಈ ದಿವಸ ಇದ್ದಂತೆ ನಾಳೆಯ ದಿವಸ ಇರುವುದಿಲ್ಲ. ಈ ಹೊತ್ತು ಚಿಗುರಿ ಸೊಂಪಾಗಿರುವ ಕೊಂಬೆ ಇನ್ನು ಕೆಲವು ದಿವಸದಲ್ಲಿ ಬೋಡಾಗಿ ಬಾಡುವಂತೆ ಕಾಣುತ್ತದೆ. ಈ ಹೊತ್ತು ಒಣಗಿ ಸತ್ತಂತೆ ತೋರುವ ಕೊಂಬೆಯನ್ನು ಇನ್ನು ಕೆಲವು ವಾರ ಬಿಟ್ಟು ನೋಡಿದರೆ ಅದರಲ್ಲಿ ಚೆಂದಳಿರು ಹೊಸದಾಗಿ ಒಡೆದಿರುತ್ತದೆ. ಜಗಜ್ಜೀವನದಲ್ಲಿಯೂ ಹಾಗೆಯೇ: ಒಂದು ಕಡೆ ಪ್ರಗತಿಕಾರಕವಾದ ವಿವೇಕ, ಯುಕ್ತಿ, ಅಭಿವೃದ್ಧಿ, ಉತ್ಸಾಹ. ಇನ್ನೊಂದು ಕಡೆ ಮನೋವೈಪರೀತ್ಯ, ಪ್ರಯತ್ನಭಂಗ, ನಿರುತ್ಸಾಹ. ಎಲ್ಲಿಯೂ ಅತ್ಯಾಶೆಗಳಿಗೆ ಜಾಗವಿಲ್ಲ; ಸಂಪೂರ್ಣ ನಿರಾಶೆಗೂ ಇಲ್ಲ. ಏಳುತ್ತ, ಬೀಳುತ್ತ, ಹೊರಳುತ್ತ, ಹರಡುತ್ತ, ಹೇಗೋ ಒಂದು ಬಗೆಯಾಗಿ ಮನುಷ್ಯಜೀವನವೆಂಬ ನದಿ ಸರ್ವಕಾಲಗಳಲ್ಲಿಯೂ ಮುಂದುಮುಂದಕ್ಕೆ ಹರಿಯುತ್ತಲೇ ಇರುತ್ತವೆ. ನಾವು ಎದೆಗುಂದುವುದೇತಕ್ಕೆ? ಆತ್ಮಶಿಕ್ಷಣಕ್ಕಾಗಿಯಾದರೂ, ಆತ್ಮಶಕ್ತಿಯ ಅಭ್ಯಾಸಾಭಿವೃದ್ಧಿಗೋಸ್ಕರವಾದರೂ, ಸಾಧ್ಯವಾದಷ್ಟು ಪ್ರಗತಿಯತ್ನವನ್ನು ಮಾಡೋಣ. ಅದರಲ್ಲಿ ಅತ್ಯಾಶೆ ಬೇಡ, ಉದ್ವೇಗ ಬೇಡ, ಆತುರ ಬೇಡ, ಆವೇಶ ಬೇಡ, ಪ್ರತಿಫಲ ನಿರೀಕ್ಷಣೆಯ ಅತಿ ಸಂಭ್ರಮ ಬೇಡ; ಹಾಗೆಯೇ ಆಲಸ್ಯವೂ ಬೇಡ; ಪ್ರಮತ್ತತೆ ಬೇಡ. ಪ್ರಕೃತಿಯ ಕಾರ್ಯದಂತೆ, ಸೂರ್ಯೋದಯದಂತೆ, ಗಿಡ ಚಿಗುರುವಂತೆ, ನಿರಾಡಂಬರವಾಗಿ, ಎಡೆಬಿಡದೆ ಸಾಗುತ್ತಿರಲಿ ನಮ್ಮ ವ್ಯವಸಾಯ.

ದೇವರೆಂಬುದು ಬೇರೆ ಇದ್ದರಿರಲಿ; ಇಲ್ಲದಿದ್ದರೂ ಪರವೆ ಇಲ್ಲ. ನಮ್ಮ ಜೀವನವಂತೂ ನಮಗೆ ಪ್ರತ್ಯಕ್ಷ ಸಂಗತಿ. ನಮ್ಮ ಜೀವನವೇ ನಮಗೆ ದೇವರ ಸ್ಮರಣೆ. ಹೀಗಿರಲಾಗಿ ಜೀವನವನ್ನು ದೈವಮಹಿಮೆಯ ಪ್ರತ್ಯಕ್ಷ ರೂಪವೆಂದು ನಾವು ಗೌರವಿಸಬೇಕಾದದ್ದು ಯುಕ್ತವಾಗಿಯೇ ಇದೆ. ಜೀವನವೂ ದೇವರು ಕೊಟ್ಟ ವರ; ಜೀವನವನ್ನು ಅಂದಗೊಳಿಸುವುದೇ ನಾವು ದೇವರಿಗೆ ಸಲ್ಲಿಸುವ ಕೃತಜ್ಞತೆ. ಜೀವನ ಸಮೃದ್ಧಿ–ಜೀವನ ಸಂಸ್ಕಾರ –ಜೀವನ ಸೌಂದರ್ಯ, ಇದು ಬರಿಯ ಐಹಿಕಾಸಕ್ತಿಯಲ್ಲ, ಚಾರ್ವಾಕತನವಲ್ಲ. ಭೋಗನಿಷ್ಠೆಯಲ್ಲ; ಅದು ವೇದವೇದಾಂತಗಳ ಸಾರಾಂಶ.

ಶೃಂಗೇರಿಯ ಜಗದ್ಗುರುಪೀಠದಿಂದ ವೇದವೇದಾಂತ ಧರ್ಮಗಳನ್ನೂ, ವಿಜಯನಗರ ರಾಜ್ಯದ ಮುಖ್ಯಮಂತ್ರಿ ಪೀಠದಿಂದ ಲೋಕಜೀವನವನ್ನೂ ಏಕಕಾಲದಲ್ಲಿ ಪರಿಪಾಲಿಸುತ್ತಿದ್ದ ಮಹಾನುಭಾವರಾದ ವಿದ್ಯಾರಣ್ಯರು–

ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಮ್

('ತತ್ತ್ವಜ್ಞಾನಿಯೇ ರಾಜ್ಯಭಾರ ಮೊದಲಾದ ಲೌಕಿಕಧರ್ಮಗಳನ್ನು ಚೆನ್ನಾಗಿ ನಡಸಬಲ್ಲವನು') ಎಂದು ಹೇಳಿದ್ದಾರೆ.

ವೇದಾಂತ ತತ್ತ್ವಕ್ಕೂ ಲೌಕಿಕ ವ್ಯವಹಾರಕ್ಕೂ ಅವಶ್ಯ ವಿರೋಧವೇನೂ ಇಲ್ಲವೆಂಬುದಕ್ಕೂ, ಆ ವೇದಾಂತಾಭ್ಯಾಸದ ಅತ್ಯುತ್ತಮ ಮಾರ್ಗವೇ ನಿಸ್ವಾರ್ಥ ಲೋಕಸೇವೆಯೆಂಬುದಕ್ಕೂ ಅವರ ಜೀವನವೇ ಸಾಕ್ಷಿಯಾಗಿದೆ.

ಬಾಳ್ವೆಗೆ ನಂಬಿಕೆ ಇದು :

ಜೀವನೋತ್ಸಾಹ, ಪೌರುಷಪ್ರಕಾಶ, ಲೋಕ ಸ್ನೇಹ–ಪ್ರಗತಿ, ವಿಜ್ಞಾನ, ಸೌಜನ್ಯ–ಈ ಮೂರು ನಮಗೆ ತಾರಕಮಂತ್ರಗಳು. ಇದಕ್ಕೆ ನಿದರ್ಶನವನ್ನು ನಮ್ಮ ಆದಿಕವಿ ವಾಲ್ಮೀಕಿಮಹರ್ಷಿ ಆಂಜನೇಯಾವತಾರದಲ್ಲಿ ತೋರಿಸಿದ್ದಾನೆ. ಸ್ವಾರ್ಥತ್ಯಾಗದ ದೈವಭಕ್ತಿ, ಪಾಲುಮಾರಿಕೆಯಿಲ್ಲದ ಪೌರುಷ ಸಂಧಾನ, ಉತ್ಸಾಹ ತುಂಬಿದ ಲೋಕಧರ್ಮಶ್ರದ್ಧೆ–ಈ ಮೂರು ಗುಣಗಳೂ ಹನುಮಂತನ ಚರಿತ್ರೆಯಲ್ಲಿ ಎದ್ದು ಕಾಣುವಂತೆ ಇನ್ನೆಲ್ಲಿಯೂ ಇಲ್ಲ. ಆ ಹನುಮಂತ ಮೂರ್ತಿ ಭಾರತೀಯರಿಗೆ ಗುರುವೂ ಧರ್ಮಾದರ್ಶವೂ ಆಗಿರಲಿ.

ನೋಡು ಹನುಮನನು–ಧೀರ ಗುರುವವನು ।
ಬೇಡು ನೀನವನ–ಪೌರುಷದ ವರವ ॥
ಏನವನ ಠೀವಿ–ಕಡುಗಲಿಯ ರೂಪು ।
ಮಾನಿಸಂಗಿಂತು–ನುಡಿಯುವಂತಿಹುದು ॥

***

"ಜಗವೆಲ್ಲ ರಾಮನದು–ದೇವನುದ್ಯಾನ ।
ಸೊಗವನದಕಾಗಿಪುದು–ಸೇವೆಯ ವಿಧಾನ ।
ದುಮ್ಮಾನಗಳ ತೊರೆದು–ಹುಮ್ಮಸ್ಸಿನಿಂದ ।
ನೆಮ್ಮಿ ಸ್ವಾಮಿಯ ನೀನು–ಒಮ್ಮನಸಿನಿಂದ ॥
ಬದುಕು ಚೆನ್ನವದೆನಿಸು–ಬಲುಮೆಯಿಂ ದುಡಿದು ।
ಮುದವ ತೀಡುತ, ಕೊಳುತ–ನಲುಮೆಯಲಿ ನಡೆದು ॥
ಸತ್ತ್ವ ನಿನ್ನೊಳಗಿಹುದು–ಬತ್ತದಿಹ ಚಿಲುಮೆ ।
ಯತ್ನಗಳ ಹೊಳೆಯಾಗಿ–ನಿತ್ಯ ಜೀವನದಿ ॥
ಹರಿಯುತಿರಲದು, ಮತಿಯ–ಶೋಧನಂಗಳಿಗೆ ।
ಪರಿಪರಿಯ ವಿಜ್ಞಾನ–ಸಾಧನಂಗಳಿಗೆ ॥
ಸಿರಿಯ ಪೆರ್ಚಿಸು, ಬಾಳ–ಸೊಗಸುಗಳ ಬೆಳಸು ।
ಧರಿಸಿ ಹೊಸ ನಗುಮುಖವ–ರಘುಪತಿಯ ತಣಿಸು ॥

ರಾಮನೆಲ್ಲರ ತಂದೆ–ಜಾನಕಿಯೆ ತಾಯಿ ।
ಭೂಮಿಯಾ ಜನವೆಲ್ಲ–ಅಣ್ಣತಮ್ಮಂದಿರು ॥
ಬಿಡು ಹಾಳು ಜಗಳಗಳ–ಮರೆ ಕೆಟ್ಟನುಡಿಯ ।
ತೊಡು ಸತ್ಯದ ವ್ರತವ–ತೊರೆ ದುಷ್ಟಕತೆಯ ॥
ಧರ್ಮಕ್ಕೆ ಹೋರಾಡು–ನ್ಯಾಯಕ್ಕೆ ಬಾಗು ।
ನಲ್ಮೆ ತೋರೆಲ್ಲರಿಗೆ–ಪ್ರೀಯ ಧರೆಗಾಗು ॥

ಎದೆ ತುಂಬಿರಲಿ ರಾಮನ್–ಇಳೆಯವನ ರಾಜ್ಯ ।
ಬದುಕವನೊಳುತ್ಸಾಹ–ಬಾಳ್ ಅವನ ಭೋಜ್ಯ ॥
ಒಂದು ಪೌರುಷದ ಕೈ–ಒಂದು ಧರ್ಮದ ಕೈ ॥
ಒಂದು ಪದ ವಿಜ್ಞಾನ–ಒಂದು ಸೌಜನ್ಯ ॥

***

ಇಂತೆನುವವೋಲೆಸೆವ–ಮಾರುತಿಯೆ ಗುರುವು ।
ಚಿಂತೆಗಳ ಬಿಟ್ಟವನ–ದಾರಿಯಲಿ ಚರಿಸು ॥
ಮನದಿ ರಾಮನ ನಿಲಿಸೊ–ಸನುಮತಿಯ ಬೆಳಗೋ ।
ಜನುಮ ಸಾರ್ಥಕವೆನಿಸೊ–ಹನುಮಂತ ಗುರುವೆ ॥

ಪರಿಶಿಷ್ಟ

ವಿಜ್ಞಾನದ ವಿಷಯದಲ್ಲಿ ಜಾಗರೂಕತೆ ಆವಶ್ಯಕ : ಪಾಶ್ಚಾತ್ಯ ಲೋಕದ ವಿಜ್ಞಾನ ಶಾಸ್ತ್ರಗಳು ಅದ್ಭುತಗಳಾದ ಜಯಗಳನ್ನು ಸಂಪಾದಿಸಿಕೊಂಡಿವೆ; ಎಷ್ಟೋ ಪ್ರಕೃತಿ ರಹಸ್ಯಗಳನ್ನು ಕೈವಶಮಾಡಿಕೊಂಡಿವೆ. ಆದರೆ

ಜೀವನದ ಮೂಲ ಪ್ರಶ್ನೆಗಳಿಗೆ ಉತ್ತರಕೊಡುವ ಚಿಹ್ನೆ ವಿಜ್ಞಾನದಿಗಂತದಲ್ಲಿ ಒಂದಷ್ಟೂ ತೋರಿಬರುತ್ತಿಲ್ಲ. ಮನುಷ್ಯನ ಜೀವನದ ಪ್ರಶ್ನೆಗಳು ಅಂತರಂಗದವು. ವಿಜ್ಞಾನದ ಸಾಹಸಗಳು ಬಹಿರಂಗದವು. ಎರಡೂ ಎಂದಿಗಾದರೂ ಒಂದು ಕಡೆ ಕಲೆಯುವುದು ಸಂಭವವೆಂದು ತೋರುತ್ತಿಲ್ಲ.

ಪ್ರತಿಯೊಂದು ವಿಜ್ಞಾನಶಾಸ್ತ್ರವೂ ಅರ್ಧಮರ್ಧದಲ್ಲಿ ನಿಂತಿದೆ. ಆ ಶಾಸ್ತ್ರಗಳಲ್ಲೆಲ್ಲಾ ಚಕ್ರವರ್ತಿಪ್ರಾಯವಾದ ಭೌತವಿಜ್ಞಾನದಲ್ಲಿ (Physics) ಪರಮಾಣುವಿನ (Atom) ರಚನೆ, ಅದರ ಅಂತಶ್ಶಕ್ತಿ ಮೊದಲಾದ ವಿಚಾರಗಳಲ್ಲಿ ಇನ್ನೂ ತಕರಾರುಗಳು ಎಷ್ಟೋ ಉಳಿದಿವೆ. ಜೈವವಿಜ್ಞಾನವಂತೂ ಇನ್ನೂ ವಸ್ತುವಿನ ಹೊರ ಅಂಚಿನಲ್ಲೇ ಸುತ್ತಾಡುತ್ತಿದೆ. ಮನಶ್ಶಾಸ್ತ್ರವು ತೀರಾ ಪರದಾಟದಲ್ಲಿದೆ. ಕಟ್ಟಕಡೆಯ ಸಿದ್ಧಾಂತವು ಎಲ್ಲೂ ಹತ್ತಿರವಿರುವಂತೆ ಇಲ್ಲ.

ಜಡವಸ್ತುವಿನಿಂದ–ಮಣ್ಣು, ನೀರು, ಗಾಳಿಗಳಿಂದ–ಜೀವ ತಯಾರಾದದ್ದು ಹೇಗೆ? ಪ್ರಾಣದಿಂದ ಮನಸ್ಸು ಹುಟ್ಟಿದ್ದು ಹೇಗೆ? ಈ ಎರಡೂ ಮೂಲಭೂತ ಪ್ರಶ್ನೆಗಳು: (೧) ಪ್ರಾಣದ ಉತ್ಪತ್ತಿ, (೨) ಮನಸ್ಸಿನ ಉತ್ಪತ್ತಿ. ಈ ಎರಡೂ ಇನ್ನೂ ರಹಸ್ಯಗಳಾಗಿಯೇ ಉಳಿದುಕೊಂಡಿವೆ.

ಈ ನಾನಾ ವಿಜ್ಞಾನಗಳ ಪಾಡು ಹೇಗಿದೆಯೆಂದರೆ–ಬಾವಿಯಲ್ಲಿ ಮೇಲ್ತಳದಿಂದ ಅರವತ್ತು ಅಡಿ ಆಳದಲ್ಲಿ ನೀರಿರುವಾಗ, ಅರವತ್ತೇ ಅಡಿಯ ಹಗ್ಗವಿದ್ದರೆ ಅದು ಏನನ್ನು ಮಾಡಬಲ್ಲದು? ಮಡಕೆಯ ಕೆಳತಳವು ನೀರಿನ ಮೇಲ್ತಳವನ್ನು ಸೋಕುತ್ತದೆ. ಆದರೆ ನೀರೊಳಕ್ಕೆ ಮುಳುಗಿ ಮೇಲಕ್ಕೆ ನೀರನ್ನೆತ್ತಿ ತರಲಾರದು. ಅಂಥ ಮೊಟಕಾದ ಸೇದುವ ಹಗ್ಗದಂತೆ ಇವೆ ನಾನಾ ವಿಜ್ಞಾನಗಳು. ಅವು ನಮ್ಮ ಜೀವನದ ಹೊರಮೈಯನ್ನು ಮಾತ್ರ ಅಲ್ಲಲ್ಲಿ ಮುಟ್ಟಬಲ್ಲವು. ವಿದ್ಯುಚ್ಛಕ್ತಿ, ವಾಯುವಿಮಾನ, ವೈದ್ಯಕ ಧಾತು–ದ್ರಾವಕಗಳು–ಇವೆಲ್ಲ ನಮ್ಮ ಜೀವನದ ಹೊರ ಭಾಗವನ್ನು ಅಷ್ಟಿಷ್ಟು ಸೋಕಿ ಬದಲಾಯಿಸುತ್ತವೆ. ಆದರೆ ಜೀವನದ ಒಳಕ್ಕೆ ಹೋಗಲಾರವು.

ವಿಜ್ಞಾನದ ಸ್ಥಿತಿ ಹೀಗೆ ಇನ್ನೂ ಅಪಕ್ವ, ಅರ್ಧಪಕ್ವವಾಗಿ, ಅವುಗಳ ಸಿದ್ಧಾಂತಗಳು ಇನ್ನೂ ಅಪೂರ್ಣವಾಗಿ ಅಸ್ಪಷ್ಟವಾಗಿ ಇರುವ ಈಗಿನ ಸಂದರ್ಭದಲ್ಲಿ ನಮ್ಮ ದೇಶದ ನವನಾಗರಿಕರೂ ರಾಜಕೀಯ ನಾಯಕರೂ ಅರ್ಧಜ್ಞಾನವನ್ನೇ ಸಂಪೂರ್ಣ ಜ್ಞಾನವೆಂದು ನಂಬಿಕೊಂಡು ನಮ್ಮ ಸಮಾಜದ ಸಂಪ್ರದಾಯಗಳನ್ನೂ ಜೀವನ ವಿಧಾನಗಳನ್ನೂ ಬದಲಾಯಿಸ ಹೊರಟಿರುವುದು ನಮ್ಮ ಕಾಲದ ಅನಾಹುತಗಳಲ್ಲಿ ದೊಡ್ಡದು. ವಿವಾಹ ಮೊದಲಾದ ಅನಾದಿಸಿದ್ಧವಾದ ಸಂಸ್ಕಾರಗಳು ಯಾವ ವಿಜ್ಞಾನ ಸೂತ್ರಗಳನ್ನು ಆಧಾರ ಮಾಡಿಕೊಂಡು ನಿಂತಿವೆ–ಎಂಬುದನ್ನು ವಿಚಾರಮಾಡದೆಯೇ ಕಾನೂನುಬಲದಿಂದ ಬದಲಾಯಿಸಹೊರಡುವುದು ವಿಜ್ಞಾನದ ದಾರಿಯಲ್ಲ. ಅದು ತೀರಾ ಅವಿಜ್ಞಾನ. ವಿವಾಹವೆಂಬ ಸಂಸ್ಕಾರವು ಹತ್ತಾರು ದೇಹಾರೋಗ್ಯ ಸೂತ್ರಗಳನ್ನೂ ಗೃಹಸಂಪತ್ತಿನ ಸೂತ್ರಗಳನ್ನೂ ವಂಶಾಭ್ಯುದಯದ ಸೂತ್ರಗಳನ್ನೂ ಅವಲಂಬಿಸಿಕೊಂಡು ಬೆಳೆದು ಬಂದಿದೆ. ಪುರಾತನರು ಸಹಸ್ರಾರು ವರ್ಷಗಳಿಂದ ಆ ಸೂತ್ರಸಂಪ್ರದಾಯಗಳಲ್ಲಿ ಗುಣ ಕಂಡಿದ್ದಾರೆ. ಇಂದಿನವರು "ಪೂರ್ವಿಕರಿಗೆ ವಿಜ್ಞಾನ ತಿಳಿದಿರಲಿಲ್ಲ. ನಾವು ವಿಜ್ಞಾನ ಪಾರಂಗತರು; ಆದದ್ದರಿಂದ ನಾವು ಪೂರ್ವಸಂಪ್ರದಾಯವನ್ನು ಇಷ್ಟತೋರಿದಂತೆ ಬದಲಾಯಿಸಲು ಅಧಿಕಾರಿಗಳಾಗಿದ್ದೇವೆ" – ಎಂದು ಭಾವಿಸುವುದು ಬರಿಯ ಅಹಂಭಾವವೇ ಹೊರತು ಎಷ್ಟು ಮಾತ್ರವೂ ವಿಜ್ಞಾನಬುದ್ಧಿಯಲ್ಲ. ಬದಲಾವಣೆ ಅನಾವಶ್ಯಕವೆಂದಲ್ಲ. ಬದಲಾವಣೆ ಆವಶ್ಯಕವೇ ಇರಬಹುದು. ಆದರೆ ವಿಚಾರಪೂರ್ವಕವಾದದ್ದಾಗಿರಬೇಕು; ನಿಜವಾದ ವಿಜ್ಞಾನ ಶೋಧನೆಯ ಆಧಾರದ

ಮೇಲೆ ಮಾಡಿದ್ದಾಗಿರಬೇಕು. ಎಂದರೆ, ಅರ್ಧ ವಿಜ್ಞಾನವನ್ನು ಪೂರ್ಣ ಜ್ಞಾನವೆಂದು ಭ್ರಾಂತಿಪಡುವುದು ವಿಜ್ಞಾನದ ದಾರಿಯಲ್ಲ. ಅಜ್ಞಾನದ ದಾರಿ.

ಸಮಾಜ ಸಂಪ್ರದಾಯಗಳನ್ನು ಬದಲಾಯಿಸುವೆವೆಂದು ಕೇವಲ ರಾಜಕೀಯಸ್ಥರು ದುಡುಕಿದಾಗ ಅದಕ್ಕೆ ಎದುರು ನಿಂತು ಪ್ರತಿಭಟಿಸುವುದು ಸಂಪ್ರದಾಯಸ್ಥರಿಗೆ ಹೇಗೋ ನಿಜವಾದ ವೈಜ್ಞಾನಿಕರಿಗೂ ಹಾಗೆಯೇ ಅವಶ್ಯ ಕರ್ತವ್ಯವಾಗಿರುತ್ತದೆ.

ಭದ್ರಂ ಕರ್ಣೇಭಿಃ ॥ ಶರೀರಂ ಮೇ ವಿಚರ್ಷಣಂ ॥ ಪಶ್ಯೇಮ ಶರದಶ್ಶತಂ ॥ ಇತ್ಯಾದಿ ತೈತ್ತಿರೀಯಕ ವಾಕ್ಯಗಳು.

ವನಪರ್ವಾಂತರ್ಗತ ಆರಣೇಯ ಪರ್ವ, ಅ. ೩೧೩-೭೦

ಇದನ್ನು ಹೀಗೆಯೂ ಹೇಳುವುದುಂಟು:

ಮಾತಾ ಚ ಗಿರಿಜಾದೇವೀ ।
ಪಿತಾ ದೇವೋ ಮಹೇಶ್ವರಃ ॥
ಬಾಂಧವಾ ಶಿವಭಕ್ತಾಶ್ಚ ।
ಸ್ವದೇಶೋ ಭುವನತ್ರಯಂ ॥